

ಐಕ್ಯರಂಗ

ದುಡಿವ ಜನರ ಪ್ರಾಣ ಮಿತ್ರ


ಸಂಪುಟ 25 ಸಂಚಿಕೆ 13
ಮಾರ್ಚ್ 30, 2003 ಬೆಲೆ ರೂ. 3.00




ನಿಲ್ಲಿಸಿ ತೈಲದಾಹದ ಈ ಬರ್ಬರ ಯುದ್ಧ




ಜಗತ್ತಿನೆಲ್ಲೆಡೆ ಪ್ರತಿಭಟನೆ... AP







ಅಂತೋಣಿ ಸರ್ಕಾರ: ಆದಿವಾಸಿಗಳ ಮೇಲೆ ಅಮಾನುಷ ದಮನ




ಕೃಷ್ಣರವರ ಪಲಾಯನವಾದಿ ಬಜೆಟ್

ಬೀಡಿ ಕಾರ್ಮಿಕರ ಭವಿಷ್ಯವೆಂತು?

ವಿಮೋಚನಾ ಸಮರದಲ್ಲಿ....

ಮೇಜರ್ ಜಯಪಾಲ್ ಸಿಂಗ್



ಆತ್ಮಕಥನ 20

ಬ್ರಿಟಿಷ್ ಜನರಲ್‌ಗಳು ನೇತಾಜಿ ನೇತೃತ್ವದ ಐಎನ್‌ಎ ಸೈನಿಕರಿಗೆ ಅಸಹನೀಯ ಕಿರುಕುಳ ಕೊಟ್ಟರು. ಕ್ರೌರ್ಯ ಮೆರೆದದ್ದನ್ನು ಹಿಂದಿನ ಸಂಚಿಕೆಯಲ್ಲಿ ಮೇಜರ್ ವಿವರಿಸಿದ್ದಾರೆ. ದೇಶದ ಜನರ ರಕ್ತದಿಂದ ತೊಯ್ದ ಬೆರಳುಗಳೇ ಈಗ ನಮ್ಮ ಸೇನಾ ಯೋಜನೆಯ ಸ್ವರೂಪದ ಮೇಲೆ ಆಡುತ್ತಿವೆ ಎನ್ನುತ್ತಾರೆ ಅವರು. ಐಎನ್‌ಎ ಸೈನಿಕರನ್ನು ಬಂಧಿಸಿ, ಕೀಳಾಗಿ ನಡೆಸಿಕೊಳ್ಳುತ್ತಿದ್ದುದನ್ನು ಅತ್ಯಂತ ಖೇದದಿಂದ ವಿವರಿಸುತ್ತಾರೆ. ಮುಂದೆ ಓದಿ.....



ಕನ್ನಡಕ್ಕೆ: ವಿಶ್ವ ಕುಂದಾಪುರ

ವಿಷಣ್ಣತೆಯ ಪರಾಕಾಷ್ಠೆ

ಜುಲೈನಲ್ಲಿ, ತ್ರಾಸದಾಯಕವಾದ ಮಾಮೂಲಿ ಕಾರ್ಯಾಚರಣೆ ಮತ್ತು ಸಂಘಟನಾ ಚಟುವಟಿಕೆಗಳ ಒತ್ತಡವನ್ನು ತಡೆದುಕೊಳ್ಳಲು ಆಗಲಿಲ್ಲ. ಒಂದು ದಿನ ಬೆಳಿಗ್ಗೆ ಡರ್ಗಾನ್ ವಾರ್‌ಫೀಲ್ಡ್‌ನಲ್ಲಿ ಕುಸಿದುಬಿದ್ದೆ. ಗೋಲಾಘಾಟ್ ಆಸ್ಪತ್ರೆಗೆ ನನ್ನನ್ನು ಒಯ್ಯಲಾಯಿತು. ಮರುದಿನ ವಿಮಾನದಲ್ಲಿ ಕಲ್ಕತ್ತೆಗೆ ಕರೆದುಕೊಂಡು ಹೋದರು. ಅಲ್ಲಿಂದ ಅಂಬುಲೆನ್ಸ್ ರೈಲಿನಲ್ಲಿ ಖರೇಲಿ ಆಸ್ಪತ್ರೆಗೆ ಒಯ್ಯಲಾಯಿತು. ಅತ್ತ ರಣರಂಗದಲ್ಲಿ ಐಎನ್‌ಎ ಮತ್ತು ಜಪಾನಿಯರು ಹಿನ್ನಡೆಯುತ್ತಿದ್ದರು. ಕೋರಿಯಾ ಮತ್ತು ಇಂಫಾಲ್ ಮುತ್ತಿಗೆಯನ್ನು ವಾಪಸ್ ಪಡೆಯಲಾಯಿತು. ವೈಮಾನಿಕ ಸರಬರಾಜು ಇತಿಹಾಸದಲ್ಲಿ ತನ್ನ ಮೊದಲ ಸಮರ ಜಯವನ್ನು ಸಾಧಿಸಿತು. ನನ್ನನ್ನು ಗುಣಪಡಿಸಲು ಹಾಗೂ ರಣರಂಗಕ್ಕೆ ಪುನಃ ಕರೆದೊಯ್ಯಲು ಸತತ ಪ್ರಯತ್ನ ನಡೆಸಲಾಯಿತು. ವೈಮಾನಿಕ ಸರಬರಾಜು ಕಾರ್ಯಾಚರಣೆ ತಜ್ಞರಲ್ಲಿ ನಾನೂ ಒಬ್ಬನೆಂದು ಪರಿಗಣಿತನಾದೆ. ಕರ್ನಲ್ ಕಾಥ್ರಾಸ್ ಗರಿಮೆಯಲ್ಲಿ ನನಗೂ ಪಾಲು ದೊರಕಿದಂತಾಯಿತು.

ಬರೇಲಿಯಲ್ಲಿ ನನ್ನ ಸ್ಥಿತಿ ಹದಗೆಟ್ಟಿತು. ವೈದ್ಯರು ಮತ್ತು ನರ್ಸ್‌ಗಳು ನನ್ನನ್ನು ನಿರ್ಲಕ್ಷಿಸಿದರು. ಜನಾಂಗ ತಾರತಮ್ಯ ಎಸಗಿದರು. ಸ್ಪ್ರೂ ರೋಗ (ಅತಿಸಾರ ರೋಗ) ಗುಣಪಡಿಸಲಾಗದ ಒಂದು ವ್ಯಾಧಿ. ಈ ಬಗ್ಗೆ ಗೊತ್ತಿರುವ ಕೆಲವೇ ಕೆಲವು ವೈದ್ಯರಿದ್ದರು. ನಾನು ಹಾಸಿಗೆಯಲ್ಲಿ ಬಿದ್ದೇ ಇದ್ದೆ, ಈಗಲೋ ಆಗಲೋ ಸಾಯುವ ನಿರೀಕ್ಷೆಯಲ್ಲಿ. ಅದೊಂದು ಭಯಾನಕ ಅನುಭವ. ನಾನು ಬದುಕಿದ್ದು ಈ ಯುದ್ಧದ ನಂತರ ನನ್ನ ದೇಶಕೆ ಏನಾಗಬಹುದು ಎಂದು ಕಾಣುವ ಹಂಬಲ ನನ್ನಲ್ಲಿ ಅದಮ್ಯವಾಗಿತ್ತು.

ನನ್ನನ್ನು ಪೂನಾ ಆಸ್ಪತ್ರೆಗೆ ಸಾಗಿಸಲು ಬರೇಲಿಯ ವೈದ್ಯಕೀಯ ಮಂಡಳಿ ನಿರ್ಧರಿಸಿತು. ಗುಣಪಡಿಸಲಾಗದ ಪ್ರಕರಣಗಳ ಅಂತಿಮ ತಪಾಸಣೆಗೆ ಇಲ್ಲಿಗೆ ಕಳಿಸಲಾಗುತ್ತಿತ್ತು. ಇಲ್ಲಿಯೂ ಏನೂ ಆಗಲಿಲ್ಲವೆಂದರೆ ಸೇವೆಯಿಂದ ಕಿತ್ತೊಗೆಯಲಾಗುತ್ತಿತ್ತು. ನವೆಂಬರ್‌ನ ತಣ್ಣಗಿನ ಒಂದು ಸಂಜೆ ಅಂಬುಲೆನ್ಸ್ ಬರೇಲಿಯಿಂದ ಹೊರಟಿತು. ಉತ್ತರ ಭಾರತದ ಮೈಕೊರೆಯುವ ಚಳಿ ನನ್ನ ಒಣ ಮೂಳೆಗಳಿಗೆ ಅಪಾರ ವೇದನೆ ಉಂಟುಮಾಡಿತು. ಸ್ಟ್ರೆಚರ್ ಹಿಡಿದವರು ನನ್ನನ್ನು ರೈಲಿನೊಳಗೆ ಇಟ್ಟರು. ವಯಸ್ಸಾದ ಇಂಗ್ಲಿಷ್ ನರ್ಸ್ ನನ್ನತ್ತ ನೋಡಿದಳು. ಸ್ಪ್ರೂ ಪ್ರಕರಣ ! ಎಂದು ಉದ್ಗರಿಸಿದ ಆಕೆ ಹದ್ದುಮೀರಿ ಮಾತನಾಡಿದಳು. ಆ ಕರುಣಾಳು ಕ್ರಿಸ್ತ ನಿನ್ನನ್ನು ತನ್ನ ಮಡಿಲಿಗೆ ಸೇರಿಸಿಕೊಳ್ಳಲಿ ಎಂದು ಹೇಳಿದಳು.

ಅತ್ತ ಬರ್ಮಾ ರಂಗದಲ್ಲಿ ಸ್ಟಿಟ್‌ವೆಲ್ ಹೇಳಿಕೆಯೊಂದನ್ನು ಹೊರಡಿಸಿ ಭಾರತೀಯ ಅಧಿಕಾರಿಗಳು ಉತ್ತಮರಲ್ಲ ಎಂದು ಹೇಳಿದರು. ಅಂದರೆ ಬ್ರಿಟೀಷ್ ಸಾಮ್ರಾಜ್ಯಶಾಹಿಗಳು ಯುದ್ಧದ ನಂತರ ನಮ್ಮ ದೇಶವನ್ನು ಹೇಗೆ ಹದ್ದುಬಸ್ತಿನಲ್ಲಿಟ್ಟು ಕೊಳ್ಳಬೇಕೆಂದು ತಂತ್ರವನ್ನು ಹೆಣೆಯುತ್ತಿದ್ದರು. ನಾನು ಆಕೆಯತ್ತ ತುಂಬಾ ಒರಟಾಗಿ ಕೈಬೀಸಿದೆ. ಸಾಯದಿರಲು ನಾನು ನಿಶ್ಚಯಿಸಿದ್ದೆ. ಜನರಲ್‌ರ ತಮ್ಮ ಕ್ಯಾಪ್ಟನ್ ತಿಮ್ಮಯ್ಯ ನನ್ನ ಪಕ್ಕದ ಹಾಸಿಗೆಯಲ್ಲಿದ್ದರು. ಗುಂಡಿನ ಚೂರು ಹೊಕ್ಕು ಅವರ ಕಾಲು ತೀರಾ ಘಾಸಿಗೊಂಡಿತ್ತು. ನನ್ನ ಬಗ್ಗೆ ಸಹಾನುಭೂತಿ ವ್ಯಕ್ತಪಡಿಸಿದರು. ನಿನ್ನ ತಂದೆ ಈಗ ನಿವೃತ್ತರಾಗಿದ್ದಾರೆ ಎಂದು ತಿಳಿಸಿದರು. ಆಗ್ರಾದ ರೆಜಿಮೆಂಟ್‌ನ ತರಬೇತಿ ಕೇಂದ್ರದ ಇತ್ತೀಚಿನ ಮಾಹಿತಿಯನ್ನು ನೀಡಿದರು. ಸೋದರ ಈಗ ಬರ್ಮಾ ರಂಗದಲ್ಲಿ ಬ್ರಿಗೇಡ್ ಒಂದರ ನೇತೃತ್ವ ವಹಿಸಿದ್ದಾರೆ ಎಂದರು.

ರೆಜಿಮೆಂಟ್ ಜತೆಗಿನ ನನ್ನ ಬಾಲ್ಯದ ಬಾಂಧವ್ಯವನ್ನು ನೆನೆದು ಖುಷಿಯಾಯಿತು. ಭಾರತೀಯ ಸೇನೆಯ ಇಬ್ಬರು ಜನರಲ್‌ಗಳಾದ ಶ್ರಿಂಗೇಶ್ ಮತ್ತು ತಿಮ್ಮಯ್ಯ ಈ ರೆಜಿಮೆಂಟ್ ಗುಂಪಿನಿಂದ ಬಂದವರಾಗಿದ್ದರು.

ವಿಷಣ್ಣತೆಯ ಪರಾಕಾಷ್ಠೆ

ಉತ್ತರದ ಚಳಿಯ ಸಂಜೆಗಿಂತ ಬೇರೆ ವಿಷಣ್ಣವಾದ ಯಾವುದನ್ನು ನನ್ನ ಜೀವನದಲ್ಲಿ ನಾನು ಎದುರಿಸಲಿಲ್ಲ. ಕೊರೆಯುವ ಕುಳಿರ್ಗಾಳಿ, ಹಿಮಾಲಯ ಪರ್ವತದ ತಣ್ಣನೆ ಗಾಳಿಯ ಜತೆ ಸೇರಿ ಮನೆಯ ಒಳಗೆ ಇರುವವರನ್ನು ಬಾಧಿಸುತ್ತದೆ. ದಿಗಂತದಲ್ಲಿ ಕಾಲ್ಪನಿಕ ಕರಾಳ ಕತ್ತಲು ಕವಿಯುತ್ತದೆ.

ಅಂಥ ಒಂದು ಸಂಜೆ, ಕೋಣೆಯ ಕಿಟಕಿಗಳನ್ನು ಮುಚ್ಚಲಾಗಿತ್ತು. ನನ್ನ ವೇದನೆ ಅಸಹನೀಯವಾಗಿತ್ತು. ಯುದ್ಧದಲ್ಲಿ ಗಾಯಗೊಂಡ ನೂರಾರು ಜನರು, ಅವರ ಆಕ್ರಂದನ ರೈಲಿನ ಬೋಗಿಗಳನ್ನು ತುಂಬಿಹೋಗಿತ್ತು. ರಸಿಕೆಯ ವಾಸನೆ ಔಷಧದ ವಾಸನೆ ಮೂಗನ್ನು ಅಪ್ಪಳಿಸುತ್ತಿತ್ತು. ಗಾಯಾಳುಗಳ ಬಗ್ಗೆ ಸಿಬ್ಬಂದಿ ನಡೆದುಕೊಳ್ಳುತ್ತಿದ್ದ ರೀತಿ ನೋಡಿದಾಗ ಮಾನವೀಯತೆಯ ಮಾರಣ ಹೋಮವಾದಂತೆ ಅನಿಸುತ್ತಿತ್ತು. ಯುದ್ಧದ ಘೋರ ಅಸಹ್ಯತೆ ಮತ್ತು ನಿಷ್ಫಲತೆಯ ಭಾವನೆ ನನ್ನ ಮನಸ್ಸಿನ ತುಂಬ ತುಂಬಿಕೊಂಡಿತು.

(ಮುಂದುವರಿಯುವುದು)

ಇರಾಕ್ ಮೇಲಿನ ಅಮೆರಿಕಾದ ನಗ್ನ ಆಕ್ರಮಣ ವಿರೋಧಿಸಿ ಪ್ರತಿಭಟನೆ

ಭಾರತ ಕಮ್ಯುನಿಸ್ಟ್ ಪಕ್ಷ (ಸಿಪಿಐ), ಭಾರತ ಕಮ್ಯುನಿಸ್ಟ್ ಪಕ್ಷ ಮಾರ್ಕ್ಸ್‌ವಾದಿ (ಸಿಪಿಐ-ಎಂ) ಹಾಗೂ ಇನ್ನಿತರ ಹಲವು ಸಂಘಟನೆಗಳ ನೇತೃತ್ವದಲ್ಲಿ ಬೆಂಗಳೂರು ನಗರದಲ್ಲಿ ಇರಾಕ್ ದೇಶದ ಮೇಲೆ ಅಮೇರಿಕಾ ನಡೆಸಿರುವ ನಗ್ನ ಆಕ್ರಮಣವನ್ನು ಖಂಡಿಸಿ ಮಾರ್ಚ್ 22 ರಂದು ಪ್ರತಿಭಟನಾ ಮೆರವಣಿಗೆ ನಡೆಸಲಾಯಿತು. ಯುದ್ಧ ವಿರೋಧಿ, ಸಾಮ್ರಾಜ್ಯಶಾಹಿ ವಿರೋಧಿ ಘೋಷಣೆಗಳೊಂದಿಗೆ ನೂರಾರು ಕಾರ್ಯಕರ್ತರು ನಗರದ ಕಬ್ಬನ್‌ಪಾರ್ಕ್ ಬಳಿಯಿಂದ ಟೌನ್ ಹಾಲ್‌ವರೆಗೆ ಪ್ರತಿಭಟನೆ ನಡೆಸಿ, ದುರಾಕ್ರಮಣ ಕೋರ ಜಾರ್ಜ್ ಬುಷ್ ಪ್ರತಿಕೃತಿಗೆ ದೊಣ್ಣೆ ಸೇವೆ ಸಲ್ಲಿಸಿ, ಬೆಂಕಿ ಇಟ್ಟು ಸುಟ್ಟರು. ಪ್ರತಿಭಟನೆಯಲ್ಲಿ ಮಕ್ಕಳು, ಮಹಿಳೆಯರೂ ಗಣನೀಯ ಸಂಖ್ಯೆಯಲ್ಲಿ ಪಾಲ್ಗೊಂಡಿದ್ದರು.

ಈ ಸಂದರ್ಭದಲ್ಲಿ ಮಾತನಾಡಿದ ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಜಿ.ಎನ್. ನಾಗರಾಜ್‌ರವರು, ಅಮೆರಿಕಾದ ಯುದ್ಧ ಅದು ಸಾರುತ್ತಿರುವ ಉದ್ದೇಶಕ್ಕಾಗಿ ಅಲ್ಲ 'ತೈಲ'ದ ಮೇಲೆ ಏಕಸ್ವಾಮ್ಯ ಸ್ಥಾಪಿಸುವ ಸಾಮ್ರಾಜ್ಯಶಾಹಿ ಸಂಚಿನ ಫಲವೇ ಈ ಯುದ್ಧ ಎಂಬುದು ಜಗತ್ತಿಗೆ ಗೊತ್ತಿದೆ. ಹಿಂದೆ ವಿಯೆಟ್ನಾಂ ದೇಶದ ಮೇಲೆ ಅಮೆರಿಕಾ ಆಕ್ರಮಣ ನಡೆಸಿದ ನಂತರವಷ್ಟೇ ಯುದ್ಧ ವಿರೋಧಿ ಚಳುವಳಿ ಹರಡಿತು. ಆದರೆ ಇಂದು ಯುದ್ಧ ಆರಂಭಕ್ಕೆ ಮುಂಚೆಯೇ ಜಗತ್ತಿನ ಕೋಟಿ ಕೋಟಿ ಜನ ಯುದ್ಧ ವಿರೋಧಿ ಚಳುವಳಿಗೆ ಧಾವಿಸುತ್ತಿದ್ದಾರೆ. ವಿಶ್ವ ಸಂಸ್ಥೆಯ ಭದ್ರತಾ ಮಂಡಳಿ ಯುದ್ಧಕ್ಕೆ ಒಪ್ಪಿಗೆ ನೀಡಲಿಲ್ಲ. ಇದು ಒಂದು ಉತ್ತಮ ಬೆಳವಣಿಗೆ, ಆದರೆ ದುಷ್ಟ ಅಮೆರಿಕಾ ಇಡೀ ಜಗತ್ತಿನ ಅಭಿಪ್ರಾಯಗಳನ್ನು ಧಿಕ್ಕರಿಸಿ ತೈಲಕ್ಕಾಗಿ ರಕ್ತ ಹರಿಸುತ್ತಿದೆ ಎಂದರು.

ಇರಾಕ್ ಮೇಲೆ ಅಮೆರಿಕಾ ನಡೆಸುತ್ತಿರುವುದು ನಗ್ನ ಆಕ್ರಮಣ. ಅದೊಂದು ದರೋಡೆ, ಪ್ರಜಾಪ್ರಭುತ್ವದ ರಕ್ಷಕ ತಾನು ಎನ್ನುವ ಅಮೆರಿಕಾ, ಅದು ನಿಜವೇ ಆಗಿದ್ದರೆ ಅಸಂಖ್ಯಾತ ಜನರ ಯುದ್ಧ ವಿರೋಧಿ ಧಿಕ್ಕಾರಗಳನ್ನು ಕೇಳಿ ಬಾಲಮುದುರಿಕೊಳ್ಳಬೇಕಿತ್ತು. ಪರಿಸ್ಥಿತಿ ಅದಕ್ಕೆ ವಿರುದ್ಧವಾಗಿದೆ. ಬ್ರಿಟನ್‌ನ ಪ್ರಧಾನಿ ಟೋನಿ ಬ್ಲೇರ್, ಜಾರ್ಜ್‌ಬುಷ್ ಕೈ ತೋರಿದ ಕಡೆ ಬೊಗಳುವ ನಾಯಿ. ಬಿಜೆಪಿ ನೇತೃತ್ವದ ನಮ್ಮ ಭಾರತ ಸರ್ಕಾರ ಯುದ್ಧ ವಿರೋಧಿಸುವ ದಿಟ್ಟತನ ತೋರುತ್ತಿಲ್ಲ. ಇಂದು ಬಾಗ್ದಾದ್ ಕಡೆ ಇರುವ ಅಮೆರಿಕಾ ಗುರಿ ನಾಳೆ ದೆಹಲಿ ಕಡೆಗೆ ತಿರುಗುತ್ತದೆ ಎಂದು ಖ್ಯಾತ ಚಿಂತಕ ಡಾ. ಜಿ.ರಾಮಕೃಷ್ಣ ಎಚ್ಚರಿಸಿದರು.

ಸಿಪಿಐನ ರಾಜ್ಯ ಕಾರ್ಯದರ್ಶಿ ಡಾ. ಸಿದ್ದನಗೌಡ ಪಾಟೀಲ್ ಮಾತನಾಡಿ ಅಮೆರಿಕಾ ಯುದ್ಧ ಅದು ಮನುಷ್ಯತ್ವ ವಿರೋಧಿ ಯುದ್ಧ, ಜೀವ ವಿರೋಧಿ ಯುದ್ಧ ಎಂದು ಖಂಡಿಸಿದರು.

ಜನವಾದಿ ಮಹಿಳಾ ಸಂಘಟನೆಯ ರಾಜ್ಯ ಕಾರ್ಯದರ್ಶಿ ಕೆ.ಎಸ್.ವಿಮಲ, ಟಿಪ್ಪು ಸ್ಮಾರಕ ಸಮಿತಿಯ ಶಫೀ ಉಲ್ಲಾ ಮುಂತಾದವರು ಈ ಸಂದರ್ಭದಲ್ಲಿ ಮಾತನಾಡಿದರು. ಸಭೆಯ ಸ್ವಾಗತವನ್ನು ಸಿಪಿಐನ ಜಿಲ್ಲಾ ಕಾರ್ಯದರ್ಶಿ ಹರಗೋವಿಂದ ಮತ್ತು ವಂದನಾರ್ಪಣೆಯನ್ನು ಸಿಪಿಐ(ಎಂ)ನ ಜಿಲ್ಲಾ ಕಾರ್ಯದರ್ಶಿ ಕೆ.ಪ್ರಕಾಶ್ ಮಾಡಿದರು.

ಕಾರ್ಯಕ್ರಮದಲ್ಲಿ ಸಿಪಿಐ(ಎಂ)ನ ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯರಾದ ನಿತ್ಯಾನಂದ ಸ್ವಾಮಿ, ಜಿ.ಸಿ.ಬಯ್ಯಾರೆಡ್ಡಿ, ಎಸ್.ವೈ.ಗುರುಶಾಂತ್, ಪ್ರಸನ್ನ ಕುಮಾರ್ ಜಿಲ್ಲಾ ಕಾರ್ಯದರ್ಶಿ ಮಂಡಳಿ ಸದಸ್ಯರಾದ ಆರ್.ಶ್ರೀನಿವಾಸ್, ಸುರೇಂದ್ರರಾವ್, ಪ್ರಭಾ, ಇ.ಕೆ.ಎನ್.ರಾಜನ್, ಗೋಪಾಲಗೌಡ ... ಮುಂತಾದವರು ಭಾಗವಹಿಸಿದ್ದರು.

ಇಂದಿಗಾಗಿ ನಾಳಿನ ಕಾರ್ಯಕ್ರಮಗಳು

ಮಾರ್ಚ್ 23 , 2003
ಭಗತ್ ಸಿಂಗ್, ರಾಜಗುರು, ಸುಖದೇವ್ ಹುತಾತ್ಮ ದಿನ

ಮಾರ್ಚ್ 23 ರಿಂದ 28, 2003
ಡಿವೈಎಫ್‌ಐ ಕರೆ - ನಿರುದ್ಯೋಗದ ವಿರುದ್ಧ ಜಾಥಾಗಳು, ಪ್ರಚಾರಾಂದೋಲನ
ಮಾರ್ಚ್ 28, ಜಿಲ್ಲಾ / ತಾಲ್ಲೂಕು ಕೇಂದ್ರಗಳಲ್ಲಿ ಧರಣಿ

ಮಾರ್ಚ್ 25, 2003
ವಿದ್ಯುತ್ ದರ ಏರಿಕೆ ಮತ್ತು ಖಾಸಗೀಕರಣ ವಿರೋಧಿಸಿ, ಹೆಸ್ಕಾಂ ಮುಂದೆ ಬೃಹತ್ ಪ್ರತಿಭಟನೆ
ಬೆಳಿಗ್ಗೆ 11 ಗಂಟೆಗೆ ಹುಬ್ಬಳ್ಳಿಯ ಇಂದಿರಾ ಗಾಜಿನ ಮನೆಯಿಂದ ಮೆರವಣಿಗೆ ಆರಂಭ. ಹಿರಿಯರೈತ ಮುಖಂಡ ಮತ್ತು ಮಾಜಿ ಕೇಂದ್ರ ಸಚಿವರಾದ ಬಾಬಾಗೌಡ ಪಾಟೀಲ್ ಮತ್ತು ಕರ್ನಾಟಕ ಪ್ರಾಂತ ರೈತಸಂಘದ ರಾಜ್ಯಾಧ್ಯಕ್ಷರಾದ ಮಾರುತಿ ಮಾನ್ಪಡೆ ಮತ್ತಿತರರು ಭಾಗವಹಿಸಲಿದ್ದಾರೆ.

ಏಪ್ರಿಲ್ 4 ರಿಂದ 6, 2003
ಅಖಿಲ ಭಾರತ ಕೃಷಿ ಕೂಲಿಕಾರರ ಸಂಘದ 5ನೇ ರಾಷ್ಟ್ರ ಸಮ್ಮೇಳನ, ತ್ರಿಚೂರು - ಕೇರಳ

ಕೃಷ್ಣ ಸರ್ಕಾರದ ಪಲಾಯನವಾದಿ ಬಜೆಟ್

ಗ್ರಾಮೀಣ ಪರ, ರೈತರ ಪರವೆಂದೆಲ್ಲಾ ಹೊಗಳಲಾಗುತ್ತಿರುವ ಕೃಷ್ಣ ಸರ್ಕಾರದ ಈ ಬಜೆಟ್‌ನ ನಿಜ ಅಂಶವೇನು? ಅದು ಅಭಿವೃದ್ಧಿ ಪರವೇ? ಅದು ನಿಜವಾಗಿಯೂ ಗ್ರಾಮೀಣ ಜನರನ್ನು ಉಳಿಸೀತೆ? ಐಎಂಎಫ್, ವಿಶ್ವಬ್ಯಾಂಕಿನ ನಿರ್ದೇಶನಗಳಿಂದ ಮುಕ್ತವೇ ಅಥವಾ ನಿಜ ಸಮಸ್ಯೆಗಳಿಗೆ ಬೆನ್ನು ತೋರಿಸಿ ಓಡುತ್ತಿದೆಯೇ? ಬಣ್ಣ ಬಳಿದುಕೊಂಡು ಎಲ್ಲರ ಕಣ್ಣಿಗೆ ಮಣ್ಣೆರೆಚುವ ಈ ಬಜೆಟ್ಟಿನ ಮೋಸವನ್ನು ಹೊರಗಿಟ್ಟಿದ್ದಾರೆ ಸಿಪಿಐ(ಎಂ)ನ ರಾಜ್ಯ ಕಾರ್ಯದರ್ಶಿ

ಜಿ.ಎನ್.ನಾಗರಾಜ್



ಮಾ. 21ರಂದು ಕರ್ನಾಟಕದ ಹಣಕಾಸಿನ ಸಚಿವರೂ ಆಗಿರುವ ಮುಖ್ಯಮಂತ್ರಿಯವರು ಮಂಡಿಸಿದ ಬಜೆಟ್ಟನ್ನು ರಾಜ್ಯದ ಎಲ್ಲಾ ಪತ್ರಿಕೆಗಳೂ ಹಾಡಿ ಹೊಗಳಿವೆ. ಮುಖಪುಟದ ಉದ್ದಗಲಕ್ಕೂ ವ್ಯಾಪಿಸಿದ ತಲೆ ಬರಹಗಳಲ್ಲಿ "ಗ್ರಾಮದತ್ತ ಕೃಷ್ಣಚಿತ್ತ" (ವಿಜಯ ಕರ್ನಾಟಕ), "ಹಳ್ಳಿಯತ್ತ ಕೃಷ್ಣ ರಥ" (ಜನವಾಹಿನಿ), ಹೈಟೆಕ್ ಕೃಷ್ಣರ ಗ್ರಾಮಯಾತ್ರೆ"(ಸಂಯುಕ್ತ ಕರ್ನಾಟಕ) "ರೈತರಿಗೆ ನೆರವು" (ಪ್ರಜಾವಾಣಿ) ಎಂದು ಘೋಷಿಸಿದೆ.

ಆಳುವ ವರ್ಗದ ವಿಧವಿಧ ಸಿದ್ಧಾಂತಗಳನ್ನು ಪ್ರತಿಪಾದಿಸುವ ಸದಾ ತಮ್ಮೊಳಗೆ ನಿರಂತರ ಗುದ್ದಾಟದಲ್ಲಿರುವ ಈ ಪತ್ರಿಕೆಗಳೆಲ್ಲವೂ ಸರಿ ಸುಮಾರು ಒಂದೇ ತೀರ್ಮಾನಕ್ಕೆ ಬಂದಿರುವಂತೆ ಘೋಷಣೆಗಳನ್ನು ನೀಡಿರುವುದನ್ನು ನೋಡಿದರೆ ಎಸ್.ಎಂ. ಕೃಷ್ಣ ಸರ್ಕಾರ ಪತ್ರಿಕೆಗಳ ಈ ಮುಖಪುಟಗಳನ್ನೇ ತಮ್ಮ ಪಕ್ಷದ ಚುನಾವಣಾ ಪೋಸ್ಟರ್‌ಗಳನ್ನಾಗಿ ಬಳಸಬಹುದು. ಹೀಗೆ ಎಲ್ಲಾ ಪತ್ರಿಕೆಗಳು ಕೃಷ್ಣಾ ಸರ್ಕಾರದ ಪ್ರಚಾರ ಮಾಧ್ಯಮವಾಗಿ ಪರಿವರ್ತಿತವಾಗಿ ರುವುದನ್ನು ನೋಡಿದರೆ ಕರ್ನಾಟಕದ ಗ್ರಾಮಗಳಿಗೆ ಯಾವುದೋ ಲಾಟರಿ ಹೊಡೆಯಿತೇನೋ, ಮುಂದಿನ ದಿನಗಳಲ್ಲಿ ಸ್ವರ್ಗವೇ ಧರೆಗಿಳಿಯುತ್ತಿದೆಯೇನೋ ಎಂಬ ಭಾವನೆಯನ್ನು ಮೂಡಿಸುತ್ತದೆ. ಆದರೆ ನಿಜಸಂಗತಿ ಏನು?

ಇಂದು ಕರ್ನಾಟಕದ ಜನತೆಯನ್ನು ಕಾಡುತ್ತಿರುವ ವಿವಿಧ ಸಂಕಟಗಳಿಗೆ ಸವಾಲುಗಳಿಗೆ ಉತ್ತರನೀಡುತ್ತದೆಯೇ? ಈ ಸವಾಲುಗಳನ್ನು ಎದುರಿಸಲು ಬೇಕಾಗುವ ಹಣದ ಸಂಪನ್ಮೂಲಗಳನ್ನು ರೂಢಿಸುವ ಪ್ರಯತ್ನ ವಿದೆಯೇ? ಇದು ಬಜೆಟ್‌ನ ಸಂದರ್ಭದಲ್ಲಿ ಎಲ್ಲರೂ ಕೇಳಬೇಕಾದ ಪ್ರಶ್ನೆ.

ಕರ್ನಾಟಕದ ಜನತೆ ಎದುರಿಸುತ್ತಿರುವ ಸಂಕಟಗಳು

ಕರ್ನಾಟಕ ಇಂದು ತೀವ್ರ ಕೃಷಿ ಹಾಗೂ ಕೈಗಾರಿಕಾ ಬಿಕ್ಕಟ್ಟುಗಳನ್ನು ಎದುರಿಸುತ್ತಿದೆ. ಮಾರಾಟ ಕುಸಿತ ಹಾಗೂ ರಫ್ತು ಕುಸಿತದಿಂದ ಈ ಬೇಸಿಗೆಯಲ್ಲಿ ಹಾಗೂ ಮುಂದಿನ ಮಳೆಗಾಲದ ಬೆಳೆ ಕೈಗೆ ಬರುವವರೆಗೂ ರೈತರು, ಕೃಷಿಕೂಲಿಕಾರರು ಇತರ ಗ್ರಾಮೀಣ ಜನತೆ ಎದುರಿಸಬೇಕಾಗಿದೆ. ಕೃಷಿ ಫಸಲುಗಳ ಬೆಲೆ ಕುಸಿತ ಆಮದುಗಳಿಂದ ಕೈಗಾರಿಕೆಗಳು ಮುಚ್ಚಿಕೊಳ್ಳುವುದು ಇತರ ಸಮಸ್ಯೆಗಳು ಮತ್ತು ಕಾರ್ಮಿಕರ ವೇತನ, ಬೋನಸ್ ಹೆಚ್ಚಳದಲ್ಲಿ ತೀವ್ರ ಕಡಿತ ಇವುಗಳನ್ನು ಎದುರಿಸುತ್ತಿದ್ದಾರೆ. ಶಿಕ್ಷಣ ಶುಲ್ಕಗಳು ಹಾಗೂ ಡೊನೇಷನ್ ಹೆಚ್ಚಳ ಹಿಂದುಳಿದ, ದಲಿತ ವಿಭಾಗಗಳಿಗೆ ಹಾಗೂ ಮಹಿಳೆಯರ ಶಿಕ್ಷಣಕ್ಕೆ ತೀವ್ರ ಆಘಾತವಾಗಿದೆ. ಆಸ್ಪತ್ರೆ ಶುಲ್ಕಗಳು ಔಷದಿಗಳ ಹೆಚ್ಚಳದಿಂದ ಆರೋಗ್ಯದಲ್ಲಿ ಕುಸಿತ ಸಾಹಿತ್ಯ ಸಾಂಸ್ಕೃತಿಕ ರಂಗಗಳಿಗೆ ಸರ್ಕಾರದ ಬೆಂಬಲ ಕಡಿತ, ಅವನತಿಯು ಮೌಲ್ಯಗಳ ಸಿನೆಮಾ, ಟಿವಿ ಕುಣಿತಗಳ ಧಾಳಿ, ಸಾಂಸ್ಕೃತಿಕ ಧಾಳಿ, ಲಾಟರಿಗಳು ಇತ್ಯಾದಿ ವಿವಿಧ ರೂಪದ ಸಮಸ್ಯೆಗಳಿಗೆ ಬಜೆಟ್ ಮೂಲಕ ಆರ್ಥಿಕ ನೀತಿಯನ್ನು ರೂಪಿಸುವ ಮೂಲಕ ಪರಿಹಾರ ನೀಡಬೇಕಾಗಿದೆ.

ಎರಡು ವರ್ಷಗಳ ತೀವ್ರ ಬರಗಾಲದಿಂದ ಬಳಲುತ್ತಿರುವ ಕರ್ನಾಟಕ ತೀವ್ರ ಜಲಕ್ಷಾಮವನ್ನು ಎದುರಿಸುತ್ತಿದೆ. ಕೃಷಿಗೆ ನೀರಾವರಿಯ ಕೊರತೆ ಕುಡಿಯುವ ನೀರಿನ ಕೊರತೆ, ಇವೆರಡನ್ನೂ ಮತ್ತಷ್ಟು ಹೆಚ್ಚುಮಾಡುವ ಈ ಬಿರುಬೇಸಿಗೆಯಲ್ಲಿ ಭೂಮಿಯೊಳಗೆ ಇರುವ ನೀರನ್ನೂ ಎತ್ತುವುದಕ್ಕೆ ಬೇಕಾದ ವಿದ್ಯುತ್ ಕೊರತೆ ರಾಜ್ಯದ ಅನೇಕ ಪಟ್ಟಣಗಳಲ್ಲಿ, ಗ್ರಾಮಗಳಲ್ಲಿ ಎರಡು ಮೂರು ದಿನಗಳಿಗೊಮ್ಮೆ ವಾರಕ್ಕೊಮ್ಮೆ ಮಾತ್ರ ಕುಡಿಯುವ ನೀರು ಕೃಷಿಗೆ ನೀರಿನ ಕೊರತೆಯಿಂದಾಗಿ ದೊಡ್ಡ ಪ್ರಮಾಣದಲ್ಲಿ ವಲಸೆ, ಅವರಿಗೆ ಆಹಾರದ ಕೊರತೆ ಇತ್ಯಾದಿ ಒಂದು ಕಡೆ. ಕೃಷಿ ಆಧಾರಿತ ಉದ್ಯಮಗಳಾದ ಎಣ್ಣೆ, ಅಕ್ಕಿ ಹಾಗೂ ಹತ್ತಿಗಿರಣಿ ಮುಂತಾದುವುಗಳಲ್ಲಿ ಕೆಲಸದ ಕೊರತೆ ಇತ್ಯಾದಿ ಮತ್ತೊಂದು ಕಡೆ.

ಈ ಸಮಸ್ಯೆಗಳಿಗೆ ಬಜೆಟ್‌ನಲ್ಲಿ ಯಾವ ಪರಿಹಾರಗಳನ್ನು ರೂಪಿಸಲಾಗಿದೆ?

ಹಾಗೆಯೇ ರೇಷ್ಮೆ ಆಮದುಗಳಿಂದ ರೈತರ ಹಾಗೂ ನೂಲುವವರಿಗೆ ಹೊಡೆತ, ಅಡಿಕೆ, ಕಾಫಿ ಬೆಲೆ ಕುಸಿತ, ಪರಂಪರಾಗತ ಉದ್ಯಮಗಳಾದ ಹೆಂಚು, ಬೀಡಿ ಹಾಗೂ ಕೈ ಮಗ್ಗ, ಪವರ್ ಲೂಮ್ ಉದ್ಯಮಗಳು, ಸಣ್ಣ ಕೈಗಾರಿಕೆಗಳ ಸಮಸ್ಯೆಗಳಿಗೆ ಯಾವ ಪರಿಹಾರ ನೀಡಲಾಗಿದೆ?

ಗ್ರಾಮದತ್ತ ಎಂದರೆ ಏನು?

ಇಂದಿನ ಸಂಭರ್ಭದಲ್ಲಿ ಗ್ರಾಮದತ್ತ ಎಂದರೆ ಗ್ರಾಮಾಭಿವೃದ್ಧಿ ಕೃಷಿ ಅಭಿವೃದ್ಧಿ ಎಂದರೆ ಗ್ರಾಮಾಂತರದ ಜನತೆ ನಗರಗಳಿಗೆ ವಲಸೆ ಹೋಗದಂತೆ ನಗರಗಳಿಗೆ ಈಗಾಗಲೇ ವಲಸೆ ಹೋದ ಜನರನ್ನು ಮತ್ತೆ ಸೆಳೆಯುವಂತೆ ಬೃಹತ್ ಪ್ರಮಾಣದ ಗ್ರಾಮಾಂತರ ಉದ್ಯೋಗ ಸೃಷ್ಟಿ. ಈ ಉದ್ಯೋಗ ಸೃಷ್ಟಿಗಾಗಿ ನೀರಾವರಿ ಮೊದಲಾದ ಕೃಷಿ ಅಭಿವೃದ್ಧಿ ಯೋಜನೆಗಳು ಈ ಅಬಿವೃದ್ಧಿ ಯೋಜನೆಗಳ ಮಾನವ ಬಲದ ಪೂರ್ಣ ಪ್ರಯೋಜನ, ಉದ್ಯೋಗ ಕಡಿತ ಮಾಡುವ ಯಂತ್ರಗಳ ನಿಷೇಧ, ಈ ಕೆಲಸಗಳಲ್ಲಿ ಕನಿಷ್ಟ ಕೂಲಿಕಾರರ, ಕೂಲಿಗಾಗಿ ಕಾಳು ಯೋಜನೆಗಳಲ್ಲಿ ಭ್ರಷ್ಟಾಚಾರದ ನಿಯಂತ್ರಣ, ಕುಡಿಯುವ ನೀರಿಗಾಗಿ ಆದ್ಯತೆಯ ಮೇಲೆ ವಿದ್ಯುತ್ ಸರಬರಾಜು ವ್ಯವಸ್ಥೆ, ಹಿಂದಿನ ಸಾಲಗಳ ವಸೂಲಾತಿ ಮುಂದೂಡಿಕೆ, ಬಡ್ಡಿ ಸಾಹುಕಾರರ, ಖಾಸಗಿ ಫೈನಾನ್ಸ್ ಕಂಪನಿಗಳ ಬಡ್ಡಿದರದ ಮೇಲೆ ನಿಯಂತ್ರಣ ಸಣ್ಣ ರೈತರಿಗೆ ಸುಲಭದರದಲ್ಲಿ ಉತ್ತಮ ಗುಣಮಟ್ಟದ ಬೀಜ, ಔಷಧಿ, ಗೊಬ್ಬರಗಳ ಸರಬರಾಜು ಈ ಯೋಜನೆಗಳನ್ನು ರೂಪಿಸದ ಬಜೆಟ್, ಗ್ರಾಮಾಂತರ ಪ್ರದೇಶದಲ್ಲಿ ಇಂದು ಬದುಕಲು ಸೆಣಸಾಡುತ್ತಿರುವ ಅಲ್ಲಿನ ಜನ ಸಂಖ್ಯೆಯ ಶೇ. 90 ಭಾಗದ ಕುಶಲ ಕರ್ಮಿಗಳಿಗೆ ಕೂಲಿಕಾರ, ಬಡರೈತರಿಗೆ ಪರಿಹಾರ ನೀಡದ ಬಜೆಟ್ ಗ್ರಾಮದತ್ತ ಸಾಗಲು ಸಾಧ್ಯವೆ?

ಕೃಷ್ಣರ ಕಣ್ಣಿಗೆ ಕಾಣುವ ಗ್ರಾಮೀಣ ಜನರು ಯಾರು?

ಹಾಗಾದರೆ ಎಲ್ಲ ಪತ್ರಿಕೆಗಳೂ ವಾಚಾಮ ಗೋಚರವಾಗಿ ಹೊಗಳಿದ ಗ್ರಾಮದತ್ತ ಕೃಷ್ಣ ಯಾತ್ರೆಯ ಮಾತುಗಳಿಗೆ ಏನು ಅರ್ಥ? ಕೃಷಿಗೆ ಹೆಚ್ಚು ಸಹಾಯಧನ ನೀಡಲಾಗಿದೆ ಎಂದು ಹೇಳಲಾಗಿದೆ. ತುಂತುರು ಹಾಗೂ ಹನಿ ನೀರಾವರಿಗೆ ಶೇ. 50ರಷ್ಟು ಎಲ್ಲ ರೈತರಿಗೆ, ಶೇ. 100ರಷ್ಟು ಗಂಗಾಕಲ್ಯಾಣ ಯೋಜನೆಯ ಮೂಲಕ ಹರಿಜನ ಗಿರಿಜನರಿಗೆ ಮತ್ತು ಬಿಜಾಪುರದಲ್ಲಿ ಎಲ್ಲ ತೋಟಗಾರಿಕೆ ರೈತರಿಗೂ ಶೇ. 100ರಷ್ಟು ಸಹಾಯಧನ. ಇವುಗಳ ಜೊತೆಗೆ ಕೃಷಿ ಯಂತ್ರಗಳ ಖರೀದಿಗೆ ಶೇ. 25 ರಿಂದ ಶೇ. 50ಕ್ಕೆ ಸಹಾಯಧನದ ಹೆಚ್ಚಳ ಇದನ್ನೇ ಗ್ರಾಮದತ್ತ ಬಜೆಟ್‌ನ ಪಯಣ ಎನ್ನಲಾಗುತ್ತಿದೆ. ಈ ಯೋಜನೆಗಳ ಫಲಯಾರಿಗೆ? ಬಿಜಾಪುರದಲ್ಲಿ ರಫ್ತಿಗಾಗಿ ದ್ರಾಕ್ಷಿ ಹಾಗೂ ದಾಳಿಂಬೆ ಬೆಳೆಯುತ್ತಿರುವ ಅತೀ ದೊಡ್ಡ ಶ್ರೀಮಂತ ರೈತರು ಹಾಗೂ ಭೂಮಾಲಿಕರು ಹಾಗೂ ಅದೇ ರೀತಿ ಔಷದಿ ಸಿಂಪಡಿಸುವ ಯಂತ್ರಗಳನ್ನು ಕೊಳ್ಳುವುದಕ್ಕೆ ಈ ಸಹಾಯಧನ ಪಡೆಯುವವರೂ ಕೂಡ ಅತೀ ದೊಡ್ಡ ಹಾಗೂ ದೊಡ್ಡ ರೈತರುಗಳು ಇವರೇ ಕೃಷ್ಣರ ಕಣ್ಣಿಗೆ ಬಿದ್ದ ಗ್ರಾಮೀಣ ಜನರು! ಅದೇ ಸಮಯದಲ್ಲಿ ಈ ಯಂತ್ರಗಳ ಕೊಳ್ಳುವಿಕೆಯಿಂದ ಕೃಷಿ ಕೂಲಿಕರಿಗೆ ಉಂಟಾಗಿರುವ ನಿರುದ್ಯೋಗ ಕೃಷ್ಣರ ಕಣ್ಣಿಗೆ ಬೀಳುವುದಿಲ್ಲ.

ಹನಿ ಹಾಗೂ ತುಂತುರು ನೀರಾವರಿ ಹಾಗೂ ಕೃಷಿ ಯಂತ್ರೋಪಕರಣಗಳ ತಯಾರಿಕೆಗಾರರು ಕೂಡಲೇ ತಮ್ಮ ಮಾರಾಟ ಬೆಲೆಯನ್ನು ಹಾಗೂ ಮಾರಾಟವನ್ನು ಹೆಚ್ಚಿಸಿಕೊಂಡು ಲಾಭಪಡೆಯಲು (ಅದರಿಂದ ಇನ್ನು ಯಾರಿಗೆ ಏನೇನು ಲಾಭವೋ ಅದು ಬಜೆಟ್ ಹೊರಗಿನ ವಿಚಾರ) ಭೂ ಮಾಲಕರಿಗೆ ಹೀಗೆ ಕೃಷಿ ಕೂಲಿಕಾರರಿಗೆ ಹಾನಿ, ಶ್ರೀಮಂತ ರೈತರಿಗೆ ಭೂಮಾಲಕರಿಗೆ ಉಪಕಾರಿಯಾದ ಈ ಬಜೆಟ್ ಅನ್ನು ಗ್ರಾಮದತ್ತ ಎಂದು ಘೋಷಿಸುತ್ತಿರುವುದು ಗ್ರಾಮೀಣ ಜನರನ್ನೇ ಅಪಹಾಸ್ಯ ಮಾಡಿದಂತಾಗಿದೆ.

ಇವುಗಳ ಜೊತೆಗೆ ಕಾವೇರಿ ಜಲವಿವಾದದಲ್ಲಿ ಇರುವ ವಿಷಯವನ್ನು ನೇರವಾಗಿ ರೈತರಿಗೆ ವಿವರಿಸದೆ ಚುನಾವಣಾದೃಷ್ಟಿಯಿಂದ ಏನೇನೋ ಮಾಡಲು ಹೋಗಿ ಪೆಟ್ಟುತಿಂದ ಕೃಷ್ಣ ಈಗ ಸಿಟ್ಟಿಗೆದ್ದಿರುವ ಕಾವೇರಿ ರೈತರನ್ನು ಸಮಾಧಾನ ಪಡಿಸಲು ಕಾವೇರಿ ನೀರಾವರಿ ನಿಗಮದ ಸ್ಥಾಪನೆಯ ಮಾತನ್ನಾಡಿದದಾರೆ. ಆದರೆ ಅದಕ್ಕಿಂತ ಹೆಚ್ಚಾಗಿ ಕಾಲುವೆಗಳ ರಿಪೇರಿಯ ಹೆಸರಿನಲ್ಲಿ ಮಂಡ್ಯ ಮೈಸೂರುಗಳ ಹಿರಿಕಿರಿ ಕಂಟ್ರಾಕ್ಟಾದಾರರಿಗೆ ಹಣದ ಹೊಳೆಹರಿಸಿ ಅದರಿಂದ ಆ ಪ್ರದೇಶದಲ್ಲಿ ಕಾಂಗ್ರೆಸ್‌ನ ಚುನಾವಣಾಯಂತ್ರಕ್ಕೆ ಬೇಕಾದ ಎಣ್ಣೆಯನ್ನು ಒದಗಿಸಲೋ ಕೃಷ್ಣ ಯೋಜನೆಹಾಕಿದ್ದಾರೆ.

ಗ್ರಾಮೀಣ ಪ್ರದೇಶದ ಮೇಲೆ ವಿದ್ಯುತ್ ಯುದ್ಧ

ಇಂತಹ ಗ್ರಾಮೀಣ ಜನರಿಗೆ ಜನಸಾಮಾನ್ಯರ ಹಣವನ್ನು ಸುರಿಯುವಾಗಲೇ ವಿದ್ಯುತ್ ಖಾಸಗೀಕರಣ, ಮೀಟರೀಕರಣ, ಬಿಲ್‌ವಸೂಲಿ, ಸಹಾಯಧನ ಕಡಿತ, ದರ ಏರಿಕೆಗಳಿಗಾಗಿ, ವಿಶ್ವ ಬ್ಯಾಂಕ್ ನಿರ್ದೇಶಿತ ಮಧ್ಯಮಾವಧಿ ಹಣಕಾಸು ಯೋಜನೆಯ ಆಜ್ಞೆಗಳಿಗಾಗಿ ಗ್ರಾಮೀಣ ಪ್ರದೇಶದ ಮೇಲೆ ಹಾಗೂ ಕೃಷಿಯ ಮೇಲೆ ವಿದ್ಯುತ್ ಯುದ್ಧವನ್ನು ಈ ಬಜೆಟ್‌ನಲ್ಲಿ ಕೃಷ್ಣ ಸಾರಿದ್ದಾರೆ.

ಪ್ರತಿಯೊಂದು ಸಂಪರ್ಕವನ್ನೂ ಮೀಟರೀಕರಣ ಮಾಡಲೇಬೇಕು ಹಾಗೂ 20-30 ವರ್ಷಗಳ ಬಾಕಿ ಎಂಬ ಹೆಸರಿನಲ್ಲಿ ಅಸಲು ಯಾವುದು ಬಡ್ಡಿಯಾವುದು ಯಾವ ವರ್ಷದ್ದು ಎಂಬ ಯಾವ ಲೆಕ್ಕಾಚಾರವೂ ಇಲ್ಲದೆ ರೈತರಿಗೆ 'ಭಾಗ್ಯಜ್ಯೋತಿ' ಬಳಕೆದಾರರಿಗೆ ನೀಡುತ್ತಿರುವ ಹಳೆಬಾಕಿಗಳ ಬಿಲ್ ವಸೂಲಿ ಮಾಡಲು ಕೃಷ್ಣ ಶಕ್ತಿಯುತವಾದ ಕ್ರಮಗಳಿಗೆ ವಿಧಾನಸಭೆಯ ಬೆಂಬಲ ಕೋರಿದ್ದಾರೆ. ವಿದ್ಯುತ್ ಯುದ್ಧದ ಅವರ ತಂತ್ರದಲ್ಲಿ ಈ ಮೂರು ಮುಖ್ಯ ವಿಧಾನಗಳನ್ನು ಸೂಚಿಸಿದ್ದಾರೆ.

ಬಡ್ಡಿ ವಿನಾಯತಿ ಹೆಸರಿನಲ್ಲಿ ಆಸೆ ತೋರಿಸಿ ಬಿಲ್ ವಸೂಲಿ ಮಾಡುವುದು.

2.ಮೀಟರೀಕರಣ, ವಸೂಲಾತಿಹಾಗೂ ಬಾಕಿನೀಡದವರಿಗೆ ವಿದ್ಯುತ್ ಸಂಪರ್ಕ ಕಡಿತಕ್ಕಾಗಿ ಬಲಪ್ರಯೋಗ ದಮನಕಾರಿ ಕ್ರಮಗಳು.

3. ಗ್ರಾಮೀಣ ಪ್ರದೇಶಗಳಿಗೆ, ಕೃಷಿಗೆ ವಿದ್ಯುತ್ ಸರಬರಾಜನ್ನು ಕಡಿತಮಾಡುವುದು. ಮೀಟರೀಕರಣಕ್ಕೆ ಒಪ್ಪಿಕೊಂಡವರಿಗೆ ವಿದ್ಯುತ್ ಬಾಕಿ ನೀಡಿದವರಿಗೆ ಮಾತ್ರ ವಿದ್ಯುತ್ ನೀಡುವುದು ಉಳಿದ ಲೈನ್, ಸ್ಟೇಷನ್, ಸಬ್ ಸ್ಟೇಷನ್‌ಗಳಿಗೆ ವಿದ್ಯುತ್ ಬಳಕೆಯಲ್ಲಿ ಮಿತಿವಿಧಿಸುವುದು. ವಿದ್ಯುತ್ ಮಿತಿಮೀರಿದಾಗ ವಿದ್ಯುತ್ ಕಡಿತ ವಿಧಿಸುವುದು ಇಂತಹ ಕ್ರಮಗಳನ್ನು ಸಹಾಯಧನ ನೀಡುವ ಹೊಸ ಯೋಜನೆ ಪರ್ಚೆಜರ್ ಪ್ರೋವೈಡರ್ (ಕೊಳ್ಳದವರಿಗೆ ಸಹಾಯ ಧನ) ಆ ಹೆಸರಿನಲ್ಲಿ ಜಾರಿಗೆ ತರುವುದು.

ಈ ಮೂಲಕ ರೈತರು ಚಳುವಳಿಗಿಳಿದರೆ ದಮನಕಾರಿ ಕ್ರಮ ಒಂದು ಕಡೆ ವಿದ್ಯುತ್ ಕಡಿತ ಮತ್ತೊಂದುಕಡೆ ಹೀಗೆ ವಿದ್ಯುತ್ ಯುದ್ಧವನ್ನು ಕೃಷ್ಣ ಕೃಷಿಕರ ಹಾಗೂ ಗ್ರಾಮಾಂತರ ಪ್ರದೇಶದ ಮೇಲೆ ಸಾರಿದ್ದಾರೆ. ಇದನ್ನೇ ಗ್ರಾಮದತ್ತ ಬಜೆಟ್ ಎಂದು ಪತ್ರಿಕೆಗಳು ಹೊಗಳಿರುವುದು.

ಕರ್ನಾಟಕದ ಕೈಗಾರಿಕೆಯ ಬಿಕ್ಕಟ್ಟುಗಳಿಗೆ ಹೆಂಚು, ಬೀಡಿ, ಜವಳಿ, ಸಕ್ಕರೆ, ಪವರ್ ಲೂಂ, ರೇಷ್ಮೆ ಇತರೆ ಸಣ್ಣ ಕೈಗಾರಿಕೆಗಳು, ಸಾರ್ವಜನಿಕ ಉದ್ಯಮವಲಂಬಿತ ಕೈಗಾರಿಕೆಗಳು ಇವುಗಳಿಗೆ ಸಾರ್ವತ್ರಿಕವಾಗಿ ರಾಜ್ಯದ ಕಾರ್ಮಿಕರಿಗೆ ಯಾವುದೇ ಪರಿಹಾರವಿಲ್ಲ.

ನಿರುದ್ಯೋಗ ನಿವಾರಣೆಯ ಮಾತೇ ಇಲ್ಲ.

ರಾಜ್ಯದಲ್ಲಿ ವಿದ್ಯಾವಂತರ ನಿರುದ್ಯೋಗ ಹೆಚ್ಚುತ್ತಿದೆ. ಕಂಪ್ಯೂಟರ್ ಶಿಕ್ಷಣ ಪಡೆದ ಕೆಲವರ ಹೊರತಾಗಿ ಯಾವ ಶಿಕ್ಷಿತರಿಗೂ ಉದ್ಯೋಗವಿಲ್ಲ. ಇರುವ ಕೆಲವೇ ಉದ್ಯೋಗಗಳಿಗೆ ಸರ್ಕಾರ ಇರಲಿ ಖಾಸಗಿ ಇರಲಿ ದೊಡ್ಡ ಪ್ರಮಾಣದ ಭ್ರಷ್ಟಾಚಾರ, ಸ್ವಜನ, ಸ್ವಜಾತಿ ಪಕ್ಷಪಾತಗಳು. ಗ್ರಾಮೀಣ ಪ್ರದೇಶದ ವಿದ್ಯಾವಂತರಿಗಂತೂ ಉದ್ಯೋಗದ ಆಸೆಗಳೇ ಬತ್ತಿಹೋಗಿದೆ. ಗ್ರಾಮೀಣ ಪ್ರದೇಶದ ಅಶಿಕ್ಷಿತರಿಗಂತೂ ಅರೆ ನಿರುದ್ಯೋಗವೇ ಜೀವನ ಕ್ರಮವಾಗಿದೆ. ಸರ್ಕಾರಿ ರಂಗದಲ್ಲಿ ಉದ್ಯೋಗಗಳ ಕೊರತೆಯಿಂದ ದಲಿತ ನಿರುದ್ಯೋಗಿಗಳೂ ಅಪಾರವಾಗಿದಕ್ಕೆ ಈಗಾಗಲೇ ವಿವರಿಸಿದಂತೆ ಶಿಕ್ಷಣ, ಆರೋಗ್ಯ ಕ್ಷೇತ್ರಗಳಲ್ಲಿಯೂ ಕೆಳವರ್ಗದವರ ಮೇಲೆ ಮಹಿಳೆಯರಿಗೆ ಹೆಚ್ಚು ಪರಿಣಾಮ ಬೀರುವ ಕ್ರಮಗಳ ಬಗ್ಗೆ ಯಾವ ಮರು ಚಿಂತನೆಯೂ ಇಲ್ಲವಾಗಿದೆ.

ಕೃಷ್ಣ ಸರ್ಕಾರ ಮಂಡಿಸಿದ ಬಜೆಟ್ ರಾಜ್ಯದ ಜನತೆಗೆ, ರಾಜ್ಯದ ಅಭಿವೃದ್ಧಿ ಎದುರಾಗಿರುವ ಗಂಡಾಂತರಗಳಿಂದ ತಪ್ಪಿಸಿಕೊಂಡು ಓಡುವ ಕೈಗಾರಿಕೆ ಹಾಗೂ ಕೃಷಿ ಬಂಡವಾಳ ಶಾಹಿಗಳಿಗೆ ಅಪಾರ ಅನುಕೂಲ ಕಲ್ಪಿಸುವ ಬಹಿರಂಗವಾಗಿಯೇ ಬಡವರ ವಿರೋಧಿ ಹಾಗೂ ಬಂಡವಾಳಶಾಹಿ ಪರ ಬಜೆಟ್ ಆಗಿದೆ. ಈ ಬಜೆಟ್ ವಿರುದ್ಧ ಪ್ರತಿಭಟಿಸುವ ಮೂಲಕ ಕೃಷ್ಣ ಸರ್ಕಾರದ ಆರ್ಥಿಕ ನೀತಿಗಳ ವಿರುದ್ಧ ವ್ಯಾಪಕ ಚಳುವಳಿ ನಡೆಸಬೇಕು. ○

ಹಮಾಲಿ ಕಾರ್ಮಿಕರ ಬೇಡಿಕೆಗಳ ಈಡೇರಿಕೆಗಾಗಿ ಒತ್ತಾಯಿಸಿ ಧರಣಿ ಸತ್ಯಾಗ್ರಹ

ಹಮಾಲಿ ಕಾರ್ಮಿಕರ ಬೇಡಿಕೆಗಳ ಈಡೇರಿಕೆಗಾಗಿ ಒತ್ತಾಯಿಸಿ, ರಾಜ್ಯಾದ್ಯಂತ ಹಮಾಲಿ ಕಾರ್ಮಿಕರು, ಪ್ರತಿಭಟನೆ ನಡೆಸಲು ಕರೆ ನೀಡಿದ ಭಾಗವಾಗಿ ಚಿತ್ರದುರ್ಗದ ಚಳ್ಳಕೆರೆಯಲ್ಲಿ ಪ್ರತಿಭಟನಾ ಧರಣಿ ಸತ್ಯಾಗ್ರಹವನ್ನು ನಡೆಸಲಾಯಿತು. ಕಳೆದ ತಿಂಗಳು ಬೆಂಗಳೂರಿನಲ್ಲಿ ನಡೆದ ರಾಜ್ಯ ಸಮಾವೇಶ ಈ ಕರೆ ನೀಡಿತ್ತು.

ಧರಣಿ ಶಿಬಿರದಲ್ಲಿ ಟಿ.ತಿಪ್ಪೇಸ್ವಾಮಿಯವರು, ಮಾತನಾಡುತ್ತಾ ಯಾವ ಮೂಲೆಗೆ ಹೋದರು ಲಕ್ಷಾಂತರ ಹಮಾಲಿ ಕಾರ್ಮಿಕರು ಕೆಲಸ ಮಾಡುತ್ತಿರುವುದನ್ನು ನೋಡಬಹುದಾಗಿದೆ. ಈ ನಮ್ಮ ಕಾರ್ಮಿಕರು ಮೈ ಮುರಿಯುವಂತೆ ಭಾರ ಹೊತ್ತು, ಇಳಿಸಿ, ತೂಕಮಾಡಿ, ಹಗಲು- ಇರುಳು ದುಡಿಯುತ್ತಿದ್ದು, ಇವರಿಗೆ ಕೆಲಸದ ಭದ್ರತೆ ಇಲ್ಲ, ಶರೀರದಲ್ಲಿ ಶಕ್ತಿ ಇರುವವರೆಗೆ ದುಡಿದು ಮುಪ್ಪಿನ ಕಾಲದಲ್ಲಿ ಮುಂದೇನು ಎಂಬ ಆತಂಕಕ್ಕೆ ಒಳಗಾಗುವ ಪರಿಸ್ಥಿತಿಯು ಇವರದ್ದಾಗಿದೆ ಎಂದರು. ಕೆ.ವಿ.ವೀರಭದ್ರಪ್ಪನವರು ನಮ್ಮ ಹಮಾಲಿ ಕಾರ್ಮಿಕರು, ಸ್ವಚ್ಛಗೊಳಿಸುವುದರಿಂದ ಹಿಡಿದು, ಮಾಲೀಕರ ಮನೆಯಲ್ಲಿ ಬಿಟ್ಟಿ ಚಾಕ್ರಿ ಮಾಡುವವರೆಗೂ ದುಡಿಯುತ್ತಿದ್ದು, ಸರ್ಕಾರ ಇದುವರೆವಿಗೂ ಯಾವ ಯೋಜನೆಯುನ್ನು ರೂಪಿಸದೇ ಮೌನವಾಗಿದೆ. ಮಹಿಳಾ ಕಾರ್ಮಿಕರಿಗೆ ಶಿಶುಪಾಲನೆ ಆಗಲಿ, ಹೆರಿಗೆ ಭತ್ಯೆ ಆಗಲಿ ಹಾಗೂ ಕಾರ್ಮಿಕರಿಗೆ ಇ.ಎಸ್.ಐ. ಆಸ್ಪತ್ರೆ ಆಗಲಿ, ಒಂದು ಸೌಲಭ್ಯವನ್ನು ಸಹ ನೀಡುತ್ತಿಲ್ಲ, ಈ ಸರ್ಕಾರಗಳು, ಕಾರ್ಮಿಕರ ಕಡೆ ಗಮನ ಹರಿಸದೇ, ಸೌಲಭ್ಯಗಳನ್ನು ನೀಡದೇ ಹೋದರೆ ಮುಂದಿನ ದಿನಗಳಲ್ಲಿ, ಉಗ್ರವಾದಂತಹ ಹೋರಾಟ ಮಾಡುತ್ತೇವೆ ಎಂದು ಧರಣಿಯಲ್ಲಿ ಘೋಷಿಸಿದರು.

ಎಸ್.ರಾಜಣ್ಣನವರು ಸ್ವಾಗತವನ್ನು ಮಾಡಿದರು. ಈ ಕಾರ್ಯಕ್ರಮದಲ್ಲಿ ಸಾವಿರಕ್ಕೂ ಹೆಚ್ಚು ಜನ ಭಾಗವಹಿಸಿ, ಮಾರ್ಕೆಟ್ ಯಾರ್ಡ್ ಬಳಿ ಇರುವ ಶ್ರಮಿಕರ ಭವನದಿಂದ ಪ್ರತಿಭಟನೆ ಮೆರವಣಿಗೆ ಹೊರಟು ಬೀದಿಗಳಲ್ಲಿ ಕೇಂದ್ರ - ಮತ್ತು ರಾಜ್ಯ ಸರ್ಕಾರದ ವಿರುದ್ಧ ಮುಗಿಲು ಮುಟ್ಟುವ ಘೋಷಣೆಗಳನ್ನು ಕೂಗುತ್ತಾ, ತಾಲ್ಲೂಕು ಕಛೇರಿ ಮುಂದೆ ಧರಣಿ ನಡೆಸಿದರು. ಈ ಹೋರಾಟದ ಮುಖಂಡತ್ವವನ್ನು ಟಿ.ತಿಪ್ಪೇಸ್ವಾಮಿಯವರು, ಕೆ.ವಿ.ವೀರಭದ್ರಪ್ಪ, ಟಿ.ನಿಂಗಣ್ಣ, ಎಸ್.ರಾಜಣ್ಣ, ತಿಪ್ಪಮ್ಮ ಮಹಿಳಾ ಮುಖಂಡರಾದ ಶಿವಮ್ಮ ಬಿ.ನಾಗರಾಜ್, ನಾರಾಯಣ್ ಇನ್ನು ಅನೇಕ ಕಾರ್ಮಿಕ ಮುಖಂಡರು ಭಾಗವಹಿಸಿದ್ದರು.

ಮಾರ್ಚ್ 8 : ಸಾವಿರಾರು ಮಹಿಳೆಯರ ರಾಜಭವನ್ ಚಲೋ

ಯುದ್ಧ, ಕೋಮುವಾದ, ಮಹಿಳೆಯರ ಮೇಲಿನ ಹಿಂಸಾಚಾರವನ್ನು ನಿಲ್ಲಿಸುವಂತೆ ಆಗ್ರಹಿಸಿ, "ಆಹಾರ ಸುರಕ್ಷೆ" ಗಾಗಿ ಒತ್ತಾಯಿಸಿ ಸಾವಿರಾರು ಮಹಿಳೆಯರು 'ರಾಜಭವನ್ ಚಲೋ' ನಡೆಸಿದರು.

ಮಾರ್ಚ್ 8, ಅಂತರಾಷ್ಟ್ರೀಯ ಮಹಿಳಾ ದಿನದ ಅಂಗವಾಗಿ ಬೆಂಗಳೂರಿನಲ್ಲಿ ಸೇರಿದ್ದ ಈ ಮಹಿಳೆಯರು ಮಂಡ್ಯ, ಕೋಲಾರ, ಹಾಗೂ ಬೆಂಗಳೂರು ಜಿಲ್ಲೆಗಳಿಂದ ಆಗಮಿಸಿದ್ದರು.

'ಕೆಟ್ಟ ಬರಗಾಲ -ಊರ್‍ಗಳಲ್ಲಿ ಕೂಲಿ ಸಿಗಾಕಿಲ್ಲ ಆದಾಯ ಮೊದ್ಲಿಗೆ ಇಲ್ಲ ಅದೇನೋ ಕೂಲಿಗಾಗಿ ಕಾಳು ಅಂತಾವ್ರೆ ಅದೂ ನಮ್ಗೆ ಸಿಗ್ತಾ ಇಲ್ಲ. ಕುಡಿಯಾಕೆ ನೀರಿಲ್ದೆ ಜನ -ಜಾನುವಾರ್ಗೋಳ ಕಷ್ಟ ಹೇಳಕ್ಕಾಗಾಕಿಲ್ಲ. ಯಾವ ಮಂತ್ರಿ ಸರ್ಕಾರ್ದೋರು ಕಷ್ಟ ಕೇಳ್ಕಂಡು ನಮ್ಗಂಟ ಬರ್ನಿಲ್ಲ. ನಾವಾಗೇ ಹುಡಿಕ್ಕಂಡು ಬಂದ್ರುವೆ ಕೇಳೋರಿಲ್ಲ. ಇದು ನ್ಯಾಯುವೆ? ಯಾವ್ದೂ ಬೇಡ ಹೋಕ್ಕಳ್ಳಿ, ನವ್ಮನಿಗೊಂದು ಅಸ್ರು ಕಾರ್ಡಾದ್ರುವೆ ಕೊಡಾಕಿಲ್ವೆ? ಇಷ್ಟಾದ್ರುವೆ ಮಾಡಿ ಈ ಸರ್ಕಾರ್ದೋರು ಪುಣ್ಯ ಕಟ್ಕಳ್ಳಿ. ನಾವು ಬಡವ್ರು ಬಂದಿರ ಕಷ್ಟ ಎಲ್ಲಾ ಸಹಿಸ್ಕತೀವಿ. ಅಧಿಕಾರ್‍ದಾಗಿರೋ ಪುಣಾತ್ಮರು ಹೆಂಡ್ರು ಮಕ್ಳು ಸಂಗ್ಡ ಸುಖವಾಗಿರ್‍ಲಿ.

ಮಂಡ್ಯ ಜಿಲ್ಲೆಯ ಮಳವಳ್ಳಿ ತಾಲ್ಲೂಕಿನ ಕುಗ್ರಾಮವೊಂದರ ವಯೋವೃದ್ಧ ಕೃಷಿ ಕೂಲಿಕಾರ ಮಹಿಳೆ ಬೆಣ್ಣೆ ಮಾದಮ್ಮ ಸಭೆಯಲ್ಲಿ ಪಾಲ್ಗೊಂಡು ಮಾತಾಡಿದ್ದು ಹೀಗೆ.

'ಊರೂರಾಗೂ ಹೆಂಗಸ್ರು ಸಂಘ ಕಟ್ಕಳಿ ನಾನು ಸಿರಿ- ಸಂಪತ್ತು ಹರಿಸ್ತೀನಿ ಅಂತ ಆ ಮೋಟಮ್ಮ ಹೇಳಿದ್ದು ಹೇಳಿದ್ದೆ. ನಾವ್ ಸಂಘ ಮಾಡಿದ್ದು ಮಾಡಿದ್ದೆ ಇಲ್ಲಿ ಗಂಟ ಏನೂ ಹರೀನೇ ಇಲ್ಲ ಕಣ್ರವ್ವ'.

ಬರಗಾಲ ಬಂದಾಗ್ನಾರ್‍ದ್ರು ನಮ್ಗೆ ಮಸಿ ಸಹಾಯ ಮಾಡಬಾರ್‍ದಾ ಅಂತ ಕೇಳುವಾ ಅಂದ್ರೆ, ಆ ಮೋಟಮ್ಮ ಎಲ್ಲವ್ವ ಸಿಕ್ಬೇಕು. ಹೀಗೆ ಮಾತು ಮುಂದುವರೆಸಿದ ಬೆಣ್ಣೆ ಮಾದಮ್ಮ ತನ್ನ ಬದುಕನ್ನು ಬಿಚ್ಚಿಡುತ್ತಲೇ ರಾಜ್ಯದ ಲಕ್ಷಾಂತರ ಬಡಮಹಿಳೆಯರ ಬವಣೆಗಳನ್ನು ಪ್ರತಿನಿಧಿಸಿದ್ದರು.

ಸರ್ಕಾರದ ಮುಂದೆ ಬೇಡಿಕೆಗಳನ್ನು ಮಂಡಿಸಿ ಧರಣಿ ನಡೆಸಿದ್ದ ಮಹಿಳೆಯರನ್ನುದ್ದೇಶಿಸಿ ಜನವಾದಿ ಮಹಿಳಾ ಸಂಘಟನೆಯ ರಾಜ್ಯ ಪ್ರಧಾನ ಕಾರ್ಯದರ್ಶಿ ಕೆ.ಎಸ್.ವಿಮಲಾ ಸಹಕಾರ್ಯದರ್ಶಿ ಎನ್.ಪ್ರಭಾ, ಗೌರಮ್ಮ ಕೃಷಿ ಕೂಲಿಕಾರ ಸಂಘದ ರಾಜ್ಯ ಉಪಾಧ್ಯಕ್ಷರಾದ ಜಿ.ಎನ್.ನಾಗರಾಜ್ ಡಿವೈಎಫ್ಐ ರಾಜ್ಯ ಉಪಾಧ್ಯಕ್ಷರಾದ ಎನ್.ಎಲ್ ಭರತ್‌ರಾಜ್ ಜನವಾದಿಯ ಮಂಡ್ಯ ತಾಲ್ಲೂಕು ಅಧ್ಯಕ್ಷೆ ಸಿ.ಕುಮಾರಿ ಮುಂತಾದವರು ಮಾತನಾಡಿದರು.

ಧರಣಿ ನಡೆಸುವ ಮುಂಚೆ ನಗರದ ರೈಲ್ವೆ ನಿಲ್ದಾಣದಿಂದ ರಾಜಭವನದವರೆಗೆ ಮೆರವಣಿಗೆ ನಡೆಸಲಾಯಿತು. ರಾಜ್ಯಪಾಲರಿಗೆ ಮನವಿ ಸಲ್ಲಿಸಲಾಯಿತು.

ಉದಾರೀಕರಣ ಮತ್ತು ಕೋಮುವಾದದ ಎರಡು ಭೂತಗಳನ್ನು ಸುಡುವ ಮೂಲಕ ಧರಣಿ ಕಾರ್ಯ ಕ್ರಮವನ್ನು ಮುಕ್ತಾಯಗೊಳಿಸಲಾಯಿತು.

ಬವಣೆ ಹೊತ್ತು ತಂದ ಮಹಿಳೆಯರ ಭಾರಿ ಸಮೂಹ



ಆಟೋ ಚಾಲಕರ ಸಂಘದ ಮುಖಂಡ ಜಿ. ಸುಬ್ಬರಾವ್ ಇನ್ನಿಲ್ಲ

ಸಿ.ಐ.ಟಿ.ಯು ಸಂಯೋಜಿತ ಆಟೋರಿಕ್ಷಾ ಚಾಲಕರ ಸಂಘ (ಎ.ಆರ್.ಡಿ.ಯು)ದ ಅಧ್ಯಕ್ಷರಾಗಿ ಹಲವು ವರ್ಷಗಳ ಕಾಲ ಸೇವೆ ಸಲ್ಲಿಸಿದ್ದ ಸಂಗಾತಿ ಜಿ. ಸುಬ್ಬರಾವ್ ದಿನಾಂಕ 9-3-2003 ರಂದು ನಿದನರಾದರು. ಅವರಿಗೆ 65 ವರ್ಷ ವಯಸ್ಸಾಗಿತ್ತು. ಅವರು ಓರ್ವ ಪುತ್ರಿಯನ್ನು ಅಗಲಿದ್ದಾರೆ.

ಬೆಂಗಳೂರು ನಗರದಲ್ಲಿ ಆಟೋರಿಕ್ಷಾ ಚಾಲಕ ವೃತ್ತಿಯಲ್ಲಿದ್ದ ಸುಬ್ಬರಾವ್ 80ರ ದಶಕದಲ್ಲಿ ಸಿಐಟಿಯು ಸಂಘದ ಪ್ರಭಾವಕ್ಕೆ ಒಳಗಾಗಿ ಅದರ ನೇತೃತ್ವದ ಆಟೋರಿಕ್ಷಾ ಚಾಲಕರ ಸಂಘ ಕಟ್ಟಿ ಬೆಳೆಸಲು ತಮ್ಮ ಜೀವನವನ್ನೇ ಮುಡುಪಾಗಿಟ್ಟರು. ಈ ಸಂಘಕ್ಕೆ ಸೂರ್ಯ ನಾರಾಯಣರಾವ್‌ರವರು ಅಧ್ಯಕ್ಷರಾಗಿದ್ದ ಅವಧಿಯುಲ್ಲಿ ಸಂಘದ ಪ್ರಧಾನ ಕಾರ್ಯದರ್ಶಿಯಾಗಿದ್ದರು ನಂತರ ಅಧ್ಯಕ್ಷರಾಗಿ ಹಲವು ವರ್ಷಗಳು ಸೇವೆ ಸಲ್ಲಿದರು.

ಕೇಂದ್ರ ಸರ್ಕಾರ ಪದೇ ಪದೇ ಪೆಟ್ರೋಲ್ ಬೆಲೆ ಏರಿಕೆಯಿಂದಾಗಿ ಆಟೋ ಪ್ರಯಾಣದರ ಏರಿಕೆ ಚಾಲಕರ ಮತ್ತು ನಾಗರೀಕರ ಮೇಲೆ ಹೊರೆಯಾಗುವುದನ್ನು ತಪ್ಪಿಸಲು, ಆಟೋಗಳಿಗೆ ಸಬ್ಸಿಡಿ ದರದಲ್ಲಿ ಪೆಟ್ರೋಲ್ ಒದಗಿಸುವಂತೆ ಬೆಂಗಳೂರಿನ ಆಟೋ ಚಾಲಕರು ನಡೆಸಿದ ಐತಿಹಾಸಿಕ ಹೋರಾಟ ನೇತೃತ್ವ ನೀಡಿದ ಸುಬ್ಬರಾವ್, ತಮ್ಮ ಅನಾರೋಗ್ಯವನ್ನೂ ಲೆಕ್ಕಿಸದೆ 7 ದಿನಗಳ ಉಪವಾಸ ಸತ್ಯಾಗ್ರಹದಲ್ಲಿ ಭಾಗವಹಿಸಿದ್ದರು. ಈ ಹೋರಾಟ ಸರ್ಕಾರ ಮತ್ತು ಸಾರ್ವಜನಿಕರ ಗಮನ ಸೆಳೆದಿತ್ತು.

ಆಟೋ ಮಾಲೀಕರೂ ಆಧಾಯ ತೆರಿಗೆ ನೀಡಬೇಕೆಂಬ ಸರ್ಕಾರದ ನಿಲುವಿನ ವಿರುದ್ಧದ ಹೋರಾಟ ಸೇರಿದಂತೆ ಆಟೋ ಚಾಲಕರ ಐತಿಹಾಸಿಕ ಹೋರಾಟಗಳಿಗೆ ಅವರು ನೇತೃತ್ವ ನೀಡಿದರು.

ಸಂಪಾದಕರಾಗಿ

ರಾಷ್ಟ್ರದಲ್ಲೇ ಪ್ರಥಮವಾಗಿ ಆಟೋಚಾಲಕರೇ ಹೊರಡಿಸುತ್ತಿದ್ದ ಪತ್ರಿಕೆ ಆಟೋರಿಕ್ಷಾ ಚಾಲಕ ಪತ್ರಿಕೆಯನ್ನು ಹೊರ ತರುವಲ್ಲಿ ಶ್ರಮವಹಿಸಿದ್ದ ಸುಬ್ಬರಾವ್ ಅದರ ಸಂಪಾದಕರೂ ಆಗಿದ್ದರು.

ಸಿಪಿ.ಐ(ಎಂ) ಪಕ್ಷದ ಸದಸ್ಯರಾಗಿ, ಅದರ ಆಟೋ ಶಾಖೆಯ ಕಾರ್ಯದರ್ಶಿಯಾಗಿ ಹೀಗೆ ಹಲವು ರೀತಿಯಲ್ಲಿ ಅವರು ಸೇವೆಸಲ್ಲಿಸಿದ್ದಾರೆ.

ಕಟ್ಟಡ ಕಾರ್ಮಿಕರ ಸಮಾವೇಶ

ಮಂಗಳೂರಿನ ಉಳ್ಳಾಲ ವಲಯ ಕಟ್ಟಡ ಮತ್ತು ನಿರ್ಮಾಣ ಕಾರ್ಮಿಕರ ಸಮಾವೇಶವು ಕೆ.ಶಶೀಂದ್ರ ರುಕ್ಯಾನ್‌ರವರ ಅಧ್ಯಕ್ಷತೆಯಲ್ಲಿ ತೊಕ್ಕೊಟು ಆಮಂತ್ರಣ ಹಾಲ್‌ನಲ್ಲಿ ನಡೆಯಿತು.

ಕಟ್ಟಡ ಮತ್ತು ನಿರ್ಮಾಣ ಕಾರ್ಮಿಕ ಸಂಘದ ದಕ್ಷಿಣ ಕನ್ನಡ ಜಿಲ್ಲಾ ಸಮಿತಿ ಅಧ್ಯಕ್ಷರಾದ ಬಿ.ಎಂ.ಭಟ್ಟರವರು ಈ ಸಮಾವೇಶವನ್ನು ಉದ್ಘಾಟಿಸಿದರು. ಮಂದಿರ, ಮಸೀದಿ, ಚರ್ಚ್‌ಗಳನ್ನು, ಜನವಾಸದ ಮನೆಗಳನ್ನು ಕೈಗಾರಿಕೆಗಳನ್ನು ಕಟ್ಟಿದಂತಹ ಕಾರ್ಮಿಕರ ಹಿತದೃಷ್ಟಿಯನ್ನು ಯಾರು ಕಂಡುಕೊಂಡಿಲ್ಲ. ಕಟ್ಟಡ ಕಾರ್ಮಿಕರಿಗೆ ಅವರ ಬದುಕಿಗೆ ಯಾವ ಸರಕಾರದ ಕಾನೂನು ಸವಲತ್ತು ಜಾರಿ ಮಾಡಿಲ್ಲ, ಕಾನೂನು ಸವಲತ್ತುಗಳನ್ನು ಜಾರಿ ಮಾಡಿಸಲು ಕಟ್ಟಡ ಮತ್ತು ನಿರ್ಮಾಣ ಕಾರ್ಮಿಕರು ಸಂಘ ಕಟ್ಟಿ ಸವಲತ್ತು ಜಾರಿ ಮಾಡಲು ಸಂಘಟಿತ ಹೋರಾಟ ನಡೆಸಲು ಒಗ್ಗಟ್ಟಾಗಬೇಕಾಗಿದೆ ಎಂದರು.

ಸಮಾವೇಶಕ್ಕೆ ಅತಿಥಿಯಾಗಿ ಅಖಿಲ ಭಾರತ ವಕೀಲರ ಸಂಘದ ಯಶವಂತ ಮರೋಳಿ, ಬಂದಿದ್ದರು. ವೇದಿಕೆಯಲ್ಲಿ ಡಿವೈಎಫ್ಐ ಉಳ್ಳಾಲ ವಲಯದ ಅಧ್ಯಕ್ಷರಾದ ರಾಮಚಂದ್ರ ಬಬ್ಬುಕಟ್ಟೆ, ವಕೀಲರು, ರೈತಕಾರ್ಮಿಕ ಮುಂದಾಳು ರಾಮಚಂದ್ರ ಉಚ್ಚಿಲ್, ಸಿ.ಐ.ಟಿ.ಯು ಜಿಲ್ಲಾ ಕಾರ್ಯದರ್ಶಿ ವಸಂತ ಆಚಾರಿ, ಕಟ್ಟಡ ಮತ್ತು ನಿರ್ಮಾಣ ಸಂಘದ ಜಿಲ್ಲಾ ಜೊತೆ ಕಾರ್ಯದರ್ಶಿ ಯು.ಜಯಂತ ನಾಯಕ್, ಕೆ.ಜನಾರ್ಧನ, ಕೆ.ಜಯರಾಮ, ರವೀಂದ್ರ ಅಂಬ್ಲಮೊಗರು, ಕೇಶವ ಕೊಲ್ಯ, ಶಶಿದರ ಪೆರ್ಮನ್ನೂರು, ಸದಾನಂದ ಬೆಳ್ತಂಗಡಿ, ಇವರುಗಳು ಉಪಸ್ಥಿತರಿದ್ದರು. ಈ ಸಮಾವೇಶದಲ್ಲಿ ಹೊಸ ಸಮಿತಿಯನ್ನು ರಚಿಸಲಾಯಿತು. ಉಳ್ಳಾಲ ವಲಯದ ಕಟ್ಟಡ ಮತ್ತು ನಿರ್ಮಾಣ ಕಾರ್ಮಿಕರ ಸಂಘದ ಅಧ್ಯಕ್ಷರಾಗಿ ಕೆ.ಶಶೀಂದ್ರ ಕುಕ್ಯಾನ್, ಕಾರ್ಯದರ್ಶಿಯಾಗಿ ಯು.ಜಯಂತ ನಾಯಕ್, ಉಪಾಧ್ಯಕ್ಷರುಗಳು-ಸೀತಾರಾಮ ಮಾಡುರು, ಕೆ.ಜನಾರ್ಧನ ಕುತ್ತಾರ್, ಈಶ್ವರ ಬಂಗೇರ, ಸರಸ್ವತಿ ಕೊಲನಿ ಜೊತೆ ಕಾರ್ಯದರ್ಶಿಗಳು: ಚೇತನ್ ಆನಂದ್ ಕುತ್ತಾರ್, ಅಜೀಜ್ ಹರೇಕಳ, ಕೆ.ಜಯರಾಮ ಕುತ್ತಾರ್ ತೇವುಲ. ಕೋಶಾಧಿಕಾರಿಯಾಗಿ ಮಾದವ ಕೋಟೆಕಾರ್ ಬೀರಿ ಹಾಗೂ 35 ಜನರ ಸಮಿತಿಯನ್ನು ಆರಿಸಲಾಯಿತು.

ಶ್ರದ್ಧಾಂಜಲಿ

ಉಳ್ಳಾಲ ವಲಯ ಕುಂಪಲ ಪ್ರದೇಶದ ಸಂಗಾತಿ ದೇರಣ್ಣ ಪೂಜಾರಿಯವರು ಇತ್ತೀಚೆಗೆ ನಿಧನ ಹೊಂದಿದರು.

ದೇರಣ್ಣರವರು ಹಂಚಿನ ಕಾರ್ಮಿಕರ ಸಂಘಟನೆಯಲ್ಲಿ ಹಾಗೂ ಸಾಮೂಹಿಕ ಸಂಘಟನೆಯಲ್ಲಿ ಕಾರ್ಯಕರ್ತರಾಗಿ ದುಡಿಯುತ್ತಿದ್ದರು. ಕಾರ್ಯಕರ್ತರ ಚಟುವಟಿಕೆಗಳಿಗೆ ಪ್ರೋತ್ಸಾಹ ನೀಡುತ್ತಿದ್ದರು.

ಇವರಿಗೆ 65 ವರ್ಷ ಪ್ರಾಯವಾಗಿದ್ದು ಪತ್ನಿ ಹಾಗೂ ಮಕ್ಕಳನ್ನು ಅಗಲಿದ್ದಾರೆ.

ಸಿಪಿಐ(ಎಂ) ಕುಂಪಲ ಶಾಖೆ ಹಾಗೂ ಡಿವೈಎಫ್ಐ ಘಟಕವೂ ಇವರ ನಿಧನಕ್ಕೆ ಶ್ರದ್ಧಾಂಜಲಿ ಅರ್ಪಿಸಿದೆ.

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಬೀಡಿ ಕಾರ್ಮಿಕರ ಸಂಘಟನೆ ಚಳುವಳಿಗೆ ಒಂದು ಧೀಮಂತವಾದ ಚರಿತ್ರೆ ಇದೆ. ಉದಾರೀಕರಣದ ಇಂದಿನ ಕಾಲದಲ್ಲಿ ಬೀಡಿ ಉದ್ಯಮವೂ ಧಾಳಿಗೆ ಒಳಗಾಗಿದೆ. ಕೆಲಸಗಾರರು ಕೆಲಸ ಕಳೆದುಕೊಳ್ಳುತ್ತಿದ್ದಾರೆ. ಇದರೊಂದಿಗೆ ಮಾಲೀಕರ ಶೋಷಣೆ ಹಲವು ತಂತ್ರಗಳೂ ಹೊಸ ರೂಪ ಪಡೆಯುತ್ತವೆ. ಇಂತಹ ಸಂದಿಗ್ದ ಸ್ಥಿತಿಯಲ್ಲಿ ನಡೆದ ಸಮ್ಮೇಳನ ಇಡೀ ಉದ್ಯಮ ಹಾಗೂ ಬೀಡಿ ಕಾರ್ಮಿಕರ ಚಳುವಳಿಗೆ ಚೈತನ್ಯ ನೀಡುವ ದಿಕ್ಕಿನಲ್ಲಿ ಹೆಜ್ಜೆ ಇರಿಸಿದೆ.

ಸಂಘಟನೆಗೆ ಹೊಸ ಚೈತನ್ಯ ನೀಡಿದ ಬೀಡಿ ಕಾರ್ಮಿಕರ ದ.ಕ. ಜಿಲ್ಲಾ ಸಮ್ಮೇಳನ

ಬಿ.ಮಾಧವ

ದಕ್ಷಿಣ ಕನ್ನಡ ಜಿಲ್ಲೆಯ ಬೀಡಿ ಕಾರ್ಮಿಕರ ಸಂಘಟಿತ ಚಳುವಳಿಯ ಸುಮಾರು 68 ವರ್ಷಗಳ ಭವ್ಯ ಪರಂಪರೆಗೆ ಒಂದು ಹೊಸ ಚೈತನ್ಯ ನೀಡಿದ ಜಿಲ್ಲಾ ಸಮ್ಮೇಳನವು ಮಾರ್ಚ್ 11ರಿಂದ 13ರವರೆಗೆ ಬಂಟ್ವಾಳ ತಾಲೂಕಿನ ಪಾಣೆಮಂಗಳೂರಿನಲ್ಲಿ ಜರಗಿತು. ಸ್ವಾತಂತ್ರ್ಯ ಹೋರಾಟದ ಅಂಗವಾಗಿ ಮಂಗಳೂರಿನಲ್ಲಿ 1934ರಲ್ಲೇ ಶ್ರೀಮತಿ ಕಮಲಾದೇವಿ ಚಟ್ಟೋಪಾಧ್ಯಾಯರಿಂದ ಸಂಘಟಿಸಲಾದ ಬೀಡಿ ಕಾರ್ಮಿಕರ ಚಳುವಳಿಯಲ್ಲಿ ಬಹುತೇಕ ಆರಂಭದ ಕಾಲಘಟ್ಟದಲ್ಲೇ ಸಕ್ರಿಯವಾಗಿ ಭಾಗವಹಿಸುತ್ತಾ ಬಂದ ಪರಂಪರೆ ಬಂಟ್ವಾಳದ ಬೀಡಿ ಕಾರ್ಮಿಕರದ್ದು. ಇದೀಗ ಬೀಡಿ ಕೈಗಾರಿಕೆಯ ಭವಿಷ್ಯದ ಕುರಿತು ಪ್ರತಿಕೂಲ ವಾತಾವರಣ ನಿರ್ಮಾಣಗೊಳ್ಳುತ್ತಿರುವಾಗ ದಕ್ಷಿಣ ಕನ್ನಡ ಜಿಲ್ಲಾ ಸಮ್ಮೇಳನವನ್ನು ಬಂಟ್ವಾಳದಲ್ಲಿ ಸಂಘಟಿಸಿದ್ದು ಮಹತ್ವ ಪೂರ್ಣವಾಗಿತ್ತು.

1948ರಲ್ಲಿ ಕನಿಷ್ಟ ಕೂಲಿ ಕಾಯಿದೆ ಮತ್ತು ಇ.ಎಸ್.ಐ ಕಾಯಿದೆ ಬಂದಾಗ ಇವುಗಳು ಬೀಡಿ ಕೈಗಾರಿಕೆಯ ಕಾರ್ಮಿಕರಿಗೆ ಅನ್ವಯವಾಗುವುದನ್ನು ತಪ್ಪಿಸುವ ಉದ್ದೇಶದಿಂದ ಕಾರ್ಮಿಕ ಸಂಘಟನೆಯನ್ನು ನಾಶಮಾಡಲು ಮಾಲಕರು ಪ್ರಯತ್ನಿಸುತ್ತಿದ್ದಾಗ, ದೇಶಾದ್ಯಂತ ಕಾರ್ಮಿಕ ಚಳುವಳಿಯನ್ನು ದಮನಿಸುವ ನೆಹರೂ ಸರಕಾರದ ಕ್ರಮವು ಅವರ ಸಹಾಯಕ್ಕೆ ಬಂತು. ಕಾರ್ಮಿಕ ನಾಯಕರನ್ನೆಲ್ಲಾ ಬಂಧಿಸಿ ಜೈಲಿಗೆ ಹಾಕಿ, ಕಾರ್ಮಿಕ ಸಂಘಟನೆಗಳ ಕಚೇರಿಗಳ ಮೇಲೆ ಪೊಲೀಸರು ದಾಳಿ ಮಾಡುತ್ತಿದ್ದ ಅಂದಿನ ಕರಾಳ ದಿನಗಳ ದುರ್ಲಾಭ ಪಡೆದು ಬೀಡಿ ಮಾಲಕರು, ಅನೇಕ ಕಾರ್ಮಿಕರಿಗೆ ಕಂಟ್ರಾಕ್ಟ್ ಕೊಟ್ಟು, ತಮ್ಮ ಪ್ರದೇಶಗಳಲ್ಲಿ ಕಾರ್ಮಿಕರಿಂದ ಮನೆಗಳಲ್ಲಿ ಬೀಡಿ ಕಟ್ಟಿಸಿ ತರುವಂತೆ ಅವರನ್ನು ಕಳುಹಿಸಿದರು. ಬೀಡಿ ಕಾರ್ಖಾನೆಗಳನ್ನು ಒಂದೊಂದಾಗಿ ಮುಚ್ಚಿದರು. ಮನೆಯಲ್ಲಿ ಬೀಡಿ ಕಟ್ಟುವ ಅವಕಾಶ ದೊರೆತ ಕಾರಣ, ಅಂದಿನ ಸಾಮಾಜಿಕ ಪರಿಸ್ಥಿತಿಯಲ್ಲಿ ಮನೆಯಿಂದ ಹೊರಗೆ ಹೋಗಿ ಕೆಲಸ ಮಾಡಲು ಹಿಂಜರಿಯುತ್ತಿದ್ದ ಮಹಿಳೆಯರೂ ಬೀಡಿ ಕಟ್ಟಲಾರಂಭಿಸಿದರು. 1946ರ ಧೀರ ಹೋರಾಟದ ಫಲವಾಗಿ ಬೀಡಿ ಕಾರ್ಮಿಕರಿಗೆ ಲಭಿಸಿದ ಬೋನಸ್, ಕಾರ್ಖಾನೆಗಳಲ್ಲಿ ಸಿಗುತ್ತಿದ್ದ ಇತರ ಸವಲತ್ತುಗಳನ್ನೂ ಮಾಲಕರು ಕಿತ್ತುಕೊಂಡರು. ಮಹಿಳೆಯರು ಬೀಡಿ ಕಟ್ಟಲಾರಂಭಿಸಿದ್ದು ಇಂತಹ ಪರಿಸ್ಥಿತಿಯಲ್ಲಿ ಉದ್ದದ ಉಗುರು ಬೆಳೆಸಿದ ಪುರುಷ ಕಾರ್ಮಿಕರನ್ನು ಪೊಲೀಸರು ಸಿಕ್ಕಲ್ಲಿ ಹೊಡೆಯುತ್ತಿದ್ದ ಅಂದಿನ ದಬ್ಬಾಳಿಕೆಯ ದಿನಗಳಲ್ಲೂ ದ.ಕ. ಜಿಲ್ಲೆಯ ಕಮ್ಯೂನಿಸ್ಟ್ ಕಾರ್ಯಕರ್ತರು ಮನೆ ಮನೆಗೆ ಭೇಟಿ ನೀಡಿ ಕಾರ್ಮಿಕರನ್ನು ಸಂಘಟಿಸಿ, 1952ರ ವೇಳೆಗೆ ಬಲಿಷ್ಟವಾದ ಸಂಘಟನೆಯ ಶಕ್ತಿಯನ್ನು ಪ್ರದರ್ಶಸಿದ್ದನ್ನು ಹೆಮ್ಮೆಯಿಂದ ನೆನೆಯಬಹುದು.

ಈಗ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಬೀಡಿ ಕೈಗಾರಿಕೆಯಲ್ಲಿ ಸುಮಾರು ನಾಲ್ಕು ಲಕ್ಷ ಕಾರ್ಮಿಕರು ದುಡಿಯುತ್ತಿದ್ದಾರೆ. ಬೀಡಿ ಕಾರ್ಮಿಕರ ಬಹುತೇಕ ಎಲ್ಲಾ ಕುಟುಂಬಗಳೂ ಬೀಡಿಯ ಕೆಲಸವನ್ನೇ ಅವಲಂಬಿಸಿವೆ. ಇಂತಹ ಪರಿಸ್ಥಿತಿಯಲ್ಲಿ "ಬೀಡಿ ಹೋಗುತ್ತದಂತೆ" ಎಂಬ ಪ್ರಚಾರಗಳು ಅವರನ್ನು ಕಂಗೆಡಿಸಿವೆ. ಸಮ್ಮೇಳನವನ್ನುದ್ದೇಶಿಸಿ ಮಾತನಾಡಿದ ಸಿಐಟಿಯು ರಾಜ್ಯಾದ್ಯಕ್ಷ ಬಿ. ಮಾಧವ ಅವರು ಹೇಳಿದ ಮೊದಲ ಮಾತು "ಬೀಡಿ ಕೈಗಾರಿಕೆ ಹೋಗುವುದಿಲ್ಲ. ಯಾಕೆಂದರೆ ಲಕ್ಷಾಗಟ್ಟಲೆ ಕಾರ್ಮಿಕರನ್ನು ನಿರುದ್ಯೋಗಕ್ಕೆ ತಳ್ಳಲು ಸಿಐಟಿಯು ಬಿಡುವುದಿಲ್ಲ. "ಬೀಡಿ ಸೇವನೆ ಆರೋಗ್ಯಕ್ಕೆ ಒಳ್ಳೆಯದೋ ಕೆಟ್ಟದೋ ಎಂಬುದು ಬೇರೆ ವಿಚಾರ. ಆದರೆ ಲಕ್ಷಗಟ್ಟಲೆ ಕಾರ್ಮಿಕರ ಜೀವನಾಧಾರವಾದ ಕೈಗಾರಿಕೆಯನ್ನು ಇಂದು ಉಳಿಸಲೇ ಬೇಕಾಗಿದೆ. ಇದು ಸಿಐಟಿಯುವಿನ ಮುಂದಿರುವ ಗಂಭೀರ ಸವಾಲು.

ಉದ್ಘಾಟನಾ ಸಮಾರಂಭ.

ಜೀವನದುದ್ದಕ್ಕೂ ಬೀಡಿ ಕೈಗಾರಿಕೆಯಲ್ಲೇ ದುಡಿಯುತ್ತಾ ಬಂದ ಹಿರಿಯ ಸಂಗಾತಿ ಎಂ. ಮೋನಪ್ಪ ಸಪಲ್ಯರು ಧ್ವಜಾರೋಹಣ ಮಾಡುವುದರೊಂದಿಗೆ ಮಾರ್ಚ್ 11ರಂದು ಬೆಳಿಗ್ಗೆ ಕಾಮ್ರೇಡ್ ಪಿ. ರಾಮಚಂದ್ರ ರಾವ್ ನಗರ (ಸುಮಂಗಲ ಹಾಲ್, ಪಾಣೆಮಂಗಳೂರು)ದಲ್ಲಿ ಸಮ್ಮೇಳನದ ಕಲಾಪಗಳು ಆರಂಭವಾದವು. ಸಮ್ಮೇಳನದ ವೇದಿಕೆಗೆ "ಕಾಮ್ರೆಡ್ ಎಸ್. ಸೂರ್ಯನಾರಾಯಣ ರಾವ್ ವೇದಿಕೆ" ಎಂದು ಹೆಸರಿಡಲಾಗಿತ್ತು.

ಸಿಐಟಿಯು ಕರ್ನಾಟಕ ರಾಜ್ಯ ಪ್ರಧಾನ ಕಾರ್ಯದರ್ಶಿ ಕಾಮ್ರೇಡ್ ವಿ.ಜೆ.ಕೆ. ನಾಯರ್ ಅವರು ಉದ್ಘಾಟನಾ ಭಾಷಣ ಮಾಡುತ್ತಾ, ಬೀಡಿ ಕೈಗಾರಿಕೆಯ ಬಿಕ್ಕಟ್ಟುಗಳಿಗೆ ಕೇಂದ್ರ ಸರಕಾರದ ನೀತಿಯೇ ಕಾರಣ ಎಂದು ವಿವರಿಸಿದರು. ವಾರ್ಷಿಕ 20 ಲಕ್ಷದ ವರೆಗಿನ ಬೀಡಿ ಉತ್ಪಾದನೆ ಮಾಡುವವರಿಗೆ ತೆರಿಗೆ ವಿನಾಯಿತಿ ನೀಡದ ಸರಕಾರದ ಕ್ರಮದಿಂದಾಗಿ ಕಳ್ಳ ಬೀಡಿಗಳ ಹಾವಳಿ ವ್ಯಾಪಕವಾಗಿದೆ. ಕಾರ್ಮಿಕರ ಕಾನೂನುಬದ್ಧ ಸವಲತ್ತುಗಳನ್ನು ನಿರಾಕರಿಸಲು ಮಾಲಕರು ಈ ವ್ಯವಸ್ಥೆಯನ್ನು ಪ್ರೋತ್ಸಾಹಿಸುತ್ತಾರೆ. ಈ ಪರಿಸ್ಥಿತಿಯಲ್ಲಿ ತಮ್ಮ ಬದುಕನ್ನು ಸಂರಕ್ಷಿಸಲು ಬೀಡಿ ಕಾರ್ಮಿಕರು ಬೀಡಿ ಕೈಗಾರಿಕೆಯ ಸಂರಕ್ಷಣೆಗಾಗಿ ಹೋರಾಡಬೇಕಾಗಿದೆ ಎಂದು ಅವರು ಕರೆನೀಡಿದರು.

ರಾಜ್ಯ ಸಿಐಟಿಯು ಅಧ್ಯಕ್ಷರಾದ ಬಿ. ಮಾಧವ, ರಾಜ್ಯ ಕಾರ್ಯದರ್ಶಿಗಳಲ್ಲೊಬ್ಬರಾದ ಎಸ್. ವರಲಕ್ಷ್ಮಿ ಮತ್ತು ರಾಜ್ಯ ಬೀಡಿ ವರ್ಕರ್ಸ್ ಫೆಡರೇಶನಿನ ಕಾರ್ಯದರ್ಶಿ ಕೆ. ಶಂಕರ್ ಮಾತನಾಡಿದರು. ಎಸ್.ಕೆ.ಬೀಡಿ ವರ್ಕರ್ಸ್ ಫೆಡರೇಶನಿನ ಅಧ್ಯಕ್ಷರಾದ ಕೆ.ಆರ್. ಶ್ರೀಯಾನ್ ಅಧ್ಯಕ್ಷತೆ ವಹಿಸಿದ್ದರು.

ಪ್ರತಿನಿಧಿ ಸಭೆ.

ಮಾರ್ಚ್ 11 ಮತ್ತು 12 ರಂದು ನಡೆದ ಪ್ರತಿನಿಧಿ ಸಭೆಯಲ್ಲಿ ಜಿಲ್ಲೆಯ ವಿವಿಧ ಭಾಗಗಳಿಂದ ಬಂದ ಸುಮಾರು 300 ಪ್ರತಿನಿಧಿಗಳು ಉತ್ಸಾಹದಿಂದ ಭಾಗವಹಿಸಿದರು.

ಕೆ.ಆರ್. ಶ್ರೀಯಾನ್ ಅಧ್ಯಕ್ಷತೆ ವಹಿಸಿದ್ದರು. ಕಾರ್ಯದರ್ಶಿ ಜೆ ಬಾಲಕೃಷ್ಣ ಶೆಟ್ಟರು ಮಂಡಿಸಿದ ವರದಿಯ ಮೇಲೆ ಸ್ಫೂರ್ತಿಯುತವಾದ ಚರ್ಚೆ ನಡೆಯಿತು. ಹಕ್ಕುಗಳ ರಕ್ಷಣೆಗಾಗಿ ಸಂಘಟನೆಯನ್ನು ಬಲಪಡಿಸುವ ಮತ್ತು ಧೈರ್ಯದಿಂದ ಹೋರಾಡುವ ಸ್ಫೂರ್ತಿ ಎಲ್ಲಾ ಪ್ರತಿನಿಧಿಗಳಲ್ಲೂ ಎದ್ದು ಕಾಣುತ್ತಿತ್ತು. ಕಾರ್ಮಿಕರ ಚಳುವಳಿಯನ್ನು ಒಡೆಯಲು ಪ್ರಯತ್ನಿಸುತ್ತಿರುವ ಕೋಮುವಾದಿಗಳ ಮತ್ತು ವಿದೇಶೀ ನೆರವಿನ ಸ್ವಯಂಸೇವಾ ಸಂಸ್ಥೆಗಳ ಪಿತೂರಿಗಳ ಕುರಿತು ಅನೇಕ ಪ್ರತಿನಿಧಿಗಳು ತಮ್ಮ ಆಕ್ರೋಶವನ್ನು ವ್ಯಕ್ತಪಡಿಸಿದರು.

ನಿರ್ಣಯಗಳು :

-ಬೀಡಿಯ ಮೇಲಿನ ಕೇಂದ್ರ ಅಬಕಾರಿ ತೆರಿಗೆ ಮತ್ತು ಕಲ್ಯಾಣ ಸೆಸ್ಸನ್ನು ಹಿಂತೆಗೆದುಕೊಳ್ಳುವ ಮೇಲೆ ಹಾಕಬೇಕು, ಬೀಡಿ ಕಾರ್ಮಿಕರಿಗೆ ರಾಷ್ಟ್ರೀಯ ಮಟ್ಟದ ಸಮಾನ ಕನಿಷ್ಟ ಕೂಲಿ ಜಾರಿಯಾಗಬೇಕು, ಧೂಮಪಾನ ನಿಷೇಧ ಮಸೂದೆ ಹಿಂತೆಗೆಯಬೇಕು, ಬೀಡಿ ಕಾರ್ಮಿಕರಿಗೆ ವಾರದಲ್ಲಿ ಆರು ದಿನಗಳ ಕೆಲಸ ಸಿಗಬೇಕು ಹಾಗೂ ಕೆಲಸ ಕೊಡದ ದಿನಗಳಿಗೆ ಪರಿಹಾರ ಕೊಡಬೇಕು, ವಿದ್ಯುತ್ ದರ ಏರಿಕೆ ಹಿಂತೆಗೆಯಬೇಕು, ವಿದ್ಯುತ್ ಕ್ಷೇತ್ರದ ಖಾಸಗೀಕರಣ ಕೈಬಿಡಬೇಕು, ಬೀಡಿ ಕಾರ್ಮಿಕರ ಕಲ್ಯಾಣ ನಿಧಿಯಿಂದ ಆಸ್ಪತ್ರೆಗಳನ್ನು ಸ್ಥಾಪಿಸಬೇಕು, ಇತ್ಯಾದಿ ಪ್ರಶ್ನೆಗಳ ಕುರಿತು ನಿರ್ಣಯಗಳನ್ನು ಅಂಗೀಕರಿಸಲಾಯಿತು.

ಬೃಹತ್ ರ್‍ಯಾಲಿ ಬಹಿರಂಗ ಸಭೆ : ಬಿ.ಸಿ. ರೋಡ್‌ನ ಚರಿತ್ರೆಯಲ್ಲಿ ಅಷ್ಟು ದೊಡ್ಡ ಮೆರವಣಿಗೆ ನಡೆದಿರಲಿಲ್ಲ. ಮೈಲುದ್ದಕ್ಕೆ ವಾಹನ ಸಂಚಾರ ಸ್ಥಗಿತವಾಯಿತು. ರಾಷ್ಟ್ರೀಯ ಹೆದ್ದಾರಿ 48ರಲ್ಲಿ ನಡೆದ ಈ ಅಭೂತಪೂರ್ವ ಮೆರವಣಿಗೆಯ ಸುದ್ದಿ ಜಿಲ್ಲೆಯಾದ್ಯಂತ ಹರಡಿತು. ಶೇಕಡಾ 95ರಷ್ಟು ಮಹಿಳೆಯರೇ ಇದ್ದ ಈ ಮೆರವಣಿಗೆಯು ಕೈಕಂಭದ ಬಳಿ ಇರುವ ಪೂಂಜಾ ಗ್ರೌಂಡ್‌ನಲ್ಲಿ ನಡೆದ ಬಹಿರಂಗ ಸಭೆಯಲ್ಲಿ ಸಮಾರೋಪಗೊಂಡಿತು. ಬಹಿರಂಗ ಸಭೆಯ ಅಧ್ಯಕ್ಷತೆಯನ್ನು ಕೆ. ಆರ್. ಶ್ರೀಯಾನ್ ವಹಿಸಿದ್ದರು.

ಬಹಿರಂಗ ಸಭೆ ಉದ್ದೇಶಿಸಿ ಕಾಸರಗೋಡಿನ ಸಿಪಿಐ(ಎಂ) ಲೋಕಸಭಾ ಸದಸ್ಯರಾದ ಟಿ. ಗೋವಿಂದನ್ ಅವರು ಮಾತನಾಡುತ್ತಾ, ದಕ್ಷಿಣ ಕನ್ನಡ ಜಿಲ್ಲೆಯ ಬೀಡಿ ಕಾರ್ಮಿಕರ ಸಮರಶೀಲ ಚಳುವಳಿಗಳ ಪರಂಪರೆಯನ್ನು ಶ್ಲಾಘಿಸಿದರು. ಇಂದು ಬೀಡಿ ಕೈಗಾರಿಕೆಯು ಎದುರಿಸುತ್ತಿರುವ ಸಮಸ್ಯೆಗಳಿಗೆ ಕೇಂದ್ರ ಸರಕಾರದ ನೀತಿಗಳೇ ಕಾರಣ ಎಂದು ವಿವರಿಸಿದ ಅವರು, ಈ ನೀತಿಗಳ ವಿರುದ್ಧ ಸಿಪಿಐ(ಎಂ)ಪಾರ್ಲಿಮೆಂಟಿನ ಒಳಗೂ ಹೊರಗೂ ಹೋರಾಟಗಳನ್ನು ನಡೆಸುತ್ತಿದೆ ಎಂದು ಹೇಳಿದರು. ಅಮೇರಿಕದ ಮುಂದೆ ಮಂಡಿಯೂರುತ್ತಿರುವ ವಾಜಪೇಯಿ ಸರಕಾರವು ಇರಾಕಿನ ಮೇಲೆ ಆಕ್ರಮಣಕಾರಿ ಯುದ್ಧ ನಡೆಸುವ ಅಮೇರಿಕದ ಯುದ್ಧಕೋರ ನೀತಿಯನ್ನು ಸ್ಪಷ್ಟವಾಗಿ ಖಂಡಿಸಲು ವಿಫಲವಾಗಿದೆ ಎಂದು ಹೇಳಿದರು. ಗಾಂಧೀಜಿಯನ್ನು ಹತ್ಯೆಗೈದ ಗೋಡ್ಸೆಯ ಸಹಚರನೂ ಕೋಮುವಾದಿ ಹಿಂದುತ್ವದ ಮತ್ತು ದ್ವಿರಾಷ್ಟ್ರ ಸಿದ್ಧಾಂತದ ಜನಕನೂ ಆದ ವಿ.ಡಿ. ಸಾವರ್ಕರ್‌ನ ಭಾವಚಿತ್ರವನ್ನು ಸಂಸತ್ ಭವನದಲ್ಲಿ ಗಾಂಧೀಜಿಯ ಭಾವಚಿತ್ರದ ಎದುರಿನಲ್ಲೇ ಇರಿಸಿ ಅನಾವರಣಗೈಯುವ ಮೂಲಕ ವಾಜಪೇಯಿ ಸರಕಾರ ನೈಜ ರಾಮಭಕ್ತನಾದ ಗಾಂಧೀಜಿಯನ್ನು ಅವಮಾನಿಸಿದೆ ಎಂದು ಅವರು ಕಳವಳ ವ್ಯಕ್ತಪಡಿಸಿದರು. ಕಾರ್ಮಿಕ ವರ್ಗವು ಕೋಮುವಾದವನ್ನು ದೃಢವಾಗಿ ವಿರೋಧಿಸಿ ದುಡಿಯುವ ಜನರ ಐಕ್ಯತೆಯನ್ನು

ಪುಟ 11 ಕ್ಕೆ



ಸಂಘಟನೆಯ ಬಲದಿಂದ ಹೋರಾಡುವ ಛಲದಿಂದ ಸಾಗಿರುವ ಬೃಹತ್ ಮೆರವಣಿಗೆ

ನೂತನ ಪದಾಧಿಕಾರಿಗಳು

ಸೌತ್ ಕೆನರಾ ಬೀಡಿ ವರ್ಕರ್ಸ್ ಫೆಡರೇಶನಿನ ನೂತನ ಪದಾಧಿಕಾರಿಗಳಾಗಿ ಈ ಕೆಳಗಿನವರನ್ನು ಆರಿಸಲಾಯಿತು.

ಅಧ್ಯಕ್ಷರು - ಜೆ. ಬಾಲಕೃಷ್ಣ ಶೆಟ್ಟಿ
ಉಪಾಧ್ಯಕ್ಷರು - ಯು. ಬಿ. ಲೋಕಯ್ಯ
ಬಿ. ಸಂಜೀವ ಬಂಗೇರ
ಕೆ. ಬಾಬು ದೇವಾಡಿಗ
ಪದ್ಮಾವತಿ ಎಸ್. ಶೆಟ್ಟಿ
ಕಾರ್ಯದರ್ಶಿ - ಸುಕುಮಾರ್
ಜತೆ ಕಾರ್ಯದರ್ಶಿಗಳು- ಕೆ. ಮಂಜಪ್ಪ
ರಮಣಿ
ಸದಾಶಿವ ದಾಸ್
ಕೆ. ಯಾದವ ಶೆಟ್ಟಿ
ಕೋಶಾಧಿಕಾರಿ - ಬಿ. ಎಂ. ಭಟ್

ಇವರನ್ನೊಳಗೊಂಡ ಫೆಡರೇಶನಿನ ಹೊಸ ಸಮಿತಿಯನ್ನು ಆರಿಸಲಾಯಿತು.

ಹಿಂದೆಂದಿಗಿಂತಲೂ ಒಂಟಿಯಾ

ಇರಾಕ್ ಮೇಲೆ ಯುದ್ಧ

ಮಾರ್ಚ್ 19, 2003 ಈಗಾಗಲೇ 21ನೇ ಶತಮಾನದ ಇತಿಹಾಸದಲ್ಲಿ ಕರಾಳದಿನವಾಗಿ ದಾಖಲಾಗಿ ಬಿಟ್ಟಿದೆ. ಇರಾಕ್ ಮೇಲೆ ಅಮೆರಿಕ ಮತ್ತು ಬ್ರಿಟಿಷ್ ಪಡೆಗಳು ಭೀಕರ ಮಿಲಿಟರಿ ಧಾಳಿ ಆರಂಭಿಸಿವೆ. ಆದರೆ ಮೂರು ಮುಖ್ಯ ಬೆಳವಣಿಗೆಗಳು (ಯುದ್ಧದ ಮೊದಲು ಮತ್ತು ಆಮೇಲೆಯೂ ಮುಂದುವರೆಯುತ್ತಿರುವ) ಇರಾಕ್ ಯುದ್ಧದಿಂದ ಅಧ್ಯಕ್ಷ ಬುಶ್ ಸಾಧಿಸಬೇಕೆಂದಿರುವ ಏಕಚಕ್ರಾಧಿಪತ್ಯದ ಉದ್ದೇಶಗಳು ಸಾಧ್ಯವಾಗದೆ ಹೋಗುವವು ಎಂಬ ಸ್ಪಷ್ಟ ಸೂಚನೆಗಳನ್ನು ಕೊಡುತ್ತಿವೆ. ಅಮೆರಿಕ ಹಿಂದೆಂದಿಗಿಂತಲೂ ಅಂತರ್ರಾಷ್ಟ್ರೀಯವಾಗಿ ಏಕಾಂಗಿಯಾಗಿರುವುದು ಫ್ರಾನ್ಸ್-ಜರ್ಮನಿಗಳ ಜತೆ ತೀವ್ರ ರಾಜಕೀಯ-ಮಿಲಿಟರಿ ಒಡಕು, ಜಗತ್ತಿನಾದ್ಯಂತ (ಅದರಲ್ಲೂ ಅಮೆರಿಕ-ಯುರೋಪ್‌ಗಳಲ್ಲು) ವ್ಯಾಪಕ ಮತ್ತು ದೃಢವಾದ ಜನತಾವಿರೋಧ - ಇವೇ ಆ ಮೂರು ಬೆಳವಣಿಗೆಗಳು

ಇರಾಕ್ ಮೇಲೆ ಯುದ್ಧ ಆರಂಭವಾಗಿದೆ. ಆದರೆ ಈ ಯುದ್ಧ ಆರಂಭಿಸುವ ಮೊದಲಿನ ಮತ್ತು ಆಮೇಲಿನ ಸಂದರ್ಭದಲ್ಲಿ ಅಮೆರಿಕ ಹಿಂದೆಂದೂ ಇಲ್ಲದಷ್ಟು ಒಂಟಿಯಾಗಿದೆ. ಅದರ ಒಂದೇ ಮಿತ್ರರೆಂದರೆ ಬ್ರಿಟನ್. ಆಸ್ಟ್ರೇಲಿಯಾ, ಜಪಾನ್, ಸ್ಪೇನ್ ಮುಂತಾದ ಕೆಲವೇ ಬೆರಳೆಣಿಕೆಯ ದೇಶಗಳ ಸರ್ಕಾರಗಳು ಮಾತ್ರ ಅಮೆರಿಕದ ಅಧ್ಯಕ್ಷ ಬುಶ್‌ರ ಯುದ್ಧಕ್ಕೆ ಬೆಂಬಲ ನೀಡಿವೆ. 1991 ರಲ್ಲಿ 'ಅಪ್ಪ' ಬುಶ್ ಕಟ್ಟಿದ್ದ 'ಅಂತರ್ರಾಷ್ಟ್ರೀಯ ಕೂಟ'ವನ್ನು ಮಗ ಬುಶ್ ಕಟ್ಟಲು ಪೂರ್ಣ ವಿಫಲರಾಗಿದ್ದಾರೆ. ಭದ್ರತಾ ಸಮಿತಿಯಲ್ಲಿ ಯುದ್ಧ ಹೂಡಲು ಅನುಮತಿ ಕೊಡುವ ನಿರ್ಣಯ ಮಂಡಿಸಿ, ತನ್ನ ತೋಳ್ಬಲ ಬಳಸಿ ಭದ್ರತಾ ಸಮಿತಿಯಲ್ಲಿ ಪಾಸು ಮಾಡಿಸಲು ವಿಶ್ವಪ್ರಯತ್ನ ಮಾಡಿ ಮುಖಭಂಗವಾಗಿದೆ. ಭದ್ರತಾ ಸಮಿತಿಯಲ್ಲಿ ಅಂತಹ ನಿರ್ಣಯ ಮಂಡಿಸಿದರೆ ತನ್ನ ವಿಟೋ ಬಳಸುವುದಾಗಿ ಬೆದರಿಕೆ ಹಾಕಿದ್ದು ಅಮೆರಿಕಕ್ಕೆ ನುಂಗಲಾರದ ತುತ್ತು ಆಯಿತು. ಭದ್ರತಾ ಸಮಿತಿ ಫ್ರಾನ್ಸ್ ಮತ್ತು ಜರ್ಮನಿಯ ವಿದೇಶ ಮಂತ್ರಿಗಳು ಮಾಡಿದ ಭಾಷಣ ಮತ್ತು ಯುದ್ಧ ಆರಂಭವಾದ ಮೇಲಿನ ಆ ಸರ್ಕಾರದ ಹೇಳಿಕೆಗಳು ಬುಶ್‌ನ ಯುದ್ಧಕೋರತನವನ್ನು ಬಯಲಿಗೆಳೆದಿವೆ. ಫ್ರಾನ್ಸ್ - ಜರ್ಮನಿ - ರಶ್ಯಾಗಳ ಜಂಟಿ ಹೇಳಿಕೆ ಮತ್ತು ಅದಕ್ಕೆ ಚೀನಾದ ಬೆಂಬಲ ಅಮೆರಿಕಾದ ಸರ್ಕಾರವನ್ನು ರಾಜಕೀಯವಾಗಿ ಒಂಟಿಯಾಗಿಸಿದೆ. ಅದೇ ರೀತಿ ಟರ್ಕಿ ಮೇಲೆ ಇರಾಕ್ ದಾಳಿ ಮಾಡಿದರೆ ನಾಟೋ ಟರ್ಕಿಯ ಬೆಂಬಲಕ್ಕೆ ಹೋಗಬೇಕು ಎಂಬುದರ ಬಗ್ಗೆ ಕಂಡುಬಂದ ಭಿನ್ನಾಭಿಪ್ರಾಯ, ಬುಶ್‌ಗೆ ನಾಟೋದಲ್ಲೇ ಮಿಲಿಟರಿ ಕೂಟ ಬೆಂಬಲವಿಲ್ಲ ಎಂದು ರುಜುವಾತುಗೊಳಿಸಿದೆ. ಟರ್ಕಿಯ ಪಾರ್ಲಿಮೆಂಟು ಅಮೆರಿಕದ ಪಡೆಗಳಿಗೆ ಇರಾಕ್‌ಗೆ ಉತ್ತರದಿಂದ ದಾಳಿ ಮಾಡಲು ದಾರಿ ಮಾಡಿಕೊಡುವುದನ್ನು ನಿರಾಕರಿಸಿದ್ದು ಬುಶ್‌ಗೆ ಕೆನ್ನೆಗೆ ಏಟು ಕೊಟ್ಟಂತಾಗಿದೆ. ಯುದ್ಧ ಆರಂಭವಾದ ಮೇಲೆ ಅಮೆರಿಕದ ವಿಮಾನಗಳಿಗೆ ವಾಯು ಮಾರ್ಗ ತೆರೆಯುವ ಭರವಸೆ ಕೊಟ್ಟಿದ್ದರೂ, ಅದನ್ನೂ ಟರ್ಕಿ ಈಡೇರಿಸಿಲ್ಲ. ಸಾಮಾನ್ಯವಾಗಿ ಅಮೆರಿಕದ ಸ್ವರಕ್ಕೆ ಅಪಸ್ವರವೆತ್ತದ ವಿಶ್ವಸಂಸ್ಥೆ ಮಹಾಕಾರ್ಯದರ್ಶಿ ಕೋಫಿ ಅನ್ನನ್ ಸಹ ಭದ್ರತಾ ಸಮಿತಿಯ ಅಭಿಪ್ರಾಯವನ್ನು ಅಮೆರಿಕ ಉಲ್ಲಂಘಿಸುವುದರ ಬಗ್ಗೆ ಅಸಮಾಧಾನ ವ್ಯಕ್ತಪಡಿಸಿದ್ದು ಬುಶ್ ಸರ್ಕಾರದ ಒಂಟಿತನವನ್ನು ಪೂರ್ಣಗೊಳಿಸಿದೆ.

ಬುಶ್‌ಗೆ ಕಂಪನಿ ಕೊಡಲು ಹೋಗಿ ಒಂಟಿಯಾದ ಬ್ಲೇರ್

ಪೂರ್ತಿ ಒಂಟಿಯಾದ ಬುಶ್‌ಗೆ ಕಂಪನಿಕೊಡಲು ತಯಾರಿರುವ ಏಕಮಾತ್ರ ವ್ಯಕ್ತಿ ಎಂದರೆ ಬ್ರಿಟಿಷ್ ಪ್ರಧಾನಿ ಬ್ಲೇರ್. ಆದರೆ ಕಂಪನಿ ಕೊಡಲು ಹೋಗಿ ಆತನೇ ತನ್ನ ದೇಶದಲ್ಲೇ ಒಂಟಿಯಾಗಿದ್ದಾನೆ. ಬ್ರಿಟನ್‌ನಜನತೆ ಬ್ಲೇರ್‌ನ ಯುದ್ಧಕೋರತನ ಮತ್ತು ಅಮೆರಿಕಕ್ಕೆ ಶರಣಾಗತಿ ವಿರೋಧಿಸಿದ್ದಲ್ಲದೆ, ಲೇಬರ್ ಪಕ್ಷದಲ್ಲೇ ಬಹುಮತದ ಬೆಂಬಲ ಕಳೆದುಕೊಂಡಿದ್ದಾರೆ. ಇರಾಕ್ ಮೇಲೆ ಯುದ್ಧಕ್ಕೆ ಬ್ರಿಟಿಷ್ ಪಾರ್ಲಿಮೆಂಟಿನಲ್ಲಿ ನಡೆದ ಚರ್ಚೆಯಲ್ಲಿ ಲೇಬರ್ ಪಕ್ಷದ ಸದಸ್ಯರೇ ಬ್ಲೇರ್ ಮೇಲೆ ತೀವ್ರ ವಾಗ್ದಾಳಿ ನಡೆಸಿದ್ದರು. ಆಮೇಲೆ ನಡೆದ ಮತದಾನದಲ್ಲಿ ವಿರೋಧ ಪಕ್ಷದ ಬೆಂಬಲವಿಲ್ಲದಿದ್ದರೆ ಸರ್ಕಾರ ಸೋಲುವ ಪ್ರಸಂಗ ಇತ್ತು. ಲೇಬರ್‌ಪಕ್ಷದ 140 ಕ್ಕೂ ಹೆಚ್ಚು ಸದಸ್ಯರು ಸರ್ಕಾರದ ಪ್ರಸ್ತಾವದ ವಿರುದ್ಧ ಮತ ಹಾಕಿದ್ದರು. ಇರಾಕ್ ಯುದ್ಧದಲ್ಲಿ ಬ್ರಿಟಿಷ್ ಭಾಗವಹಿಸುವುದು ಖಚಿತವಾಗುತ್ತಲೇ ವಿದೇಶ ಮಂತ್ರಿ ಸೇರಿದಂತೆ ಮೂರು ಮಂತ್ರಿಗಳು ರಾಜಿನಾಮೆ ಕೊಟ್ಟಿದ್ದು ಬ್ಲೇರ್‌ನ ನಾಯಕತ್ವಕ್ಕೆ ನೇರ ಸವಾಲು. ಭದ್ರತಾ ಸಮಿತಿಯಲ್ಲಿ ಬೆಂಬಲ ನೀಡಿದ ಸ್ಪೈನ್ ಸರ್ಕಾರ ಸಹ ಸೈನ್ಯ ಕಳಿಸುವುದಕ್ಕೆ ಹಿಂದೇಟು ಹೊಡೆದಿದೆ.



ದೆಹಲಿಯಲ್ಲಿ 35 ದೇಶಗಳ ಮಹಿಳೆಯರ ಸಂಘಟನೆಗಳು ಅಮೆರಿಕನ್ ರಾಯಭಾರಿ ಕಛೇರಿಯೆದುರು ನಡಸಿದ ಪ್ರದರ್ಶನದಲ್ಲಿ ಸುಭಾಷಿಣಿ ಅಲಿ

ಶರತ್‌ಚಂದ್ರ

ಸಾಮ್ರಾಜ್ಯಶಾಹಿ ಕೂಟದಲ್ಲಿ ತೀವ್ರ ಒಡಕು

ಅಮೆರಿಕ - ಬ್ರಿಟನ್ - ಫ್ರಾನ್ಸ್ - ಜರ್ಮನಿ - ಇಟಲಿಗಳ ಸಾಮ್ರಾಜ್ಯಶಾಹಿ ಕೂಟ ಮತ್ತು ಅದರ ಮಿಲಿಟರಿ ಶಾಖೆಯಾದ ನಾಟೋದಲ್ಲಿ ತೀವ್ರ ಒಡಕು ಇರಾಕ್ ಯುದ್ಧದ ಜತೆ ಬೆಸೆದುಕೊಂಡ ಗಮನಾರ್ಹ ಹೊಸ ಬೆಳವಣಿಗೆ ಅಮೆರಿಕದ ಇರಾಕ್ ಯುದ್ಧದ ನಂತರ ಸಾಧಿಸಬೇಕೆಂದಿರುವ ಇರಾಕ್ ಮತ್ತು ಪಶ್ಚಿಮ ಏಶ್ಯಾದ ತೈಲ ಸಂಪತ್ತನ್ನು ಪೂರ್ತಿಯಾಗಿ ತಾವೇ ಕಬಳಿಸುವ ಯೋಜನೆಯನ್ನು ಯುರೋಪಿಯನ್ ಬಲಶಾಲಿ ದೇಶಗಳು ದೃಢವಾಗಿ ವಿರೋಧಿಸಿವೆ. ಆ ಪ್ರದೇಶದ ತೈಲ ಸಂಪತ್ತಿನ ಜತೆ ಫ್ರಾನ್ಸ್‌ನ ತೀವ್ರ ಹಿತಾಸಕ್ತಿ ಬೆಸೆದುಕೊಂಡಿದೆ. ಇರಾಕ್‌ನ್ನು ಅಮೆರಿಕ ಪೂರ್ಣವಾಗಿ ನಿಯಂತ್ರಿಸಲು ಬಿಟ್ಟರೆ, ತಮ್ಮ ಮತ್ತು ಯುರೋಪಿಯನ್ ಒಕ್ಕೂಟದ ಆರ್ಥಿಕ ಹಿತಾಸಕ್ತಿಗೆ ಹಾನಿ ಎಂದು ಅವು ಭಾವಿಸಿವೆ. ಯುದ್ಧ ನಂತರ ಇರಾಕ್ ಮೇಲೆ ಅಮೆರಿಕನ್ ರಾಜಕೀಯ ನಿಯಂತ್ರಣವನ್ನು ತಾವು ಒಪ್ಪುವುದಿಲ್ಲ ಎಂದು ಫ್ರಾನ್, ಜರ್ಮನಿಗಳು ಈಗಾಗಲೇ ಹೇಳಿವೆ. 1991 ರ ಕೊಲ್ಲಿ ಯುದ್ಧ, ಯುಗೋಸ್ಲಾವ್ ಯುದ್ಧ, ಅಫಘಾನಿಸ್ತಾನದ ಮೇಲೆ ಯುದ್ಧ, ಭಯೋತ್ಪಾದನೆ ಮೇಲೆ ಯುದ್ಧ - ಇವೆಲ್ಲದರಲ್ಲಿ ಬೆಸೆದಿದ್ದ ಸಾಮ್ರಾಜ್ಯಶಾಹಿ ಕೂಟದ ಐಕ್ಯತೆಯಲ್ಲಿ ಬಿರುಕು ಗಮನಾರ್ಹವಾದ ಅಂತರ್ರಾಷ್ಟ್ರೀಯ ಬೆಳವಣಿಗೆ.

ಯುದ್ಧ ಬುಶ್ ನೆವಗಳಿಗೆ ತಿರಸ್ಕಾರ

ವಿಶ್ವಸಂಸ್ಥೆ ಶಸ್ತ್ರಾಸ್ತ್ರ ಪರೀಕ್ಷಣ ತಂಡದ ವರದಿಯಲ್ಲಿ ತಮಗೆ ಸಾಮೂಹಿಕ ನರಮೇಧದ ಶಸ್ತ್ರಾಸ್ತ್ರಗಳು ಸಿಕ್ಕಿಲ್ಲ ಎಂದು ಹೇಳಿದ್ದು ಬುಶ್‌ರನ್ನು ಅಂತರ್ರಾಷ್ಟ್ರೀಯವಾಗಿ ನಗ್ನವಾಗಿ ನಿಲ್ಲಿಸಿವೆ. ಅಮೆರಿಕವನ್ನು, ಇಡೀ ಜಗತ್ತನ್ನು, ಪ್ರಜಾಸತ್ತೆ - ಸ್ವಾತಂತ್ರ್ಯಕ್ಕೆ ಇರಾಕ್‌ನ ಸದ್ದಾಂ ಹುಸೇನ್ ತನ್ನ ಮಾರಕಾಸ್ತ್ರಗಳ ಮೂಲಕ ಬೆದರಿಕೆ ಹಾಕಿದ್ದಾನೆ. ಆತನನ್ನು ನಿಶ್ಶಸ್ತ್ರೀಕರಿಸಲು ಯುದ್ಧ. ಸೆಪ್ಟೆಂಬರ್ 11 ರ ಭಯೋತ್ಪಾದಕ ಕೃತ್ಯದಲ್ಲಿ ಸದ್ದಾಂ ಹುಸೇನ್ ಕೈವಾಡ ಇದೆ. ಇರಾಕ್‌ನಲ್ಲಿ ಪ್ರಜಾಪ್ರಭುತ್ವ ತರಲು ಯುದ್ಧ ಅಗತ್ಯ... ಎಂದೆಲ್ಲಾ ಯುದ್ಧಕ್ಕೆ ಬುಶ್ ನೆಪಗಳನ್ನು ಉತ್ತರ ಅಮೆರಿಕ ಮತ್ತು ಯುರೋಪುಗಳ ಜನತೆ (ಯಾಕೆ ಇಡೀ ಜಗತ್ತಿನ ಜನತೆ) ತಿರಸ್ಕರಿಸಿದ್ದು ಮಾತ್ರವಲ್ಲ, ಆತನ ನಾಟೋ ಮಿಲಿಟರಿ ಕೂಡದ ಮಿತ್ರರೇ ತಿರಸ್ಕರಿಸಿದರು. ಯಾವುದೇ ದೇಶದ ಆಂತರಿಕ ವ್ಯವಹಾರಗಳಲ್ಲಿ ಮೂಗು ತೂರಿಸುವ ಅಧಿಕಾರ ಅಮೆರಿಕ ಸೇರಿ ಯಾವ ದೇಶಕ್ಕೂ ಇಲ್ಲ ಎಂಬ ಫ್ರಾನ್ಸ್ - ಜರ್ಮನಿಗಳ ನಿಲುವು 'ನ್ಯಾಯಯುತ ಯುದ್ಧ'ದ ಬುಶ್ ವಾದಗಳನ್ನು ತಳ್ಳಿಹಾಕಿವೆ. ಅಮೆರಿಕದ ಮಾಜಿ ಅಧ್ಯಕ್ಷ ಜಿಮ್ಮಿ ಕಾರ್ಟರ್ 'ನ್ಯಾಯಯುತ ಯುದ್ಧ'ದ ವಾದಗಳನ್ನು ತಳ್ಳಿಹಾಕಿದ್ದು ಗಮನಾರ್ಹ.


ಕೊಲ್ಲಿ ಪ್ರದೇಶದ ದೇಶಗಳಿಂದ (ಮುಖ್ಯವಾಗಿ ಕುವೈತ್‌ನಿಂದ) ಹಿಂದಿರುಗುತ್ತಿರುವ ಭಾರತೀಯರು.

ಕ್ರಿಮಿನಲ್ - ಅನ್ಯಾಯದ ಯುದ್ಧ ಖಂಡಿಸಿ - ಸರ್ಕಾರಕ್ಕೆ ಸಿಪಿಐ(ಎಂ) ಒತ್ತಾಯ

ಯುದ್ಧ ವಿರೋಧಿಸಿ ದೇಶವ್ಯಾಪಿ ಪ್ರತಿಭಟನೆಗೆ ಕರೆ

ಇರಾಕ್ ಮೇಲೆ ಅಮೆರಿಕದ ದಾಳಿಯನ್ನು 'ಕ್ರಿಮಿನಲ್ ಮತ್ತು ಅನ್ಯಾಯದ ಯುದ್ಧ'ಎಂದು ಬಣ್ಣಿಸಿದ ಸಿಪಿಐ(ಎಂ) ಪಾಲಿಟ್‌ಬ್ಯೂರೋ, ಅಮೆರಿಕ ಮತ್ತು ಬ್ರಿಟನ್‌ನ ನಾಯಕತ್ವವನ್ನು ಚರಿತ್ರೆ ಈ ಕ್ರಿಮಿನಲ್ ಕಾರ್ಯಾಚರಣೆಗೆ ಕ್ಷಮಿಸಲಾರದು ಎಂದಿದೆ. ಈಗಲಾದರೂ ಭಾರತ ಸರ್ಕಾರ ದೃಢ ನಿರ್ಧಾರ ಕೈಗೊಂಡು ಅಮೆರಿಕನ್ ದಾಳಿಯನ್ನು ಸ್ಪಷ್ಟ ಮಾತುಗಳಲ್ಲಿ ಖಂಡಿಸಬೇಕು. ಅಮೆರಿಕನ್ ಯುದ್ಧ ಪ್ರಯತ್ನಗಳಿಗೆ ಯಾವುದೇ ರೀತಿಯ ಸಹಾಯ ಮಾಡುವುದಿಲ್ಲ ಎಂದು ಸ್ಪಷ್ಟಪಡಿಸಬೇಕು, ಮಾರ್ಚ್ 22 ರಂದು ದೇಶದಾದ್ಯಂತ ಪ್ರತಿಭಟನಾ ಪ್ರದರ್ಶನ ನಡೆಸುವಂತೆ ಕರೆ ನೀಡಿದೆ.


ಪಾರ್ಲಿಮೆಂಟ್‌ನಲ್ಲಿ ಒಂದು ನಿರ್ಣಯ ಅಂಗೀಕರಿಸುವ ಮೂಲಕ ಭಾರತದ ನಿಲುಮೆ ಸ್ಪಷ್ಟ ಮಾಡುವಲ್ಲಿ ಸರ್ಕಾರ ಮೀನಮೇಷ ಎಣಿಸುತ್ತಿದೆ. ವಿರೋಧ ಪಕ್ಷಗಳ ಸಭೆ ಈ ಬಗ್ಗೆ ಸ್ಪಷ್ಟ ಅಭಿಪ್ರಾಯ ವ್ಯಕ್ತಪಡಿಸಬೇಕು. ಸರ್ಕಾರ 'ಮಧ್ಯದ ಹಾದಿ' ಬಗ್ಗೆ ಮಾತನಾಡುತ್ತಿದೆ. ಸಂಘ ಪರಿವಾರದ ಮತ್ತು ಬಿಜೆಪಿ ಸರ್ಕಾರ ಎದೆಯಾಳದಲ್ಲಿ ಅಮೆರಿಕದ ಜತೆ ಇದೆ - ದೇಶದಲ್ಲಿ ಮತ್ತು ಜಾಗತಿಕವಾಗಿ ಪ್ರಬಲ ಸಾರ್ವಜನಿಕ ಅಭಿಪ್ರಾಯಕ್ಕೆ ಹೆದರಿ ಮಾತ್ರ ಯುದ್ಧಕ್ಕೆ ಬೆಂಬಲ ನೀಡುತ್ತಿಲ್ಲ. ಅಮೆರಿಕದ ಸರ್ಕಾರವನ್ನು ಅಸಂತುಷ್ಟಗೊಳಿಸಲು ಸರ್ಕಾರ ತಯಾರಿಲ್ಲ. ಅಮೆರಿಕನ್ ಸರ್ಕಾರ ಯಥಾಪ್ರಕಾರ ವಾಜಪೇಯಿ ಸರ್ಕಾರದ ಮೇಲೆ ಫೋನು ಕರೆಗಳ ಮೂಲಕ ಒತ್ತಡ ಹಾಕುತ್ತಿದೆ. ಯಾವಾಗ ಸರ್ಕಾರ ಮಣಿಯುತ್ತೋ, ಗುಪ್ತವಾಗಿ ಅಮೆರಿಕನ್ ಪ್ರಯತ್ನಗಳಿಗೆ ಬೆಂಬಲ ಕೊಡುತ್ತೋ ಹೇಳಲು ಸಾಧ್ಯವಿಲ್ಲ.

ಅಮೆರಿಕ

ರಂಭ

ಭೂತಪೂರ್ವ ಜನತಾ ಶಕ್ತಿ ಪ್ರದರ್ಶನ

ಅಂತರ್ರಾಷ್ಟ್ರೀಯವಾಗಿ ಬುಶ್ ಂಟಿಯಾಗಲು ಮತ್ತು ಸಾಮ್ರಾಜ್ಯಶಾಹಿ ೂಟದಲ್ಲಿ ತೀವ್ರ ಒಡಕು ಕಾಣಿಸಿಕೊಳ್ಳಲು ರಣವಾದದ್ದು ಜಗತ್ತಿನಾದ್ಯಂತ ಜನತೆಯ ಯುದ್ಧ-ವಿರೋಧಿ ಚಳುವಳಿ. ಕೆಲವು ತಿಂಗಳುಗಳ ಂದೆ ಅಮೆರಿಕದಲ್ಲಿ ಆರಂಭವಾಗಿ ಯುರೋಪಿನ ುತ್ತು ಇತರ ಎಲ್ಲಾ ಭಾಗಗಳಿಗೆ ಕಾಡ್ಗಿಚ್ಚಿನಂತೆ ೀವ್ರವಾಗಿ ಹಬ್ಬಿ ಯುದ್ಧ-ವಿರೋಧಿ ಚಳುವಳಿ



ಇರಾಕಿ ಹುಡುಗ ಗಾಯಗೊಂಡು ಆಸ್ಪತ್ರೆಯಲ್ಲಿ ಮಲಗಿರುವುದು. (ಮೊದಲ ದಿನದ ಬಾಗ್ದಾದ್‌ನ ಮೇಲಿನ ಬಾಂಬ್ ದಾಳಿಯಲ್ಲಿ ಗಾಯಗೊಂಡವರು)

ಸಹ ಅಭೂತಪೂರ್ವ ಬೆಳವಣಿಗೆ. ಈ ಚಳುವಳಿ ಬುಶ್-ಬ್ಲೇರ್‌ರ ಇನ್ನೂ ತೀವ್ರ ಅಪಾಯಕಾರಿ ಯೋಜನೆಗಳನ್ನು ಕಡಿದು ಹಾಕಿದ್ದು ಮಾತ್ರವಲ್ಲ, ಫ್ರಾನ್ಸ್-ಜರ್ಮನಿಯ ನಿಲುವನ್ನು ಬದಲಿಸಿದ ಶಕ್ತಿ ಸಹ. ಜಗತ್ತಿನ ಜನತೆ ಸಾಮೂಹಿಕವಾಗಿ ಬಹುಶಃ ಜಗತ್ತಿನ ಚರಿತ್ರೆಯಲ್ಲೇ ಮೊದಲ ಬಾರಿಗೆ ನಿರ್ಣಾಯಕ ಶಕ್ತಿಯಾದರು. ಯುದ್ಧದ ಮೊದಲೂ ನಂತರವೂ ಕಂಡು ಬಂದ 'ಜನತಾಶಕ್ತಿ' ಪ್ರದರ್ಶನ ಬುಶ್ -ಬ್ಲೇರ್‌ರರನ್ನು ದಂಗುಬಡಿಸಿದೆ. ಯುದ್ಧ ಆರಂಭವಾದ ಮೇಲೂ ಅಮೆರಿಕ - ಯುರೋಪುಗಳಲ್ಲಿ 'ಸಾರ್ವತ್ರಿಕ ಕಾಯಿದೆ ಭಂಗ ಚಳುವಳಿ' ಯತ್ತ ಸಾಗುವ ಲಕ್ಷಣಗಳು ಕಂಡುಬಂದಿವೆ. ಅಮೆರಿಕ ಬ್ರಿಟನ್‌ಗಳಲ್ಲಿ ಯುದ್ಧ-ಸಂಬಂಧಿ ಕಾರ್ಯಾಚರಣೆಗಳಿಗೆ ನೇರ ಭಂಗ ತರುವ ಚಳುವಳಿ ಬುಶ್-ಬ್ಲೇರ್ ಗ್ಯಾಂಗ್‌ಗೆ ತೀವ್ರ ಪ್ರತಿರೋಧ ಒಡ್ಡಿದೆ. ನ್ಯೂಯಾರ್ಕ್ ಟೈಮ್ಸ್ ಸಂಪಾದಕೀಯ ಒಂದು ಈ ಜನತಾಶಕ್ತಿಯ ಪ್ರದರ್ಶನದ ಬಗ್ಗೆ ಹೀಗೆ ಹೇಳಿದೆ "ಈಗಲೂ ಎರಡೂ ಸೂಪರ್ ಪವರ್ ಇವೆ. ಒಂದು ಅಮೆರಿಕ. ಇನ್ನೊಂದು ಜಾಗತಿಕ ಸಾರ್ವಜನಿಕ ಅಭಿಪ್ರಾಯ".

ಬುಶ್-ಬ್ಲೇರ್ ಗ್ಯಾಂಗ್‌ಗೆ ಪ್ರತಿರೋಧ

ಈ ಮೂರು ಬೆಳವಣಿಗೆಗಳು - ಇರಾಕ್ ಯುದ್ಧ ವಿವಾದದಲ್ಲಿ ಬುಶ್-ಬ್ಲೇರ್‌ರ ಅಂತರ್ರಾಷ್ಟ್ರೀಯ ಒಂಟಿತನ; ಸಾಮ್ರಾಜ್ಯಶಾಹಿ ಕೂಟದಲ್ಲಿ ಒಡಕು ಮತ್ತು ಜಾಗತಿಕ ಜನತಾ ಶಕ್ತಿಯ ಉದಯ - ಬುಶ್-ಬ್ಲೇರ್ ಗ್ಯಾಂಗ್‌ನ ಯೋಜನೆಗೆ ಬರುವ ದಿನಗಳಲ್ಲಿ ತೀವ್ರ ಪ್ರತಿರೋಧ ಬಲಗೊಳ್ಳಲಿದೆ ಎಂಬ ಸೂಚನೆಗಳನ್ನು ಕೊಡುತ್ತಿವೆ. ಶೀತಲಸಮರದ ...ದ ಅವಧಿಯಲ್ಲಿ ತನ್ನ ಏಕಚಕ್ರಾಧಿಪತ್ಯದ

ಪುಟ 11 ಕ್ಕೆ

ಇರಾಕ್ ಯುದ್ಧ : ಐವತ್ತು ಯಕ್ಷ ಪ್ರಶ್ನೆಗಳು

1. ಅಮೇರಿಕದಲ್ಲಿ ಜಗತ್ತಿನ ಎಷ್ಟು ಪಾಲು ಜನ ವಾಸಿಸುತ್ತಾರೆ?
ಉ : ಶೇಕಡಾ 6

2. ಅಮೇರಿಕದಲ್ಲಿ ಜಗತ್ತಿನ ಎಷ್ಟು ಪಾಲು ಸಂಪತ್ತು ಇದೆ?
ಉ : ಶೇ. 50

3. ಯಾವ ದೇಶದಲ್ಲಿ ಅತ್ಯಧಿಕ ತೈಲ ಸಂಪತ್ತು ಇದೆ?
ಉ : ಸೌದಿ ಅರೇಬಿಯಾ

4. ಯಾವ ದೇಶದಲ್ಲಿ ಎರಡನೇ ಅತಿ ದೊಡ್ಡ ತೈಲ ಸಂಪತ್ತು ಇದೆ?
ಉ : ಇರಾಕ್‌ನಲ್ಲಿ

5. ಪ್ರತಿವರ್ಷ ಶಸ್ತ್ರಾಸ್ತ್ರಗಳ ಮೇಲೆ ಎಷ್ಟು ಖರ್ಚು ಮಾಡಲಾಗುತ್ತದೆ?
ಉ: 90 ಸಾವಿರ ಕೋಟಿ ಡಾಲರುಗಳು

6. ಇದರಲ್ಲಿ ಅಮೇರಿಕ ಎಷ್ಟು ಖರ್ಚು ಮಾಡುತ್ತದೆ.
ಉ : ಅರ್ಧಭಾಗ (45 ಸಾವಿರ ಕೋಟಿ ಡಾಲರುಗಳು)

7. ಅಮೇರಿಕದ ಶಸ್ತ್ರಾಸ್ತ್ರದ ಮೇಲೆ ಮಾಡುವ ಖರ್ಚಿನ ಎಷ್ಟು ಭಾಗ ಜಗತ್ತಿನ ಎಲ್ಲರಿಗೂ ಜೀವನಾವಶ್ಯಕ ಸ ಾ ವ ' ು ಗಿ ್ರ ಒದಗಿಸಬಲ್ಲುದು.?
ಉ ; ಶೇಕಡಾ 10 ಭಾಗ (ನಾಲ್ಕುವರೆ ಸಾವಿರ ಕೋಟಿ ಡಾಲರುಗಳು. ಇದು ಅಫಘಾನಿಸ್ತಾನದ ಮೇಲಿನ ಯುದ್ಧದಲ್ಲಿ ಖರ್ಚಿಷ್ಟು)

8. ಎರಡನೇ ಯುದ್ಧದ ನಂತರ ಎಷ್ಟು ಜನ ಯುದ್ಧಗಳಲ್ಲಿ ಸತ್ತಿದ್ದಾರೆ?
ಉ: 8.6 ಕೋಟಿ

9. ಇರಾಕ್ ರಾಸಾಯನಿಕ ಮತ್ತು ಜೈವಿಕ ಶಸ್ತ್ರಾಸ್ತ್ರಗಳನ್ನು ತಯಾರಿಸಿದ್ದು ಯಾವಾಗ?
ಉ : 1980ರ ನಂತರ.

10. ಇರಾಕ್ ಈ ರಾಸಾಯನಿಕ, ಜೈವಿಕ ಶಸ್ತ್ರಾಸ್ತ್ರಗಳೇ ತಾನಾಗಿಯೇ ಸಿದ್ಧತೆ ಮಾಡಿಕೊಂಡಿದೆ?
ಉ : ಇಲ್ಲ, ಅಮೇರಿಕ ಮತ್ತು ಬ್ರಿಟನ್ ಸರಕಾರಗಳು ಮತ್ತು ಇತರ ಬಹು ರಾಷ್ಟ್ರೀಯ ಕಂಪನಿಗಳು ಅದಕ್ಕೆ ಬೇಕಾದ ಸಾಮಗ್ರಿ, ತಂತ್ರಜ್ಞಾನ ಒದಗಿಸಿದವು.

11. ಇರಾನ್ ವಿರುದ್ಧ ಇರಾಕ್ ನಡೆಸಿದ ರಾಸಾಯನಿಕ ಯುದ್ಧವನ್ನು ಅಮೆರಿಕ ಖಂಡಿಸಿತ್ತೆ?
ಉ : ಇಲ್ಲ.

12. 1988ರಲ್ಲಿ ಇರಾಕ್ ನಡೆಸಿದ ರಸಾಯನಿಕ ಯುದ್ಧದಲ್ಲಿ ಕುರ್ದಿಶ್ ಪಟ್ಟಣ ಹಲಬಿಯಾದಲ್ಲಿ ಎಷ್ಟು ಜನ ಸತ್ತಿದ್ದರು?
ಉ: 5 ಸಾವಿರ

13. ಎಷ್ಟು ಪಾಶ್ಚಿಮಾತ್ಯ ದೇಶಗಳು ಈ ಯುದ್ಧವನ್ನು ಖಂಡಿಸಿದ್ದವು.
ಉ : ಯಾವುದು ಇಲ್ಲ.

14. ಅಮೆರಿಕ ವಿಯೆಟ್ನಾಮ್‌ನಲ್ಲಿ ಎಷ್ಟು ವಿಷಪೂರಿತ ರಾಸಾಯನಿಕ ಏಜೆಂಟ್ ಆರೆಂಜನ್ನು ಬಳಸಿತ್ತು?
ಉ : 170 ಲಕ್ಷ ಗ್ಯಾಲನ್

15 ಇರಾಕ್‌ಗೂ ಸೆಪ್ಟೆಂಬರ್ 11 ಭಯೋತ್ಪಾದಕ ಕೃತ್ಯಕ್ಕೂ ಏನಾದರೂ ರುಜುವಾತಾದ ಸಂಬಂಧ ಇದೆಯೇ?
ಉ : ಇಲ್ಲ

16. 1991ರ ಕೊಲ್ಲಿಯುದ್ಧದಲ್ಲಿ ಎಷ್ಟು ಇರಾಕಿ ಜನತೆ ಸಾವಿಗೀಡಾದರು.
ಉ : 35 ಸಾವಿರ.

17. 1991ರ ಕೊಲ್ಲಿಯುದ್ಧದಲ್ಲಿ ಎಷ್ಟು ಅಮೇರಿಕನ್ ಸೈನಿಕರನ್ನು ಇರಾಕಿ ಸೈನಿಕರು ಕೊಂದರು?
ಉ : ಸೊನ್ನೆ

18 1991ರ ಯುದ್ಧದಲ್ಲಿ ಹಿಂತೆಗೆದ ಇರಾಕಿ ಸೈನಿಕರಲ್ಲಿ ಎಷ್ಟು ಜನರನ್ನು ಟ್ಯಾಂಕ್ ಮೇಲೆ ಇಟ್ಟ ನೇಗಿಲುಗಳು ನೆಲಸಮಾಧಿ ಮಾಡಿದವು?
ಉ 6 ಸಾವಿರ

19. ಇರಾಕ್ ಮತ್ತು ಕುವೈತ್‌ನಲ್ಲಿ ಎಷ್ಟು ಯುರೇನಿಯಂ 1991ರ ಕೊಲ್ಲಿ ಯುದ್ಧದ ನಂತರ ಹಿಂದೆ ಉಳಿಯಿತು?
ಉ. 40 ಟನ್

20. 1991ರ ಮತ್ತು 1994 ನಡುವೆ ಇರಾಕ್‌ನಲ್ಲಿ ಕ್ಯಾನ್ಸರ್ ರೋಗದ ಪ್ರಮಾಣ ಎಷ್ಟು ಹೆಚ್ಚಾಯಿತು?
ಉ. 700 ಶೇಕಡಾ.

21. 1991ರ ಕೊಲ್ಲಿ ಯುದ್ಧದಲ್ಲಿ ಎಷ್ಟು ಇರಾಕಿ ಮಿಲಿಟರಿ ಸಾಮರ್ಥ್ಯವನ್ನು ಅಮೆರಿಕ ತಾನು ನಾಶಮಾಡಿತು ಎಂದು ಹೇಳಿಕೊಂಡಿತ್ತು?
ಉ. ಶೇಕಡಾ 80

22 ಇರಾಕ್ ಮೇಲೆ ಮುಂಬರುವ ಯುದ್ಧದಲ್ಲಿ ಎಷ್ಟು ಇರಾಕಿ ನಾಗರಿಕರು ಸಾಯುತ್ತಾರೆ ಎಂದು ಪೆಂಟಗನ್ ಹೇಳಿದೆ?
ಉ. 10 ಸಾವಿರ.

23. ಇದರಲ್ಲಿ ಎಷ್ಟು ಮಕ್ಕಳು ಇರುತ್ತಾರೆ
ಉ. ಅರ್ಧದಷ್ಟು (5 ಸಾವಿರ)

24. ಇರಾಕ್ ಮೇಲೆ ಅಮೆರಿಕ ಎಷ್ಟು ವರ್ಷಗಳಿಂದ ವಿಮಾನ ದಾಳಿಯಲ್ಲಿ ತೊಡಗಿದೆ?
ಉ. 11 ವರ್ಷಗಳಿಂದ.

25. ಡಿಸೆಂಬರ್ 1998 ಮತ್ತು ಸೆಪ್ಟೆಂಬರ್ 1999ರ ನಡುವೆ ಅಮೇರಿಕಾ ಬ್ರಿಟನ್‌ಗಳು ಇರಾಕ್ ಮೇಲೆ ಯುದ್ಧ ಸಾರಿದ್ದವೆ?
ಉ. ಇಲ್ಲ.

26. ಇರಾಕ್ ಮೇಲೆ ಡಿಸೆಂಬರ್ 1998 ಮತ್ತು ಸೆಪ್ಟೆಂಬರ್ 1999ರ ನಡುವೆ ಎಷ್ಟು ಬಾಂಬ್‌ಗಳನ್ನು ಅಮೆರಿಕಾ ಬ್ರಿಟನ್‌ಗಳು ಹಾಕಿವೆ?
ಉ. 2 ಕೋಟಿ ಪೌಂಡುಗಳಷ್ಟು.

27 ಎಷ್ಟು ವರ್ಷಗಳ ಹಿಂದೆ ಇರಾಕ್ ಮೇಲೆ ಆಮದು-ರಫ್ತುಗಳ ನಿರ್ಬಂಧವನ್ನು ವಿಶ್ವಸಂಸ್ಥೆ ನಿರ್ಣಯ 661ರ ಪ್ರಕಾರ ಹೇರಲಾಗಿತ್ತು?
ಉ. 12 ವರ್ಷಗಳ ಹಿಂದೆ.

28 1989ರಲ್ಲಿ ಇರಾಕ್ ಶಿಶು ಮರಣ ಪ್ರಮಾಣ (ಪ್ರತಿ ಸಾವಿರ ಮಕ್ಕಳಿಗೆ) ಎಷ್ಟು ಇತ್ತು?
ಉ. 38.

29. 1999ರಲ್ಲಿ ಇರಾಕ್ ಶಿಶು ಮರಣ ಪ್ರಮಾಣ (ಪ್ರತಿಸಾವಿರ ಮಕ್ಕಳಿಗೆ) ಎಷ್ಟು ಆಗಿತ್ತು?
ಉ. 131 (ಅಂದರೆ 345 ಶೇಕಡಾ ಹೆಚ್ಚಳ)

30 ಅಕ್ಟೋಬರ್ 99ರವರೆಗೆ ವಿಶ್ವಸಂಸ್ಥೆ ವಿಧಿಸಿದ ಆರ್ಥಿಕ ದಿಗ್ಬಂಧನದಿಂದಾಗಿ ಎಷ್ಟು ಇರಾಕಿಗಳು ಸತ್ತಿದ್ದಾರೆ?
ಉ. 15 ಲಕ್ಷ

31. 1997ರಿಂದೀಚೆಗೆ ಆರ್ಥಿಕ ದಿಗ್ಬಂಧನ ದಿಂದಾಗಿ ಇರಾಕಿನಲ್ಲಿ ಸತ್ತ ಮಕ್ಕಳ ಸಂಖ್ಯೆ ಎಷ್ಟು?
ಉ. ಏಳುವರೆ ಲಕ್ಷ

32. ವಿಶ್ವಸಂಸ್ಥೆಯ ಶಸ್ತ್ರಾಸ್ತ್ರ ಪರೀಕ್ಷಕರನ್ನು ಸದ್ದಾಂ ಹುಸೇನ್ ಇರಾಕ್‌ನಿಂದ ಹೊರಗಟ್ಟಿದ್ದನೆ?
ಉ. ಇಲ್ಲ.

33 ನವೆಂಬರ್ ಮತ್ತು ಡಿಸೆಂಬರ್ 1998ರಲ್ಲಿ ಎಷ್ಟು ಶಸ್ತ್ರಾಸ್ತ್ರ ಪರೀಕ್ಷಣೆಗಳು ಆಗಿವೆ?
ಉ. 300

34. ಇಂತಹ ಪರೀಕ್ಷಣೆಗಳಲ್ಲಿ ಎಷ್ಟರಲ್ಲಿ ಸಮಸ್ಯೆಗಳಿದ್ದವು?
ಉ. ಕೇವಲ 5

35. ವಿಶ್ವಸಂಸ್ಥೆ ಶಸ್ತ್ರಾಸ್ತ್ರ ಪರೀಕ್ಷಕರನ್ನ ಆಳುವ ಬಾತ್ ಪಕ್ಷದ ಮುಖ್ಯ ಕಚೇರಿ ಒಳಗೆ ಬಿಡಲಾಯಿತೆ?
ಉ. ಹೌದು

36. ಡಿಸೆಂಬರ್ 1998ರಲ್ಲಿ ಚರಿತ್ರೆಯಲ್ಲೇ ಸಾಟಿಯಿಲ್ಲದ ಪ್ರಮಾಣದಲ್ಲಿ ಇರಾಕನ್ನು 'ನಿಶ್ಶಸ್ತ್ರಗೊಳಿಸಲಾಗಿದೆ' ಎಂದು ಯಾರು ಹೇಳಿದರು?
ಉ. ಸ್ಕಾಟ್ ರಿಟ್ಟರ್, unscom ಎಂಬ ವಿಶ್ವಸಂಸ್ಥೆಯ ಸಂಘಟನೆಯ ಮುಖ್ಯಸ್ಥ.

37. 1991ರ ಯುದ್ಧದ ನಂತರ ಇರಾಕ್‌ನಲ್ಲಿ ಉಳಿದ ಸಾಮೂಹಿಕ ನಾಶದ ಶಸ್ತ್ರಾಸ್ತ್ರಗಳ ಸಾಮರ್ಥ್ಯದ ಎಷ್ಟು ಏಓಗವನ್ನು 1998ರ ಹೊತ್ತಿಗೆ, ವಿಶ್ವಸಂಸ್ಥೆಯ ಶಸ್ತ್ರಾಸ್ತ್ರ ಪರೀಕ್ಷಕರು ನಿಶ್ಯಕ್ತಗೊಳಿಸಿದ್ದರು ಇಲ್ಲವೆ ನಾಶಮಾಡಿದ್ದರು ಎಂದು ಹೇಳಿಕೊಂಡಿದ್ದರು?
ಉ. ಶೇಕಡಾ 90 ಭಾಗ.

38. ಈಗ ವಿಶ್ವಸಂಸ್ಥೆಯ ಶಸ್ತ್ರಾಸ್ತ್ರ ಪರೀಕ್ಷಕರ ಜತೆ ಇರಾಕ್ ಸರ್ಕಾರ ಸಹಕಾರ ನೀಡುತ್ತಿಲ್ಲವೆ?
ಉ. ಸಹಕಾರ ನೀಡುತ್ತಿದೆ.

39. ಇಸ್ರೇಲ್ 1992 ರಿಂದೀಚೆಗೆ ಎಷ್ಟು ವಿಶ್ವಸಂಸ್ಥೆ ನಿರ್ಣಯಗಳನ್ನು ಉಲ್ಲಂಘಿಸಿದೆ?
ಉ. 65 ಕ್ಕಿಂತಲೂ ಹೆಚ್ಚಿಗೆ

40. 1972 ರಿಂದ 1990ರ ನಡುವೆ ಇಸ್ರೇಲನ್ನು ಖಂಡಿಸುವ ಎಷ್ಟು ವಿಶ್ವಸಂಸ್ಥೆ ನಿರ್ಣಯಗಳನ್ನು ಅಮೇರಿಕ ವೀಟೋ ಬಳಸಿ ತಡೆಯಿತು?
ಉ. 30ಕ್ಕೂ ಹೆಚ್ಚು.

41 ಎಷ್ಟು ದೇಶಗಳು ಅಣ್ವಸ್ತ್ರಗಳನ್ನು ಹೊಂದಿವೆ?
ಉ. 8.

42. ಇರಾಕ್ ಬಳಿ ಎಷ್ಟು ಅಣ್ವಸ್ತ್ರಗಳು ಇವೆ.
ಉ. ಸೊನ್ನೆ.

43 ಅಮೆರಿಕ ಎಷ್ಟು ಅಣ್ವಸ್ತ್ರಗಳನ್ನು ಹೊಂದಿದೆ?
ಉ. 10 ಸಾವಿರಕ್ಕೂ ಹೆಚ್ಚು.

44. ಈವರೆಗೆ ಅಣ್ವಸ್ತ್ರಗಳನ್ನು ಬಳಸಿದ

ಪುಟ 10 ಕ್ಕೆ



ಶೋಷಿತ ಹೋರಾಟಗಳಿಗೆ ಹೆಸರುವಾಸಿಯಾಗಿರುವ ಕೇರಳದ ನಾಡಿನಲ್ಲಿ ಕಳೆದೆರಡು ತಿಂಗಳುಗಳಿಂದ ನಡೆಯುತ್ತಿರುವ ಆದಿವಾಸಿಗಳ ಭೂಮಿ ಹೋರಾಟ ದೇಶ ವಿದೇಶಗಳ ಗಮನ ಸೆಳೆದಿದೆ. ಕಾಂಗ್ರೆಸ್ ಸರ್ಕಾರದ ನಿದ್ದೆಗೆಡಿಸಿರುವ ಈ ಚಳುವಳಿಯನ್ನು ದಮನ ಮಾಡಲು ಮುಖ್ಯಮಂತ್ರಿ ಆ್ಯಂಟನಿ ಪೊಲೀಸ್ ದೌರ್ಜನ್ಯಕ್ಕೆ ಕುಮ್ಮಕ್ಕು ನೀಡುತ್ತಿರುವುದನ್ನು, ಸಮಸ್ಯೆಯ ವಿವಿಧ ಆಯಾಮಗಳನ್ನು ಲೇಖಕರು ಇಲ್ಲಿ ಬಯಲಿಗೆಳೆದಿದ್ದಾರೆ.

ಆದಿವಾಸಿಗಳ ಮೇಲೆ ಆಂಟನಿ ಸರ್ಕಾರದ ದೌರ್ಜನ್ಯ

ನಿತ್ಯಾನಂದ ಸ್ವಾಮಿ

ಕಾಂಗ್ರೆಸ್ ಪಕ್ಷದ ದಲಿತಪರ ಮುಖವಾಡ ಮತ್ತೊಮ್ಮೆ ಕಳಚಿ ಬಿದ್ದಿದೆ. ಈ ಪಕ್ಷದ ಕೇರಳ ರಾಜ್ಯ ಸರ್ಕಾರವು ಇತ್ತೀಚೆಗೆ ಅಸಹಾಯಕ ಆದಿವಾಸಿಗಳ ಮೇಲೆ ಪೋಲೀಸರ ಬಂದೂಕುಗಳಿಂದ ಗುಂಡಿನ ಸುರಿಮಳೆಗರೆದು ನಡೆಸಿದ ದೌರ್ಜನ್ಯದಿಂದ ಜಗತ್ತನ್ನೇ ದಂಗುಬಡಿಸಿದೆ. ವಾಯನಾಡ ಜಿಲ್ಲೆಯ ಮುತ್ತಂಗ ಅರಣ್ಯ ಪ್ರದೇಶದಲ್ಲಿ ಗುಡಿಸಲು ಕಟ್ಟಿಕೊಂಡು ವಾಸವಿದ್ದ ಆದಿವಾಸಿಗಳತ್ತ ನುಗ್ಗಿದ ಪೋಲೀಸರು ಮನಬಂದಂತೆ ಗೋಲಿಬಾರ್ ಮಾಡಿದಾಗ 16ಕ್ಕೂ ಹೆಚ್ಚು ಮಂದಿ ಕೊಲ್ಲಲ್ಪಟ್ಟಿದ್ದಾರೆ. ಸಾವಿಗೀಡಾದವರ ಸಂಖ್ಯೆ ಇನ್ನೂ ಹೆಚ್ಚಿದೆ ಎಂದು ಹೇಳಲಾಗುತ್ತಿದೆ. ಗುಂಡಿನ ದಾಳಿಗೆ ಗಾಯಗೊಂಡು ಕಾಡಿನೊಳಗೆ ಕಣ್ಮರೆಯಾದವರು ನೂರಾರು ಜನ. ಅವರು ಸತ್ತಿದ್ದಾರೋ ಅಥವಾ ಅನ್ನ ನೀರು ಇಲ್ಲದೆ ಅರಣ್ಯದಲ್ಲಿ ಅಲೆಯುತ್ತಿದ್ದಾರೋ ಎಂಬುದು ತಿಳಿದುಬಂದಿಲ್ಲ. ಮಕ್ಕಳು, ಮಹಿಳೆಯರು, ಮುದುಕರು ಎಂಬ ಭೇದವಿಲ್ಲದೆ ಪೋಲೀಸರು ಅವರನ್ನು ಅಟ್ಟಿಸಿಕೊಂಡು ಹೊಡೆದಿದ್ದಾರೆ. ನೆಲಕ್ಕೆ ಬಿದ್ದವರನ್ನು ಬೂಟು ಕಾಲುಗಳಿಂದ ಒದ್ದಿದ್ದಾರೆ; ಬಂದೂಕುಗಳ ಹಿಂಬುಡಗಳಿಂದ ಥಳಿಸಿದ್ದಾರೆ. ಅವರ ಗುಡಿಸಲುಗಳಿಗೆ ಬೆಂಕಿ ಹಚ್ಚಿ ಅವುಗಳೊಳಗಿನ ಸಾಮಗ್ರಿಗಳನ್ನು ಸುಟ್ಟುಹಾಕಿದ್ದಾರೆ. ಘಟನೆಗೆ ಸಂಬಂಧಿಸಿ 184 ಆದಿವಾಸಿಗಳನ್ನು ಬಂಧಿಸಲಾಗಿದ್ದು ಅವರೊಳಗೆ ಗಂಭೀರವಾಗಿ ಗಾಯಗೊಂಡವರನ್ನು ಸುಲ್ತಾನ ಬತೇರಿ ಸರ್ಕಾರಿ ಆಸ್ಪತ್ರೆಗೆ ಸೇರಿಸಲಾಗಿದೆ. ನ್ಯಾಯಾಂಗ ವಶಕ್ಕೆ ಒಪ್ಪಿಸಲ್ಪಟ್ಟು ಕಣ್ಣೂರು ಕೇಂದ್ರ ಕಾರಾಗ್ರಹದಲ್ಲಿಡಲಾದ 177 ಜನರ ಪೈಕಿ 80 ಪುರುಷರು, 61 ಮಹಿಳೆಯರು ಮತ್ತು 36 ಮಕ್ಕಳು ಸೇರಿದ್ದಾರೆ. ಆರು ತಿಂಗಳ ಪುಟ್ಟ ಶಿಶುವೊಂದು ತಾಯಿಯ ಜೊತೆಯಲ್ಲಿ ಶಿಕ್ಷೆ ಅನುಭವಿಸುತ್ತಿದೆ.

ವ್ಯಾಪಕ ಖಂಡನೆ: ಪೋಲೀಸರು ನಡೆಸಿದ ಈ ಪೈಶಾಚಿಕ ಹಿಂಸಾಚಾರವು ದೇಶಾದ್ಯಂತ ವ್ಯಾಪಕ ಖಂಡನೆಗೆ ಗುರಿಯಾಗಿದೆ. ಹಿರಿಯ ಪತ್ರಕರ್ತ ಹಾಗೂ ರಾಜ್ಯ ಸಭಾ ಸದಸ್ಯರೂ ಆಗಿರುವ ಕುಲದೀಪ ನಯ್ಯರ್ ಅವರು ಈ ಪೋಲಿಸ್ ಅತಿರೇಕವನ್ನು ತೀವ್ರವಾಗಿ ಖಂಡಿಸಿದ್ದಾರಲ್ಲದೆ ಪ್ರಕರಣವನ್ನು ಮಾನವ ಹಕ್ಕುಗಳ ಆಯೋಗದ ಗಮನಕ್ಕೆ ತರುವುದಾಗಿ ಹೇಳಿದ್ದಾರೆ. ಖ್ಯಾತ ಲೇಖಕಿ ಅರುಂಧತಿ ರಾಯ್ ಅವರು ಘಟನೆ ನಡೆದ ಸ್ಥಳಕ್ಕೆ ಭೇಟಿ ನೀಡಿದ ನಂತರ ಮುಖ್ಯಮಂತ್ರಿ ಎ.ಕೆ.ಆ್ಯಂಟನಿಗೆ ಪತ್ರವೊಂದನ್ನು ಬರೆದು "ನಿನ್ನ ಕೈಗಳ ಮೇಲೆ ರಕ್ತವಿದೆ" ಎಂದು ಛೇಡಿಸಿದ್ದಾರೆ. ಹಿರಿಯ ಗಾಂಧಿವಾದಿ ನಿರ್ಮಲ ದೇಶಪಾಂಡೆ ಸೇರಿದಂತೆ ಹಲವು ಜನ ಸಾಮಾಜಿಕ ಕಾರ್ಯಕರ್ತರು ರಾಷ್ಟ್ರೀಯ ಮಾನವ ಹಕ್ಕುಗಳ ಆಯೋಗಕ್ಕೆ ದೂರು ಸಲ್ಲಿಸಿದ್ದಾರೆ. ರಾಜ್ಯದ ಆದಿವಾಸಿಗಳ ಮೇಲೆ ನಡೆಯಿತೆನ್ನಲಾದ ದೌರ್ಜನ್ಯದ ಬಗ್ಗೆ ಎರಡು ವಾರಗಳೊಳಗೆ ವರದಿಯೊಂದನ್ನು ನೀಡುವಂತೆ ರಾಷ್ಟ್ರೀಯ ಮಾನವ ಹಕ್ಕುಗಳ ಆಯೋಗವು ಆ್ಯಂಟನಿ ಸರ್ಕಾರಕ್ಕೆ ನೋಟೀಸ್ ನೀಡಿದೆ.

ಮುತ್ತಂಗ ಘಟನೆಯು ಸದನದಲ್ಲಿ ಭಾರೀ ಕೋಲಾಹಲಕ್ಕೆ ಕಾರಣವಾಯಿತು. ವಿರೋಧ ಪಕ್ಷವಾಗಿರುವ ಎಡಪ್ರಜಾಸತ್ತಾತ್ಮಕ ರಂಗವು ಈ ಘಟನೆಯನ್ನು ಒಂದು ನಿಲುವಳಿ ಸೂಚನೆಯ ಮೂಲಕ ಪ್ರಸ್ತಾಪಿಸಲು ಪ್ರಯತ್ನಪಟ್ಟಿತು. ಆದರೆ ಸ್ಪೀಕರ್ ವಕ್ಕಮ್ ಪುರುಷೋತ್ತಮನ್ ಅದಕ್ಕೆ ಅವಕಾಶವನ್ನೇ ಕೊಡಲಿಲ್ಲ. ಸ್ಪೀಕರ್ ವರ್ತನೆಯನ್ನು ಪ್ರತಿಭಟಿಸಿ ಎಲ್ಲಾ ಎಲ್.ಡಿ.ಎಫ್. ಶಾಸಕರು ಸದನದಿಂದ ಹೊರನಡೆದು ಸದನದ ಹೊರಗಡೆ ಬಹಿರಂಗ ಪ್ರತಿಭಟನೆ ನಡೆಸಿದರು. ಶೂನ್ಯ ವೇಳೆ ಮುಗಿದ ನಂತರ ಸದನದಲ್ಲಿ ಸಿಪಿಐ(ಎಂ) ಶಾಸಕಾಂಗ ಪಕ್ಷದ ಉಪನಾಯಕರಾದ ಕೋಡಿಯೇರಿ ಬಾಲಕೃಷ್ಣನ್ ಅವರು ಪೋಲೀಸ್ ದೌರ್ಜನ್ಯವನ್ನು ಪ್ರಸ್ತಾಪಿಸಿ ಘಟನೆಯ ಬಗ್ಗೆ ನ್ಯಾಯಾಂಗ ತನಿಖೆಗೆ ಆದೇಶಿಸಬೇಕೆಂದೂ, ಪೋಲೀಸ್ ಹಿಂಸಾಚಾರವನ್ನು ತಕ್ಷಣ ನಿಲ್ಲಿಸಬೇಕೆಂದು, ಜೈಲಿನಲ್ಲಿರುವ ಅಮಾಯಕರನ್ನು ಕೂಡಲೇ ಭೇಷರತ್ ಬಿಡುಗಡೆ ಮಾಡಬೇಕೆಂದೂ ಮತ್ತು ಸರ್ಕಾರ ಹಿಂದೆ ವಾಗ್ದಾನ ಮಾಡಿದಂತೆ ಆದಿವಾಸಿ ಕುಟುಂಬಗಳಿಗೆ ಕೂಡಲೇ ತಲಾ 5 ಎಕರೆ ಭೂಮಿಯನ್ನು ವಿತರಣೆ ಮಾಡಬೇಕೆಂದು ಒತ್ತಾಯಿಸಿದರಲ್ಲದೆ, ಈ ಬಗ್ಗೆ ಮುಖ್ಯಮಂತ್ರಿಯವರು ಸದನದಲ್ಲಿ ತಮ್ಮ ಹೇಳಿಕೆಯನ್ನು ನೀಡಬೇಕೆಂದೂ ಆಗ್ರಹಿಸಿದರು. ದೌರ್ಜನ್ಯಕ್ಕೆ ಒಳಗಾದವರು ನಿರ್ಗತಿಕ ಆದಿವಾಸಿಗಳಾಗಿರುವುದರಿಂದಲೇ ಆ್ಯಂಟನಿ ಸರ್ಕಾರವು ನ್ಯಾಯಾಂಗ ತನಿಖೆಗೆ ಹಿಂದೇಟು ಹಾಕುತ್ತಿದೆ ಎಂದು ಆರೋಪಿಸಿದ ಅವರು ದೌರ್ಜನ್ಯಕ್ಕೊಳಗಾದವರು ಯಾವುದಾದರೊಂದು ಪ್ರಭಾವಿ ಸಮುದಾಯಕ್ಕೆ ಸೇರಿದವರಾಗಿದ್ದರೆ ಸರ್ಕಾರ ಹೀಗೆ ಹಿಂದೇಟು ಹಾಕುತ್ತಿರಲಿಲ್ಲ ಎಂದು ಟೀಕಿಸಿದರು. ಸಿ.ಪಿ.ಐ ಶಾಸಕಾಂಗ ಪಕ್ಷದ ನಾಯಕರಾದ ರಾಜೇಂದ್ರನ್ ಅವರು ಮಾತನಾಡಿ ಸದನದಲ್ಲಿ ವಿರೋಧ ಪಕ್ಷಗಳ ಸದಸ್ಯರಿಗೆ ನಿಲುವಳಿ ಸೂಚನೆಯ ಪ್ರಸ್ತಾಪವನ್ನು ಸಹ ಮಾಡಲು ಬಿಡದ ಸ್ಪೀಕರ್ ವರ್ತನೆಯನ್ನು ಖಂಡಿಸಿದರು.

ಮರುದಿನ ಕಲಾಪಗಳಲ್ಲಿಯೂ ಮುತ್ತಂಗ ಘಟನೆಯನ್ನು ಕುರಿತು ಪ್ರಸ್ತಾಪಿಸಲು ವಿರೋಧ ಪಕ್ಷದ ನಾಯಕ ಕಾಮ್ರೇಡ್ ವಿ.ಎಸ್.ಅಚ್ಯುತಾನಂದನ್ ಅವರಿಗೂ ಸ್ಪೀಕರ್ ಅವಕಾಶ ನೀಡಲಿಲ್ಲ. ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಕಾಮ್ರೇಡ್ ಪಿಣರಾಯ್ ವಿಜಯನ್ ಮತ್ತು ಇತರ ಎಲ್.ಡಿ.ಎಫ್ ನಾಯಕರೊಂದಿಗೆ ಘಟನೆ ನಡೆದ ಸ್ಥಳಕ್ಕೆ ಭೇಟಿಕೊಟ್ಟು ದೌರ್ಜನ್ಯಕ್ಕೊಳಗಾದ ಆದಿವಾಸಿಗಳೊಂದಿಗೆ ಮಾತನಾಡಿ ಕಾಮ್ರೇಡ್ ಅಚ್ಯುತಾನಂದನ್ ಸದನಕ್ಕೆ ಬಂದಿದ್ದರು. ಚರ್ಚೆಗೆ ಅವಕಾಶ ನೀಡದಿದ್ದುದನ್ನು ಪ್ರತಿಭಟಿಸಿ ವಿರೋಧ ಪಕ್ಷಗಳ ಸದಸ್ಯರು ಘೋಷಣೆಗಳನ್ನು ಕೂಗಿ ಮುಖ್ಯಮಂತ್ರಿ ಮತ್ತು ಸ್ಪೀಕರ್ ರಾಜಿನಾಮೆ ನೀಡಬೇಕೆಂದು ಒತ್ತಾಯಿಸಿದರು.

ಕೇರಳದ ಈ ಘಟನೆ ಸಂಸತ್ತಿನಲ್ಲಿಯೂ ಪ್ರತಿಧ್ವನಿಸಿತು. ರಾಜ್ಯ ಸಭಾ ಸದಸ್ಯರೂ ಅಖಿಲ ಭಾರತ ಕೃಷಿ ಕೂಲಿಕಾರರ ಸಂಘದ ಪ್ರಧಾನ ಕಾರ್ಯದರ್ಶಿಯೂ ಆಗಿರುವ ಕಾಮ್ರೇಡ್ ವಿಜಯರಾಘವನ್ ಅವರು ಆದಿವಾಸಿಗಳ ಮೇಲೆ ನಡೆದ ಪೋಲೀಸ್ ಅತಿರೇಕವನ್ನು ರಾಜ್ಯಸಭೆಯಲ್ಲಿ ಖಂಡಿಸಿದರಲ್ಲದೆ ಘಟನೆಯನ್ನು ನ್ಯಾಯಾಂಗ ತನಿಖೆಗೆ ಒಪ್ಪಿಸಬೇಕೆಂದು ಒತ್ತಾಯಿಸಿದ್ದಾರೆ. ನ್ಯಾಯಾಂಗ ತನಿಖೆ ನಡೆಸಲು ಆ್ಯಂಟನಿಯವರು ನಿರಾಕರಿಸುತ್ತಿರುವುದು ಅವರು ಏನನ್ನೋ ಮುಚ್ಚಿಡಲು ಯತ್ನಿಸುತ್ತಿರುವುದನ್ನು ತೋರಿಸುತ್ತದೆ ಎಂದು ವಿಜಯರಾಘವನ್ ಹೇಳಿದ್ದಾರೆ.

ಕಾಂಗ್ರೆಸ್ ಸಂಸತ್ ಸದಸ್ಯ ವಿ.ಎಂ. ಸುಧೀರನ್ ಅವರು ರಾಜ್ಯ ಸರ್ಕಾರವು ತನ್ನ ಹಠಮಾರಿತನವನ್ನು ಬಿಟ್ಟು, ಅಗತ್ಯಬಿದ್ದರೆ ನ್ಯಾಯಾಂಗ ತನಿಖೆಗೆ ಆದೇಶ ನೀಡಬೇಕೆಂದು ಹೇಳಿದ್ದಾರೆ. ಮಾತ್ರವಲ್ಲ ಮುಖ್ಯಮಂತ್ರಿ ಆ್ಯಂಟನಿ ಅವರು ಇದನ್ನು ಒಂದು ಪ್ರತಿಷ್ಠೆಯ ಪ್ರಶ್ನೆ ಮಾಡಿಕೊಳ್ಳಬಾರದೆಂದು ಸಲಹೆ ನೀಡಿದ್ದಾರೆ. ಹಿರಿಯ ಕಾಂಗ್ರೆಸ್ ಮುಖಂಡ, ಮಾಜಿ ಮುಖ್ಯಮಂತ್ರಿ ಕೆ.ಕರುಣಾಕರನ್ ಅವರು ಹೇಳಿಕೆ ನೀಡುತ್ತಾ ಪೋಲೀಸ್ ಕಾರ್ಯಾಚರಣೆಯ ಸಂದರ್ಭದಲ್ಲಿ ನಾಪತ್ತೆಯಾದ 131 ಆದಿವಾಸಿಗಳನ್ನು ಪತ್ತೆಹಚ್ಚಲು ಸರ್ಕಾರ ಕ್ರಮ ಜರುಗಿಸಬೇಕೆಂದು ಒತ್ತಾಯಿಸಿದ್ದಾರಲ್ಲದೆ ಘಟನೆಯ ಬಗ್ಗೆ ನ್ಯಾಯಾಂಗ ತನಿಖೆಯಾಗಬೇಕು ಎಂದಿದ್ದಾರೆ. ಇಷ್ಟಾದರೂ ಆ್ಯಂಟನಿ ಸರ್ಕಾರ ನ್ಯಾಯಾಂಗ ತನಿಖೆಗೆ ಆದೇಶ ನೀಡಲು ಮುಂದಾಗುತ್ತಿಲ್ಲ. ಸರ್ಕಾರದ ಈ ಹಠಮಾರಿತನದ ಹಿನ್ನೆಲೆ ಏನಿರಬಹುದು?

ಹಿನ್ನೆಲೆ:- ಶತಶತಮಾನಗಳಿಂದ ಅರಣ್ಯವನ್ನೇ ಅವಲಂಬಿಸಿ ಅರಣ್ಯದಲ್ಲಿ ವಾಸಿಸುತ್ತಿರುವವರು ಆದಿವಾಸಿಗಳು. ತಮಗೆ ಆಶ್ರಯ ನೀಡಿದ ಅರಣ್ಯವನ್ನು ಕಾಪಾಡಿಕೊಂಡು ಬಂದಿರುವ ಈ ಜನಗಳು ಅರಣ್ಯ ಆಧಾರಿತ ವಿಶಿಷ್ಟ ಸಂಸ್ಕೃತಿಯನ್ನು ಬೆಳೆಸಿಕೊಂಡು ಬಂದಿರುತ್ತಾರೆ. ಆದರೆ ಬಂಡವಾಳಶಾಹಿ ಭೂಮಾಲಿಕ ಆಳುವ ವರ್ಗಗಳಿಗೆ ಈ ಆದಿವಾಸಿಗಳು ಅರಣ್ಯ ಅತಿಕ್ರಮಣದಾರರಂತೆ ಕಾಣುತ್ತಿದ್ದಾರೆ. ಅರಣ್ಯವನ್ನೇ ನಂಬಿ ಬದುಕುತ್ತಿರುವ ಈ ಜನಗಳಲ್ಲಿ ಇತ್ತೀಚಿನ ವರ್ಷಗಳಲ್ಲಿ ತಮಗೆ ವಾಸ ಮಾಡಲು ಮನೆ ಮತ್ತು ಕೃಷಿ ಮಾಡಲು ಭೂಮಿ ಬೇಕೆಂಬ ಜಾಗೃತಿ ಮೂಢಲಾರಂಭಿಸಿದೆ. ಆದಿವಾಸಿಗಳಿಗೆ ಕಾಡಿನಲ್ಲೇ ವಾಸಿಸಲು ಅವಕಾಶ ಕೊಟ್ಟರೆ ಅಲ್ಲಿ ಪ್ರಾಣಿ ಸಂಕುಲ ಮತ್ತು ಅರಣ್ಯಕ್ಕೆ ಅಪಾಯವಿದೆಯೆಂದು ಕೆಲವು ಪರಿಸರವಾದಿಗಳ ಆಕ್ಷೇಪ. ನ್ಯಾಯಾಲಯಗಳೂ ಇದೇ ಅಭಿಪ್ರಾಯವನ್ನು ವ್ಯಕ್ತಪಡಿಸಿರುವುದು ವಿಷಾದದ ಸಂಗತಿ. ಹೀಗಾಗಿ ಕೇರಳದಲ್ಲಿ ಮಾತ್ರವಲ್ಲ ದೇಶದ ಬಹುತೇಕ ರಾಜ್ಯಗಳಲ್ಲಿ ಈ ಸಮಸ್ಯೆ ಗಂಭೀರ ಸ್ವರೂಪ ತಾಳಲಿದ್ದು ಯಾರು ಯಾರ ಪರವಾಗಿ ನಿಲ್ಲುತ್ತಾರೆ



ಪೋಲೀಸ್ ದೌರ್ಜನ್ಯದಲ್ಲಿ ರಕ್ತಸಿಕ್ತವಾದ ಸಿಪಿಐ(ಎಂ) ನಾಯಕರು - ಕಾರ್ಯಕರ್ತರು

ಎಂಬ ಪರೀಕ್ಷೆ ಆಗಲಿದೆ.

ಎಲ್ಲ ಆದಿವಾಸಿಗಳಂತೆ ಕೇರಳದ ಆದಿವಾಸಿಗಳೂ ಕೇರಳದ ಕಾಡಿನ ಮಕ್ಕಳು. ಕಾಲಕ್ರಮೇಣ ಹೊರಗಿನ ಭೂಕಬಳಿಕೆದಾರರು ಬಂದು ಇವರನ್ನು ಇವರ ಭೂಮಿಯಿಂದ ಹೊರದಬ್ಬಿದ್ದಾರೆ. ಕಾಡಿನಿಂದ ಹೊರಬಂದ ಇವರು ಕೃಷಿ ಕೂಲಿಕಾರರಾಗಿ ಜೀವನ ಸಾಗಿಸುತ್ತಾ ಇದ್ದಾರೆ. ತಮ್ಮ ಭೂಮಿಯನ್ನು ತಮಗೆ ಹಿಂತಿರುಗಿಸಬೇಕೆಂದು ಕಳೆದ ಒಂದೆರಡು ದಶಕಗಳಿಂದ ಇವರು ಒತ್ತಾಯಿಸುತ್ತಾ ಇದ್ದಾರೆ. 1975 ರ ವರೆಗೆ ಆದಿವಾಸಿಗಳ ವಶದಲ್ಲಿದ್ದ ಭೂಮಿಯನ್ನು ಅವರಿಗೆ ಹಿಂತಿರುಗಿಸಬೇಕೆಂದು ಸರ್ವೋಚ್ಚ ನ್ಯಾಯಾಲಯವು ಮತ್ತು ರಾಜ್ಯ ಶ್ರೇಷ್ಠ ನ್ಯಾಯಾಲಯವು ತೀರ್ಪುಗಳನ್ನು ಸಹ ನೀಡಿವೆ.

ಬೇರೆ ರಾಜ್ಯಗಳನ್ನು ಹೋಲಿಸಿದರೆ, ಕೇರಳದಲ್ಲಿ ಆದಿವಾಸಿಗಳ ಸಂಖ್ಯೆ ತುಂಬಾ ಕಡಿಮೆ. ಕೇರಳದಲ್ಲಿ ಸುಮಾರು 45 ಸಾವಿರ ಆದಿವಾಸಿ ಕುಟುಂಬಗಳಿವೆ ಎಂದು ಹೇಳಲಾಗುತ್ತಿದ್ದು ಒಟ್ಟು ಸಂಖ್ಯೆ 2.5 ಲಕ್ಷ ಎನ್ನಲಾಗುತ್ತಿದೆ. ಇದು ರಾಜ್ಯದ ಒಟ್ಟು ಜನಸಂಖ್ಯೆಯ ಕೇವಲ ಒಂದು ಶೇಕಡಾ ಮಾತ್ರ. ನೂರಾರು ವರ್ಷಗಳ ಹಿಂದೆ ಆದಿವಾಸಿಗಳ ಭೂಮಿಯನ್ನು ಕಬಳಿಸಿದವರಾಗಲಿ ಅಂದು ಭೂಮಿಯನ್ನು ಅನುಭವಿಸುತ್ತಿದ್ದ ಆದಿವಾಸಿಗಳಾಗಲಿ ಇಂದು ಜೀವಂತವಿಲ್ಲ. ಮೂಲ ಭೂಕಬಳಿಕೆದಾರರ ಎರಡನೇ ಮತ್ತು ಮೂರನೇ ತಲೆಮಾರಿನವರು ಈಗ ಆ ಭೂಮಿಯ ಮಾಲಿಕರಾಗಿದ್ದಾರೆ. ಅವರೊಳಗೆ ದೊಡ್ಡ ಸಂಖ್ಯೆಯಲ್ಲಿ ಸಣ್ಣ ಮತ್ತು ಅಂಚಿನ ಹಿಡುವಳಿ ದಾರರಿದ್ದಾರೆ. ಇಂತವರಿಂದ ಭೂಮಿಯನ್ನು ಕಿತ್ತುಕೊಳ್ಳುವುದು ಹೊಸ ಸಮಸ್ಯೆಯನ್ನು ಹುಟ್ಟುಹಾಕುತ್ತದೆ. ಈ ಸಮಸ್ಯೆಯನ್ನು 1996 ರಲ್ಲಿ ಕೈಗೆತ್ತಿಕೊಂಡ ಸಿಪಿಐ(ಎಂ) ನೇತೃತ್ವದ ಎಲ್.ಡಿ.ಎಫ್ ಸರ್ಕಾರ ಒಂದು ಕಾನೂನನ್ನು ಜಾರಿಗೆ ತಂದು ಭೂಮಿಯನ್ನು ಬಯಸುವ ಪ್ರತಿಯೊಂದು ಆದಿವಾಸಿ ಕುಟುಂಬಕ್ಕೆ ತಲಾ ಎರಡು ಎಕರೆ ಬದಲಿ ಭೂಮಿಯನ್ನು ನೀಡುವ ಹಾಗೂ ಒಂದು ಮನೆಯನ್ನು ಕಟ್ಟಿಕೊಡುವ ಯೋಜನೆಯನ್ನು ಜಾರಿಗೆ ತಂದಿತು.

ದಾರಿ ತಪ್ಪಿದ ಚಳುವಳಿ:

ಆದಿವಾಸಿಗಳ ನಡುವೆ ತಮ್ಮ ಪ್ರಭಾವವನ್ನು ಬೆಳೆಸಲು ಒಂದು ಕಡೆ ಕ್ರಿಶ್ಚಿಯನ್ ಚರ್ಚ್, ಮತ್ತೊಂದು ಕಡೆ ಮಾಜಿ ನಕ್ಸಲ್‌ವಾದಿಗಳು ಪ್ರಯತ್ನ ಪಡುತ್ತಲೇ ಇದ್ದರು. ಆದಿವಾಸಿಗಳ ನಡುವೆ ಕಮ್ಯುನಿಸ್ಟರ ಪ್ರಭಾವವನ್ನು ಕಡಿಮೆ ಮಾಡಲು ಕಾಂಗ್ರೆಸ್ ಪಕ್ಷವೂ ಅಷ್ಟೇ ಆಸಕ್ತಿಯುಳ್ಳದಾಗಿತ್ತು. ಸಿಪಿಐ(ಎಂ) ಚಟುವಟಿಕೆಗಳಲ್ಲಿ ಭಾಗವಹಿಸುತ್ತಾ ಬಂದಿದ್ದ ಸಿ.ಕೆ.ಜಾನು ಎಂಬ ಆದಿವಾಸಿ ಮಹಿಳೆಯನ್ನು ಹಣದ ಆಮಿಷದ ಮೂಲಕ ತನ್ನ ಬಲೆಗೆ ಬೀಳುವಂತೆ ಮಾಡುವುದರಲ್ಲಿ ಕ್ರಿಶ್ಚಿಯನ್ ಚರ್ಚ್ ಯಶಸ್ವಿಯಾಯಿತು. ಚರ್ಚ್ ಅವಳ ವಿದೇಶಿ ಪ್ರವಾಸಕ್ಕೂ ವ್ಯವಸ್ಥೆ ಮಾಡಿತು. ವಿದೇಶದಿಂದ ಸ್ವಯಂ ಸೇವಾ ಸಂಸ್ಥೆಯೊಂದರ ಪ್ರತಿನಿಧಿಯಾಗಿ ಮರಳಿದ ಜಾನು ಕಮ್ಯುನಿಸ್ಟರ ವಿರುದ್ಧ ಆದಿವಾಸಿಗಳನ್ನು ಸಂಘಟಿಸಲು ಆರಂಭಿಸಿದಳು.

2001 ಆಗಸ್ಟ್ ತಿಂಗಳಲ್ಲಿ ತಿರುವನಂತಪುರ ವಿಧಾನಸಭಾ ಭವನದ ಎದುರು ಜಾನು ನೇತೃತ್ವದಲ್ಲಿ ಆದಿವಾಸಿಗಳ ಹೋರಾಟವೊಂದು ಆರಂಭವಾಯಿತು. ಆದಿವಾಸಿಗಳು ಅಲ್ಲಿ ಗುಡಿಸಲುಗಳನ್ನು ಹಾಕಿಕೊಂಡು ಸುಮಾರು 3 ವಾರಗಳ ಕಾಲ ಹೋರಾಟ ನಡೆಸಿದರೂ ಆ್ಯಂಟನಿ ಸರ್ಕಾರ ಸುಮ್ಮನಿತ್ತು. ಜಾನು ನೇತೃತ್ವದ ಆದಿವಾಸಿಗಳ ಗುಂಪನ್ನು ವಿಶ್ವಾಸಕ್ಕೆ ತೆಗೆದುಕೊಂಡು ಅದರ ರಾಜಕೀಯ ಲಾಭ ಪಡೆಯಲು ಆ್ಯಂಟನಿ ಸರ್ಕಾರ ಬಯಸಿದ್ದು ಗುಟ್ಟೇನಲ್ಲ. ಚಳುವಳಿಯ ನಾಯಕಿ ಜಾನು ಅವರೊಂದಿಗೆ ಒಪ್ಪಂದ ಎಂಬ ನಾಟಕವನ್ನು ಏರ್ಪಡಿಸಿದ ಸರ್ಕಾರ ಆದಿವಾಸಿ ಕುಟುಂಬಗಳಿಗೆ ತಲಾ 5 ಎಕರೆ ಭೂಮಿಯನ್ನು ನೀಡುವ ಭರವಸೆ ನೀಡಿತು. ಒಪ್ಪಂದಕ್ಕೆ ಸಹಿ ಹಾಕುವ ಸಂದರ್ಭಕ್ಕೆಂದು ಸರ್ಕಾರಿ ಆತಿಥ್ಯದಲ್ಲೇ ಆದಿವಾಸಿಗಳ ಬರ್ಜರಿ ಸಮಾವೇಶವನ್ನು ಏರ್ಪಡಿಸಲಾಗಿತ್ತು. ಆದಿವಾಸಿಗಳ ವಿವಿಧ ಗುಂಪುಗಳನ್ನು ಒಂದುಗೂಡಿಸುವ ಉದ್ದೇಶದಿಂದ ಈ ಸಮಾವೇಶದಲ್ಲಿ 'ಆದಿವಾಸಿ ಗೋತ್ರ ಸಭಾ' ಎಂಬ ಸಂಘಟನೆಯನ್ನು ಹುಟ್ಟುಹಾಕಲಾಯಿತಲ್ಲದೆ ಸಿ.ಕೆ.ಜಾನು ಅವರನ್ನು ಅದರ ಅಧ್ಯಕ್ಷೆ ಎಂದೂ ಎಂ.ಗೀತಾನಂದನ್ ಎಂಬ ಮಾಜಿ ನಕ್ಸಲ್‌ವಾದಿಗಳನ್ನು ಸಂಘಟನೆಯ ಪ್ರಧಾನ ಸಂಚಾಲಕನೆಂದೂ ಘೋಷಿಸಲಾಯಿತು. ಆದರೆ ಒಪ್ಪಂದದ ನಾಟಕ ಮುಗಿದು ಒಂದು ವರ್ಷದ ನಂತರವೂ ಆದಿವಾಸಿಗಳಿಗೆ ಸರ್ಕಾರ ವಾಗ್ದಾನ ಮಾಡಿದ ಭೂಮಿ ಸಿಗಲೇ ಇಲ್ಲ.


ಪೊಲೀಸ್ ಧಾಳಿಗೆ ಆದಿವಾಸಿಗಳ ಪ್ರತಿರೋಧ

ಸಿಪಿಐ(ಎಂ) ನೇತೃತ್ವದಲ್ಲಿ ಭೂ ಆಕ್ರಮಣ:

ಅರಣ್ಯ ಭೂಮಿಯ ಮೇಲೆ ಆದಿವಾಸಿಗಳಿಗಿರುವ ಹಕ್ಕಿನ ರಕ್ಷಣೆಗಾಗಿ ಹೋರಾಟವನ್ನು ತೀವ್ರಗೊಳಿಸಲು ಸಿಪಿಐ(ಎಂ) ನಿರ್ಧರಿಸಿತು. ಆದಿವಾಸಿಗಳನ್ನು ಅಖಿಲ ಭಾರತ ಕೃಷಿಕೂಲಿಕಾರರ ಸಂಘದಿಂದ ಪ್ರತ್ಯೇಕಿಸಿ' ಆದಿವಾಸಿ ಕ್ಷೇಮ ಸಮಿತಿ ಎಂಬ ಸಂಘಟನೆಯ ಅಡಿಯಲ್ಲಿ ಸಂಘಟಿಸಲು ನಿರ್ಧರಿಸಲಾಯಿತಲ್ಲದೆ ವಾಯನಾಡ ಜಿಲ್ಲೆಯ 16 ಕಡೆ ಅರಣ್ಯಭೂಮಿ ಅತಿಕ್ರಮಣ ಚಳುವಳಿಯನ್ನು ಆರಂಭಿಸಲು ನಿರ್ಧರಿಸಲಾಯಿತು. ಆದಿವಾಸಿಗಳ ಅರಣ್ಯಭೂಮಿಯ ಹಕ್ಕು ಅರಣ್ಯದಲ್ಲೇ ಸ್ಥಾಪನೆಯಾಗಬೇಕಾಗಿರುವುದರಿಂದ ಅರಣ್ಯ ಭೂಮಿ ಅತಿಕ್ರಮಣ ಚಳುವಳಿಗೆ ವ್ಯಾಪಕ ಬೆಂಬಲ ವ್ಯಕ್ತವಾಯಿತು. ಅರಣ್ಯವನ್ನು ಪ್ರವೇಶ ಮಾಡುವ ಆದಿವಾಸಿ ಕುಟುಂಬಗಳು ಅಲ್ಲಿರುವ ಮರಗಳನ್ನು ಕಡಿಯದೇ ಗುಡಿಸಲುಗಳನ್ನು ಹಾಕಿಕೊಂಡು ವಾಸ ಮಾಡಲು ಆರಂಭಿಸುವುದೆಂದು ನಿರ್ಧರಿಸಲಾಗಿತ್ತು. ಪೋಲೀಸರು ಬಂಧಿಸಲು ಬಂದರೆ ಸಾಮೂಹಿಕವಾಗಿ ಬಂಧನಕ್ಕೆ ಒಳಗಾಗಿ, ನ್ಯಾಯಾಲಯದಲ್ಲಿ ಜಾಮೀನು ನೀಡದೇ ಜೈಲಿಗೆ ಹೋಗುವುದೆಂದೂ ತೀರ್ಮಾನಿಸಲಾಗಿತ್ತು. ಮಹಿಳೆಯರು ಮಕ್ಕಳು ಎಂಬ ಬೇದವಿಲ್ಲದೆ ಸಾವಿರಾರು ಜನ ಆದಿವಾಸಿಗಳು ಜೈಲು ತುಂಬತೊಡಗಿದ್ದು ಸರ್ಕಾರವನ್ನು ಪೇಚಿಗೆ ಸಿಲುಕಿಸಿತು. ಸರ್ಕಾರ ಅನಿವಾರ್ಯವಾಗಿ ಸಿಪಿಐ(ಎಂ)ನೊಂದಿಗೆ ಒಪ್ಪಂದಕ್ಕೆ ಬಂದು ಸಪ್ಟೆಂಬರ್ 1,2003 ರೊಳಗಾಗಿ ಆದಿವಾಸಿ ಕುಟುಂಬಗಳಿಗೆ ಭೂಮಿ ವಿತರಣೆ ಮಾಡುವುದನ್ನು ಪೂರ್ಣಗೊಳಿಸುವ ವಾಗ್ದಾನ ಮಾಡಿತು. ಜೈಲುಗಳಿಂದ ಹಿಂತಿರುಗಿದ ಆದಿವಾಸಿಗಳು ತಾವು ಅತಿಕ್ರಮಣ ಮಾಡಿದ್ದ ಅರಣ್ಯ ಭೂಮಿಗೆ ಹಿಂತಿರುಗಿದರಲ್ಲದೆ ಇಂದಿಗೂ ಅಲ್ಲಿಯೇ ವಾಸ ಮಾಡುತ್ತಿದ್ದಾರೆ. ಜಾನು ಜೊತೆ ಚಳುವಳಿಗೆ ಹೋದವರು ಸರ್ಕಾರಿ ಒಪ್ಪಂದದ ಕಾಗದದಲ್ಲೇ ಭೂಮಿಯನ್ನು ಹುಡುಕುತ್ತಿದ್ದರೆ ಭೂಮಿಯ ಮೇಲೆ ತಮ್ಮ ಹಕ್ಕನ್ನು ಸ್ಥಾಪಿಸಲು ಮುಂದಾದವರಿಗೆ ಅದು ಲಭ್ಯವಾಯಿತು.

ಮುತ್ತಂಗ ಅಭಯಾರಣ್ಯದಲ್ಲಿ ಹಿಂಸಾಚಾರ

ಸಿಪಿಐ(ಎಂ) ನೇತೃತ್ವದ ಆದಿವಾಸಿ ಚಳುವಳಿಯು ಯಶಸ್ವಿಯಾದದ್ದನ್ನು ಕಂಡು ಜಾನುಗೆ ಮುಖಭಂಗವಾಯಿತು. ಆದಿವಾಸಿಗಳ ಏಕೈಕ ನಾಯಕಿ ಎಂದು ಬೀಗುತ್ತಿದ್ದ ಅವಳು ಮಾಧ್ಯಮಗಳ ಬೆಂಬಲದಿಂದ ಮತ್ತೊಮ್ಮೆ ಜನರ ಗಮನ ಸೆಳೆಯಲು ಅರಣ್ಯ ಭೂಮಿ ಆಕ್ರಮಣಕ್ಕೆ ಆದಿವಾಸಿಗಳನ್ನು ಇಳಿಸಲು ನಿರ್ಧರಿಸಿದಳು.

ವಾಯನಾಡ್ ಅರಣ್ಯ ಪ್ರದೇಶದಲ್ಲಿ ಜೈವಿಕ ವೈವಿಧ್ಯತೆಯನ್ನು ಸಂರಕ್ಷಿಸುವ ಉದ್ದೇಶದಿಂದ 1973 ರಲ್ಲಿ ಮುತ್ತಂಗ ವನ್ಯಜೀವಿ ಅಭಯಾರಣ್ಯ' ವನ್ನು ಸ್ಥಾಪಿಸಲಾಗಿತ್ತು ಈ ಸಂರಕ್ಷಿತ ಅರಣ್ಯ ಪ್ರದೇಶವನ್ನು ಜಾನು ನೇತೃತ್ವದಲ್ಲಿ ಜನವರಿ 3 ರಿಂದ ಪ್ರವೇಶಿಸಿದ ಆದಿವಾಸಿ ಕುಟುಂಬಗಳು ಅಲ್ಲಿ ಗುಡಿಸಲುಗಳನ್ನು ಹಾಕಿಕೊಂಡು ವಾಸ ಮಾಡಲು ಆರಂಭಿಸಿದರಲ್ಲದೆ ಭೂ ಸಾಗುವಳಿಯನ್ನೂ ಆರಂಭಿಸಿದರು. ತಾವು ಆಕ್ರಮಿಸಿಕೊಂಡ ಪ್ರದೇಶ ದಲ್ಲಿ ತಮ್ಮ ಸ್ವಯಂ ಆಡಳಿತವನ್ನು ಘೋಷಿಸಿ ಕೊಂಡರಲ್ಲದೆ ಸರ್ಕಾರಿ ಅಧಿಕಾರಿಗಳಾಗಲಿ, ಆದಿವಾಸಿಗಳಲ್ಲದ ಯಾರೇ ಆಗಲಿ ಒಳಗೆ ಕಾಲಿಡುವುದನ್ನು ತಡೆಯಲು ಚೆಕ್‌ಪೋಸ್ಟ್ ಒಂದನ್ನು ಹಾಕಿದರು. ಭೂಮಿಯನ್ನು ಬಯಸುವ ಆದಿವಾಸಿ ಕುಟುಂಬಗಳು ತಲಾ 250 ರೂಪಾಯಿ ಗಳನ್ನು ಕೊಟ್ಟು ಪ್ರವೇಶ ಪಡೆಯಬಹುದಾಗಿತ್ತು. 5 ಎಕರೆ ಭೂಮಿ ಸಿಗುತ್ತದೆ ಎಂಬ ಆಸೆಗೆ ದೂರ ದೂರದ ಪ್ರದೇಶಗಳಿಂದ ಬಂದ ಆದಿವಾಸಿಗಳು ಮುತ್ತಂಗ ಅರಣ್ಯವನ್ನು ಪ್ರವೇಶಿಸುತ್ತಿದ್ದರು. ಸುಮಾರು 45 ದಿನಗಳವರೆಗೂ ಮುತ್ತಂಗ ಅರಣ್ಯದಲ್ಲಿ ಆದಿವಾಸಿಗಳ ಸ್ವಯಂ ಆಡಳಿತ ನಿರಾತಂಕವಾಗಿ ಮುಂದುವರೆಯಿತು.


ನ್ಯಾಯಬೇಕೆ? ನ್ಯಾಯಾಂಗ ತನಿಖೆಯಾಗಬೇಕೆ? ಪೊಲೀಸ್ ಧಾಳಿ

ಅತಿಕ್ರಮಣ ದಾರರನ್ನು ಒಕ್ಕಲೆಬ್ಬಿಸುವಂತೆ ಕೇಂದ್ರ ಅರಣ್ಯ ಮಂತ್ರಾಲಯವು ಒತ್ತಡ ಹೇರುತ್ತಿದ್ದರೂ ಆ್ಯಂಟನಿ ಸರ್ಕಾರ ಅದನ್ನು ಗಂಭೀರವಾಗಿ ಪರಿಗಣಿಸಲಿಲ್ಲ. ರಾಜ್ಯ ಅರಣ್ಯ ಇಲಾಖೆ ಹಾಗೂ ಕೆಲವು ಪರಿಸರವಾದಿ ಗುಂಪುಗಳ ಆಕ್ಷೇಪಕ್ಕೂ ಸರ್ಕಾರ ಕಿವಿಗೊಡಲಿಲ್ಲ. ಅತಿಕ್ರಮಣದಾರರ ವಿರುದ್ಧ ಕ್ರಮ ಜರುಗಿಸುವ ಬದಲು ಸರ್ಕಾರವೇ ಅವರಿಗೆ ಆಹಾರ ಸಾಮಗ್ರಿಗಳನ್ನು ಮತ್ತು ಔಷಧಿಗಳನ್ನು ಒದಗಿಸುವ ಮೂಲಕ ಬೆಂಬಲ ನೀಡಿತು. ಅಷ್ಟರಲ್ಲಿ ಜರುಗಿದ ಅನಿರೀಕ್ಷಿತ ಘಟನೆಯು ಇಡೀ ಪ್ರಕರಣವನ್ನು ಹಿಂಸಾಚಾರಕ್ಕೆ ತಿರುಗಿಸಿತು.


ಫೆಬ್ರವರಿ 17ರ ರಾತ್ರಿ ನಿಗೂಢವಾದ ಕಾಡ್ಗಿಚ್ಚೊಂದು ಮುತ್ತಂಗ ಅರಣ್ಯ ಪ್ರದೇಶದಲ್ಲಿ ಕಾಣಿಸಿಕೊಂಡಿತು. ಬೆಂಕಿಯ ಕಾರಣವನ್ನು ವಿಚಾರಿಸಲು ಅರಣ್ಯ ಸಿಬ್ಬಂಧಿಗಳು ಕಾಡಿಗೆ ಬಂದರು. ತಮ್ಮನ್ನು ಕಾಡಿನಿಂದ ಓಡಿಸಲು ಅರಣ್ಯ ಇಲಾಖೆಯವರೇ ಕಾಡಿಗೆ ಬೆಂಕಿ ಹಚ್ಚಿರಬೇಕೆಂಬ ಅನುಮಾನದಿಂದ ಆದಿವಾಸಿಗಳು ಅರಣ್ಯ ಸಿಬ್ಬಂಧಿಯವರಲ್ಲಿ 21 ಜನರನ್ನು ಅಪಹರಿಸಿ ಒತ್ತೆಯಾಳುಗಳಾಗಿ ಇಟ್ಟುಕೊಂಡರು. ಅವರಲ್ಲಿ ಅನೇಕ ಜನ ಸ್ಥಳೀಯರಾಗಿದ್ದು ಅರಣ್ಯ ಇಲಾಖೆಯಲ್ಲಿ ದಿನಗೂಲಿಗಳಾಗಿ ಕೆಲಸ ಮಾಡುತ್ತಿದ್ದರು.

ಆದಿವಾಸಿಗಳು ಹಿಡಿದಿಟ್ಟ ತಮ್ಮ ಜನಗಳನ್ನು ಬಿಡಿಸಿಕೊಡುವಂತೆ ಜಿಲ್ಲಾಡಳಿತದ ಮೇಲೆ ಸ್ಥಳೀಯರು ತೀವ್ರ ಒತ್ತಡ ಹೇರಿದರು. ಸ್ವತಃ ಜಿಲ್ಲಾಧಿಕಾರಿಗಳು ಬಂದು ಮಧ್ಯಸ್ತಿಕೆ ವಹಿಸಿದ ಬಳಿಕವಷ್ಟೇ ಒತ್ತೆಯಾಳುಗಳನ್ನು ಬಿಡುಗಡೆ ಮಾಡಲಾಯಿತು.

ಒತ್ತೆಯಾಳುಗಳ ಬಿಡುಗಡೆಗೆ ಮಾತುಕತೆ ನಡೆಯುತ್ತಿದ್ದಂತೆ ಪರಿಸ್ತಿತಿ ಪ್ರಕ್ಷುಬ್ಧಗೊಂಡಿತ್ತು. ಆದಿವಾಸಿಗಳ ಅತಿಕ್ರಮಣ ತೆರವುಗೊಳಿಸಬೇಕು ಮತ್ತು ಒತ್ತೆಯಾಳುಗಳನ್ನು ತಕ್ಷಣ ಬಿಡುಗಡೆ ಮಾಡಬೇಕೆಂದು ಒತ್ತಾಯಿಸುವ ಸ್ಥಳೀಯ ಜನರು ಅಲ್ಲಿ ದೊಡ್ಡ ಸಂಖ್ಯೆಯಲ್ಲಿ ಜಮಾಯಿಸಿದ್ದರು. ಜಾನು ಮತ್ತು ಗೀತಾನಂದನ್ ಅವರನ್ನು ತಕ್ಷಣ ಬಂಧಿಸಬೇಕೆಂದೂ ಅವರು ಕೂಗಾಡುತ್ತಿದ್ದರು. ಆದಿವಾಸಿಗಳು ಸಹ ಬಿಲ್ಲು ಬಾಣ ಹಾಗೂ ಹರಿತವಾದ ಆಯುಧಗಳನ್ನು ಹಿಡಿದುಕೊಂಡು ಸಜ್ಜಾಗಿದ್ದರು. ಕ್ಷಣಾರ್ಧದಲ್ಲಿ ಪೋಲೀಸರ ಮತ್ತು ಆದಿವಾಸಿಗಳ ನಡುವೆ ಅಲ್ಲೊಂದು ರಣರಂಗವೇ ಸೃಷ್ಟಿಯಾಯಿತು.

ಪೋಲೀಸ್ ಪೇದೆಯೊಬ್ಬನನ್ನು ಆದಿವಾಸಿಗಳು ಹಿಡಿದಿಟ್ಟಿದ್ದರು. ಆತನನ್ನು ಚಿತ್ರಹಿಂಸೆಗೆ ಗುರಿಪಡಿಸಿದ್ದಲ್ಲದೆ ಅವನ ಮೇಲೆ ಸೀಮೆ

ಪುಟ 10 ಕ್ಕೆ


ಮುತ್ತಂಗ ಅರಣ್ಯದಲ್ಲಿ ಸರ್ಕಾರದ ದಮನಕಾಂಡದ ದಳ್ಳುರಿಗೆ ಕಾಡು - ಜನರು ಆಹುತಿ

..........ಆ್ಯಂಟನಿ ಸರ್ಕಾರದ ದೌರ್ಜನ್ಯ

ಪುಟ 9 ರಿಂದ

ಎಣ್ಣೆಯನ್ನು ಸುರಿದಿದ್ದರು. ಇನ್ನೇನು ಅವನಿಗೆ ಬೆಂಕಿ ಹಚ್ಚುತ್ತಾರೆ ಎನ್ನುವಷ್ಟರಲ್ಲಿ ಪೋಲೀಸರು ಆದಿವಾಸಿಗಳತ್ತ ನುಗ್ಗಿ ಮನಬಂದಂತೆ ಗುಂಡು ಹಾರಿಸಿದರು. ಈ ಅನಿರೀಕ್ಷಿತ ಹಿಂಸಾಚಾರದಿಂದ ಕಂಗೆಟ್ಟ ಆದಿವಾಸಿಗಳು ದಟ್ಟ ಅರಣ್ಯದಲ್ಲಿ ಕಣ್ಮರೆಯಾದರು. ಜಾನು ಮತ್ತು ಗೀತಾನಂದನ್ ಪೋಲೀಸರ ಕೈಗೆ ಸಿಗದೆ ಪರಾರಿಯಾಗಿದ್ದರು. ಫೆಬ್ರವರಿ 22 ರಂದು ನಸುಕಿನಲ್ಲಿ ಇವರಿಬ್ಬರು ತಮ್ಮ ರಹಸ್ಯ ತಾಣದಿಂದ ಇನ್ನೊಂದು ಕಡೆಗೆ ಹೊರಟಾಗ ಸ್ಥಳೀಯರು ಅವರಿಬ್ಬರನ್ನು ಹಿಡಿದು ಪೋಲೀಸರಿಗೊಪ್ಪಿಸಿದರು.

ತಲೆಕೆಳಗಾದ ಆ್ಯಂಟನಿ ಲೆಕ್ಕಾಚಾರ

ಜಾನು ಎಂಬ ಅಪ್ರಬುದ್ಧ ಮಹಿಳೆಯನ್ನು ಬಳಸಿಕೊಂಡು ಆದಿವಾಸಿಗಳ ನಡುವೆ ಬೆಳೆಯುತ್ತಿದ್ದ ಸಿಪಿಐ(ಎಂ) ಪ್ರಭಾವವನ್ನು ತಡೆಯಬಹುದೆಂಬ ಮುಖ್ಯಮಂತ್ರಿ ಎ.ಕೆ.ಆ್ಯಂಟನಿಯ ಲೆಕ್ಕಾಚಾರ ತಲೆಕೆಳಗಾಗಿದೆ. ತಾನು ಬೆಂಬಲಿಸಿದ ಚಳುವಳಿಯನ್ನು ಸಮರ್ಥಿಸಲಾಗದ ಪರಿಸ್ಥಿತಿ! ಘಟನೆಯಲ್ಲಿ ಚಿತ್ರಹಿಂಸೆಗೆ ಗುರಿಯಾಗಿದ್ದ ಪೋಲೀಸ್ ವೇದ ತೀವ್ರ ರಕ್ತಸ್ರಾವದಿಂದಾಗಿ ಆಸ್ಪತ್ರೆಗೆ ಸಾಗಿಸುವಾಗ ದಾರಿಯಲ್ಲಿ ಕೊನೆಯುಸಿರೆಳೆದನು.

ಪೋಲೀಸ್ ಕಾರ್ಯಾಚರಣೆಯನ್ನು ಸಮರ್ಥಿಸುತ್ತಾ ಮುಖ್ಯಮಂತ್ರಿ ಆ್ಯಂಟನಿ ನ್ಯಾಯಾಂಗ ತನಿಖೆಯ ಬೇಡಿಕೆಯನ್ನು ತಿರಸ್ಕರಿಸಿದ್ದಾರೆ. ಆದಿವಾಸಿಗಳ ಬಗ್ಗೆ ತಮ್ಮ ಸರ್ಕಾರವು ಸಹಾನುಭೂತಿಯ ಧೋರಣೆಯನ್ನೇ ಅನುಸರಿಸುತ್ತಾ ಬಂದಿದೆ ಎಂದ ಅವರು ಆದಿವಾಸಿಗಳ ಸ್ವಯಂ ಆಡಳಿತ ಘೋಷಣೆಯನ್ನಾಗಲಿ, ಸರ್ಕಾರದ ವಿರುದ್ಧ ಅವರ ಸಶಸ್ತ್ರ ದಂಗೆಯನ್ನಾಗಲಿ ಸಹಿಸಲು ಸಾಧ್ಯವಿಲ್ಲ ಎಂದಿದ್ದಾರೆ.



ಪೋಲೀಸ್ ಸರ್ಪಗಾವಲಿನಲ್ಲಿ ಅಳಿದುಳಿದ ಬುಡಕಟ್ಟು ಜನರ ಶವಗಳು

ಪರಿಸರ ಮತ್ತು ಅರಣ್ಯ ಖಾತೆಯ ಮಂತ್ರಿ ಕೆ.ಸುಧಾಕರನ್ ಅವರು ದೆಹಲಿಯಲ್ಲಿ ಮಾತನಾಡುತ್ತಾ ಮುತ್ತಂಗ ಘಟನೆಗೆ ಗುಪ್ತಚಾರ ಇಲಾಖೆಯ ವೈಫಲ್ಯವೇ ಕಾರಣ ಎಂದರಲ್ಲದೆ ಒತ್ತೆಯಾಳುಗಳನ್ನು ಉಳಿಸುವ ದೃಷ್ಟಿಯಿಂದ ಪೋಲೀಸ್ ಕಾರ್ಯಾಚರಣೆಗೆ ಆದೇಶ ನೀಡಲಾಯಿತು ಎಂದಿದ್ದಾರೆ.

ಆ್ಯಂಟನಿ ಸರ್ಕಾರವು ತನ್ನ ವೈಫಲ್ಯವನ್ನು ಮುಚ್ಚಿಹಾಕಲು ಭಾರೀ ಕಸರತ್ತು ನಡೆಸುತ್ತಿದೆ. ಅಪಹರಣದ ಪ್ರಕರಣ ದೇಶದಲ್ಲಿ ಇದೇ ಮೊದಲಿನದಲ್ಲ. ಒತ್ತೆಯಾಳುಗಳ ಬಿಡುಗಡೆಯ ಸಂದರ್ಭದಲ್ಲಿ ತುಂಬಾ ಜಾಗರೂಕತೆಯಿಂದ ಕಾರ್ಯಾಚರಣೆ ನಡೆಸಬೇಕಾಗುತ್ತದೆ. ಜೀವ ಎಂಬುದು ಅಮೂಲ್ಯವಾದದ್ದು - ಅದು ಪೋಲೀಸ್ ವೇದೆಯ ಜೀವವಾಗಿರಲಿ, ಆದಿವಾಸಿಯ ಜೀವವೇ ಆಗಿರಲಿ, ಮಕ್ಕಳು ಮಹಿಳೆಯರು ಎಂದು ನೋಡದೇ ಮನಬಂದಂತೆ ಅವರ ಮೇಲೆ ಗುಂಡು ಹಾರಿಸಿದ್ದು ಯಾವ ಕಾರಣಕ್ಕೂ ಸಮರ್ಥನೀಯವಲ್ಲ. ಅಷ್ಟೊಂದು ಜನ ಸತ್ತಿದ್ದರೆ ಅವರ ಹೆಣಗಳೆಲ್ಲಿ ಎಂದು ಪ್ರಶ್ನಿಸಲಾಗುತ್ತದೆ. ಹೆಣಗಳನ್ನು ನಾಪತ್ತೆ ಮಾಡುವುದನ್ನು ನಮ್ಮ ಪೋಲೀಸ್ ವ್ಯವಸ್ಥೆಗೆ ಯಾರೂ ಹೇಳಿಕೊಡಬೇಕಾಗಿಲ್ಲ. ರಾತ್ರೋ ರಾತ್ರಿ ಟ್ರಕ್‌ಗಟ್ಟಲೇ ಸಕ್ಕರೆಯನ್ನು ಹಾಗೂ ಪೆಟ್ರೋಲ್‌ನ್ನು ತರಿಸಿ ಹೆಣಗಳನ್ನು ಸುಟ್ಟುಹಾಕಲು ಬಳಸಲಾಗಿದೆ ಎಂಬ ವರದಿಗಳಿವೆ. ಹೆಣಗಳ ಮೇಲೆ ಸಕ್ಕರೆ ಹಾಕಿ ಬೆಂಕಿ ಹಚ್ಚಿದರೆ ಮನುಷ್ಯನ ಎಲುಬುಗಳು ಸಹ ಸಂಪೂರ್ಣವಾಗಿ ಸುಟ್ಟು ಬೂದಿಯಾಗಿ ಯಾವ ಕುರುಹು ಸಹ ಉಳಿಯುವುದಿಲ್ಲವಂತೆ! ಇದೆಲ್ಲವನ್ನು ಮುಚ್ಚಿಡಬೇಕಾಗಿರುವುದರಿಂದಲೇ ಆ್ಯಂಟನಿಯವರು ನ್ಯಾಯಾಂಗ ತನಿಖೆಗೆ ಸಿದ್ಧರಿಲ್ಲ. ಪತ್ರಕರ್ತರ ಮೇಲೆ ಪೋಲೀಸರಿಂದ ಹಲ್ಲೆ, ಮಾಧ್ಯಮದವರಿಗೆ ಪ್ರವೇಶ ನಿರಾಕರಣೆ ಇತ್ಯಾದಿ ಕ್ರಮಗಳು ಆ್ಯಂಟನಿ ಸರ್ಕಾರ ಅಪರಾಧಿ ಎಂದು ಸಾರುತ್ತಿವೆ.

ಮುಂದುವರೆದ ಸಿಪಿಐ(ಎಂ) ಚಳುವಳಿ

ಆ್ಯಂಟನಿ ಸರ್ಕಾರದ ಕುಮ್ಮಕ್ಕು ಪಡೆದು ಆದಿವಾಸಿಗಳ ಒಂದು ಗುಂಪು ಚಳುವಳಿಯನ್ನು ದಾರಿ ತಪ್ಪಿಸಲು ಪ್ರಯತ್ನ ಪಡುತ್ತಿರುವಾಗಲೂ ಆದಿವಾಸಿಗಳ ಹೋರಾಟವನ್ನು ವ್ಯರ್ಥವಾಗಲು ಬಿಡಬಾರದೆಂದು ಸಿಪಿಐ(ಎಂ) ಕೇರಳ ರಾಜ್ಯ ಘಟಕ ನಿರ್ಧರಿಸಿದೆ. ಚಳುವಳಿಯಿಂದ ನಾವು ಹಿಂದೆ ಸರಿದರೆ ಅತ್ಯಂತ ಅಸಹಾಯಕ ಸ್ಥಿತಿಯಲ್ಲಿರುವ ಆದಿವಾಸಿಗಳು ಹತಾಶರಾಗಿ ವಿಚ್ಛಿದ್ರಕಾರಿ ಶಕ್ತಿಗಳ ಕೈಯಲ್ಲಿ ಬಲಿಪಶುಗಳಾಗುವ ಅಪಾಯವಿದೆ ಎಂದು ಸಿಪಿಐ(ಎಂ) ಅರ್ಥ ಮಾಡಿಕೊಂಡಿದೆ. ಇದೇ ಸಮಯದಲ್ಲಿ ಆದಿವಾಸಿಗಳ ಪ್ರಶ್ನೆಯನ್ನು ತನ್ನ ಕೋಮುವಾದಿ ಉದ್ದೇಶಕ್ಕೆ ಬಳಸಿಕೊಳ್ಳಲು ಬಿಜೆಪಿ ಪ್ರಯತ್ನಿಸತೊಡಗಿದೆ. ಕೇಂದ್ರದ ಆದಿವಾಸಿ ಖಾತೆಯ ಮಂತ್ರಿ ಜುಯೆಲ್ ಓರಾಮನನ್ನು ವಾಯನಾಡಿಗೆ ಕರೆತರುವ ನಾಟಕ ನಡೆಸಲಾದಗಿದೆ. ವಾಯನಾಡ್, ಅಟ್ಟಪಾಡಿ ಮತ್ತು ಇಡುಕ್ಕಿ ಜಿಲ್ಲೆಗಳ ಆದಿವಾಸಿ ಯುವಕರ ನಡುವೆ ಆರ್.ಎಸ್.ಎಸ್. ಶಾಖೆಗಳನ್ನು ಆರಂಭಿಸಲಾಗಿದೆ. 'ವನವಾಸಿ ಕಲ್ಯಾಣ ಆಶ್ರಮ' ಎಂಬ ಸಂಘಪರಿವಾರದ ಸಂಘಟನೆಯು ಹೆಸರಿನಲ್ಲಿ ಪೋಲೀಸ್ ಗೋಲಿಬಾರ್‌ನಲ್ಲಿ ಮಡಿದ ಜೋಗಿ ಎಂಬ ಆದಿವಾಸಿ ಯುವಕನ ಕುಟುಂಬಕ್ಕೆ ರೂ.5000 ನೆರವು ನೀಡುವ ಮೂಲಕ ಆದಿವಾಸಿಗಳ ಸಹಾನುಭೂತಿಯನ್ನು ಸಂಪಾದಿಸುವ ಪ್ರಯತ್ನ ನಡೆದಿದೆ. ಆ್ಯಂಟನಿ ಸರ್ಕಾರವು ಕ್ರಿಶ್ಚಿಯನ್ ಚರ್ಚಿನ ಪ್ರಭಾವಕ್ಕೊಳಗಾಗಿ ಆದಿವಾಸಿಗಳಿಗೆ ಅವರ ಭೂಮಿಯನ್ನು ಹಿಂತಿರುಗಿಸಲು ಸಿದ್ಧವಿಲ್ಲ ಎಂದು ಬಿಜೆಪಿ ಪ್ರಚಾರ ಮಾಡುತ್ತಿದೆ. ಇದರಿಂದಾಗಿ ಮತೀಯ ಧ್ರುವೀಕರಣ ತೀವ್ರಗೊಂಡು ಆದಿವಾಸಿಗಳ ನೈಜ ಪ್ರಶ್ನೆ ಇತ್ಯರ್ಥವಾಗದೆ ನೆನೆಗುದಿಗೆ ಬೀಳುವ ಅಪಾಯವಿದೆ. ಇದನ್ನು ಮನಗಂಡಿರುವ ಸಿಪಿಐ(ಎಂ) ಆದಿವಾಸಿಗಳ ಹೋರಾಟವನ್ನು ಅವರ ನೈಜ ಪ್ರಶ್ನೆಗಳ ಆಧಾರದಲ್ಲಿ ಮುನ್ನಡೆಸಲು ನಿರ್ಧರಿಸಿದೆ.



ಸರ್ಕಾರದ ನೀತಿ ಖಂಡಿಸಿ ಶಾಸಕರ ಪ್ರತಿಭಟನೆ ವಿರೋಧ ಪಕ್ಷದ ನಾಯಕ ಕಾಂ. ವಿ.ಎಸ್.ಅಚ್ಯುತಾನಂದನ್

ತನ್ನ ಗುಟ್ಟು ರಟ್ಟಾಗುವ ಭೀತಿಯಿಂದ ಮುಖ್ಯಮಂತ್ರಿ ಆ್ಯಂಟನಿ ನ್ಯಾಯಾಂಗ ತನಿಖೆಗೆ ಹಿಂದೇಟು ಹಾಕುತ್ತಿದ್ದಾರೆ. ಸರ್ಕಾರದ ಹಠಮಾರಿತನವನ್ನು ಪ್ರತಿಭಟಿಸಿ ಸಿಪಿಐ(ಎಂ) ಶಾಸಕರು ಅನಿರ್ದಿಷ್ಟ ಉಪವಾಸ ಸತ್ಯಾಗ್ರಹವನ್ನು ಆರಂಭಿಸಿದ್ದಾರೆ. ಎಸ್.ಸಿ. ಮತ್ತು ಎಸ್.ಟಿ. ಕಲ್ಯಾಣ ಇಲಾಖೆಯ ಮಾಜಿ ಮಂತ್ರಿಗಳೂ ಸಿಪಿಐ(ಎಂ) ಶಾಸಕರೂ ಆಗಿರುವ ಕಾಮ್ರೇಡ್ ಕೆ.ರಾಧಾಕೃಷ್ಣನ್ ಅವರು ಫೆಬ್ರವರಿ 25 ರಿಂದ 4 ದಿನ ಉಪವಾಸ ಸತ್ಯಾಗ್ರಹ ನಡೆಸಿದರು. ತದನಂತರ ಅವರ ಸ್ಥಾನದಲ್ಲಿ ಉಪವಾಸವನ್ನು ಮುಂದುವರೆಸಿದ ಇನ್ನೊಬ್ಬ ಸಿಪಿಐ(ಎಂ) ಶಾಸಕ ಕಾಮ್ರೇಡ್ ಥಾಮಸ್ ಐಸಾಕ್ ಅವರನ್ನು 9 ದಿನಗಳ ಉಪವಾಸದ ನಂತರ ಆಸ್ಪತ್ರೆಗೆ ದಾಖಲು ಮಾಡಲಾಯಿತು. ಅವರ ಬದಲಿಗೆ ಶಾಸಕರಾದ ಸಿಪಿಐ(ಎಂ) ನ ಪಿ.ಕೆ.ಶ್ರೀಮತಿ, ಸಿಪಿಐ ನ ಕೆ.ಪಿ.ರಾಜೇಂದ್ರನ್, ಜನತಾದಳದ ನೀಲಲೋಹಿತದಾಸನ್ ನಾಡರ್ ಮತ್ತು ಆರ್.ಎಸ್.ಪಿ.ಯ ಕೋವೂರ್ ಕುಂಜುಮೋನ್ ಉಪವಾಸ ಸತ್ಯಾಗ್ರಹವನ್ನು ಮುಂದುವರೆಸಿದ್ದಾರೆ.

ಮಾರ್ಚ್ 3 ಮತ್ತು 4 ರಂದು ನವದೆಹಲಿಯಲ್ಲಿ ನಡೆದ ಸಿಪಿಐ(ಎಂ) ಕೇಂದ್ರ ಸಮಿತಿ ಸಭೆಯು ಕೇರಳದ ವಾಯನಾಡ್ ಜಿಲ್ಲೆಯಲ್ಲಿ ಆದಿವಾಸಿಗಳ ಮೇಲೆ ನಡೆದ ಪೋಲೀಸ್ ದೌರ್ಜನ್ಯ ಪ್ರಕರಣವನ್ನು ಖಂಡಿಸಿದ್ದು ನ್ಯಾಯಾಂಗ ತನಿಖೆಗೆ ಒತ್ತಾಯಿಸಿದೆ. ಮಾರ್ಚ್ 6 ರಂದು ಮುಖ್ಯಮಂತ್ರಿ ಆ್ಯಂಟನಿ ಜಾಗತಿಕ ಬಂಡವಾಳಗಾರರ ಸಮಾವೇಶದ ಪ್ರಸ್ತಾಪಗಳ ಬಗ್ಗೆ ಚರ್ಚಿಸಲು ಕರೆದಿದ್ದ ಸರ್ವಪಕ್ಷಗಳ ಸಭೆಯನ್ನು ಸಿಪಿಐ(ಎಂ) ನೇತೃತ್ವದ ಎಲ್.ಡಿ.ಎಫ್ ಬಹಿಷ್ಕರಿಸಿದೆ. ನ್ಯಾಯಾಂಗ ತನಿಖೆಗೆ ಆಗ್ರಹಿಸಿ ಮಾರ್ಚ್ 11 ರಂದು ರಾಜ್ಯಾದ್ಯಂತ ಹರತಾಳ ನಡೆಸಲು ಎಲ್.ಡಿ.ಎಫ್ ನೀಡಿದ ಕರೆಗೆ ವ್ಯಾಪಕ ಬೆಂಬಲ ವ್ಯಕ್ತವಾಗಿದೆ.

ಅಮಾನುಷ ದಮನ: ಸರ್ಕಾರದ ಹಠಮಾರಿತನ ಮುಂದುವರೆಯುತ್ತಿದ್ದಂತೆ ಎಲ್‌ಡಿಎಫ್ ಚಳುವಳಿಯನ್ನು ತೀವ್ರಗೊಳಿಸಲು ನಿರ್ಧರಿಸಿದೆ. 'ಎಸ್.ಪಿ. ಆಫೀಸ್ ಚಲೋ' ಚಳುವಳಿಗೆ ಕರೆ ನೀಡಲಾಯಿತು. ರಾಜಧಾನಿ ತಿರುವನಂತಪುರದಲ್ಲಿ ಡಿಜಿಪಿ ಆಫೀಸ್ ಎದುರು ಪ್ರದರ್ಶನ ನಡೆಸಲಾಯಿತು. ಸರ್ಕಾರದ ಕುಮ್ಮಕ್ಕಿನಿಂದ ಪೋಲೀಸರು ಚಳುವಳಿಯನ್ನು ನಿರ್ದಯವಾಗಿ ದಮನ ಮಾಡಲೆತ್ನಿಸಿದರು. ಹಲವು ಕಡೆ ಲಾಠಿ ಪ್ರಹಾರಕ್ಕೆ ತೃಪ್ತರಾಗದೆ ಗೋಲಿಬಾರ್ ಸಹ ನಡೆಸಲಾಯಿತು. ಸಿಪಿಐ(ಎಂ) ಸಂಸತ್ ಸದಸ್ಯರೂ ಸೇರಿದಂತೆ ನೂರಾರು ಕಾರ್ಯಕರ್ತರು ತೀವ್ರವಾಗಿ ಗಾಯಗೊಂಡು ಅವರನ್ನು ವಿವಿಧ ಆಸ್ಪತ್ರೆಗಳಲ್ಲಿ ದಾಖಲು ಮಾಡಬೇಕಾಯಿತು. ಪೋಲೀಸ್ ಅತಿರೇಕದ ಸುದ್ದಿ ಹರಡುತ್ತಲೇ ರಾಜ್ಯಾದ್ಯಂತ ಅದೇ ದಿನ ಸಂಜೆ ಎಲ್ಲಾ ತಾಲ್ಲೂಕು ಕೇಂದ್ರಗಳಲ್ಲಿ ಸಿಪಿಐ(ಎಂ) ಕಾರ್ಯಕರ್ತರು ಬೀದಿಗಿಳಿದು ಪ್ರತಿಭಟಿಸಿದರು. ಚಂಗನಕೇರಿ ಎಂಬಲ್ಲಿ ಸಿಪಿಐ(ಎಂ) ಆಫೀಸಿಗೆ ನುಗ್ಗಿದ ಪೋಲೀಸರು ಪ್ರತಿಭಟನೆಯಲ್ಲಿ ಪಾಲ್ಗೊಂಡು ವಿಶ್ರಾಂತಿ ಪಡೆಯುತ್ತಿದ್ದ ಪಕ್ಷದ ಕಾರ್ಯಕರ್ತರನ್ನು ಮನಬಂದಂತೆ ಥಳಿಸಿದ್ದಲ್ಲದೇ ಆಫೀಸಿನಲ್ಲಿದ್ದ ಪೀಠೋಪಕರಣಗಳನ್ನು ನಾಶ ಮಾಡಿದರು.

ಚಳುವಳಿಯನ್ನು ದಮನ ಮಾಡಲು ಕೇರಳದ ಕಾಂಗ್ರೆಸ್ ಸರ್ಕಾರ ಪೋಲೀಸರನ್ನು ಬಳಸಿ ದೌರ್ಜನ್ಯವೆಸಗಿರುವುದನ್ನು ಪ್ರತಿಭಟಿಸಿ ನವದೆಹಲಿಯಲ್ಲಿ ಕೇರಳ ಭವನದ ಎದುರು ಬೃಹತ್ ಪ್ರತಿಭಟನೆ ನಡೆಯಿತು. ಎಸ್‌ಎಫ್‌ಐ ಮತ್ತು ಡಿವೈಎಫ್‌ಐ ಸಂಘಟನೆಗಳ ನೇತೃತ್ವದಲ್ಲಿ ನಡೆದ ಈ ಪ್ರತಿಭಟನೆಯಲ್ಲಿ ಭಂಡ ಮುಖ್ಯಮಂತ್ರಿ ಆಂಟನಿ ಪ್ರತಿಕೃತಿಯನ್ನು ದಹನ ಮಾಡಲಾಯಿತಲ್ಲದೆ ಮಾರ್ಚ್ 21 ರಂದು ದೇಶಾದ್ಯಂತ ಪ್ರತಿಭಟನೆ ನಡೆಸಲು ಈ ಎರಡೂ ಸಂಘಟನೆಗಳು ತಮ್ಮ ಘಟಕಗಳಿಗೆ ಕರೆ ನೀಡಿವೆ.

ಪೋಲೀಸ್ ದೌರ್ಜನ್ಯವನ್ನು ಪ್ರತಿಭಟಿಸಿ ಎಲ್‌ಡಿಎಫ್ ಮಾರ್ಚ್ 18 ರಂದು 12 ತಾಸುಗಳ ಹರತಾಳಕ್ಕೆ ನೀಡಿದ ಕರೆ ರಾಜ್ಯಾದ್ಯಂತ ಯಶಸ್ವಿಯಾಗಿದೆ. ಅಂದೂ ಪೋಲೀಸರು ಅನೇಕ ಕಡೆ ನಡೆಸಿದ ಹಿಂಸಾಚಾರದಲ್ಲಿ ಮಾಧ್ಯಮದ ಪ್ರತಿನಿಧಿಗಳೂ ಸೇರಿದಂತೆ ಅನೇಕ ಪಕ್ಷದ ಕಾರ್ಯಕರ್ತರು ಗಾಯಗೊಂಡರು. ಅವ್ಯಾಹತವಾಗಿ ಮುಂದುವರೆದಿರುವ ಪೋಲೀಸ್ ದೌರ್ಜನ್ಯವನ್ನು ಸಿಪಿಐ(ಎಂ) ಪೊಲಿಟ್‌ಬ್ಯೂರೋ ಬಲವಾಗಿ ಖಂಡಿಸಿದೆ. ಲೋಕಸಭೆಯಲ್ಲಿ ಸಿಪಿಐ(ಎಂ) ಉಪನಾಯಕರಾದ ಕಾಮ್ರೇಡ್ ವಾಸುದೇವ ಆಚಾರ್ಯ ಅವರ ನೇತೃತ್ವದಲ್ಲಿ ಎಡಪಕ್ಷಗಳ ಸಂಸತ್ ಸದಸ್ಯರ ತಂಡವೊಂದು ಕೇರಳಕ್ಕೆ ಧಾವಿಸಿದೆ. ಈ ತಂಡವು ಆದಿವಾಸಿಗಳ ಮೇಲೆ ಹಾಗೂ ಚಳುವಳಿಗಾರರ ಮೇಲೆ ಪೋಲೀಸರು ನಡೆಸಿರುವ ದೌರ್ಜನ್ಯದ ವಿವರಗಳನ್ನು ಸಂಗ್ರಹಿಸಲಿದ್ದಾರೆ.

ಈ ನಡುವೆ ರಾಷ್ಟ್ರೀಯ ಮಾನವ ಹಕ್ಕುಗಳ ಆಯೋಗವು ಮುತ್ತಂಗ ಘಟನೆಗಳ ಕುರಿತಾದ ರಾಜ್ಯ ಸರ್ಕಾರದ ವರದಿಯನ್ನು ಸಾರಸಗಟಾಗಿ ತಿರಸ್ಕರಿಸಿದೆಯಲ್ಲದೆ ಸಿಬಿಐ ಅಂತಹ ರಾಜ್ಯ ಸರ್ಕಾರದಿಂದ ಸ್ವತಂತ್ರವಾದ ಸಂಸ್ಥೆಯ ಮೂಲಕ ತನಿಖೆ ನಡೆಸಿದರೆ ಮಾತ್ರ ನಿಜಾಂಶಗಳು ಬಯಲಿಗೆ ಬರಬಹುದು ಎಂದು ಅಭಿಪ್ರಾಯ ಪಟ್ಟಿದೆ. ಇತ್ತ ರಾಜ್ಯದ ಜನತೆ ಅಪರಾಧಿ ಆಂಟನಿಗೆ ತಕ್ಕ ಪಾಠ ಕಲಿಸಲು ಸಜ್ಜಾಗುತ್ತಿದ್ದಾರೆ. ❍

ಇರಾಕ್ ಮೇಲೆ ಯುದ್ಧ ಆರಂಭ...

ಪುಟ 7 ರಿಂದ

ಯೋಜನೆ ಕಾರ್ಯಗತ ಮಾಡುವ ಬುಶ್-ಬ್ಲೇರ್ ಗ್ಯಾಂಗ್‌ನ ಹುನ್ನಾರವನ್ನು ಸಫಲವಾಗಲು ಬಿಡುವುದಿಲ್ಲ ಎಂಬ ಭರವಸೆ ಮೂಡಿಸಿದೆ.

ಜಗತ್ತಿನಾದ್ಯಂತ ಅಮೆರಿಕದ ರಾಯಭಾರ ಕಚೇರಿಗೆ ಲಗ್ಗೆ

ಅಮೆರಿಕ-ಬ್ರಿಟನ್ ದುಷ್ಟಕೂಟ ಇರಾಕ್ ಮೇಲೆ ಯುದ್ಧದ ಘೋಷಣೆ ಮಾಡುತ್ತಲೇ ಕಳೆದ ಕೆಲವು ತಿಂಗಳುಗಳಲ್ಲಿ ಪ್ರದರ್ಶಿತವಾಗಿದ್ದ ಜನತಾ ಶಕ್ತಿಯ ವಿರಾಟ್ ದರ್ಶನ ಪುನಃ ಆಗಿದೆ. ಜಗತ್ತಿನಾದ್ಯಂತ ಅಮೆರಿಕನ್ ರಾಯಭಾರ ಕಛೇರಿಯ ಮುಂದೆ ಭಾರಿ ಪ್ರದರ್ಶನಗಳು ನಡೆದಿವೆ. ಸಿಡ್ನಿಯಿಂದ ಕೈರೋದ ವರೆಗೆ, ಹಾಂಗ್‌ಕಾಂಗ್‌ನಿಂದ ಲಂಡನ್‌ವರೆಗೆ ಎಲ್ಲಾ ಕಡೆ ಬುಶ್ ಪ್ರತಿಕೃತಿ, ಅಮೆರಿಕದ ಧ್ವಜ ರೋಷಕ್ಕೆ ಆಹುತಿಯಾದವು. ಹಲವು ಕಡೆ ನಗರದ ಮಧ್ಯ ಪ್ರದೇಶದಲ್ಲಿ ಜನಜೀವನ ನಿಂತು ಹೋಗುವಷ್ಟು ರೀತಿಯಲ್ಲಿ ಭಾರಿ ಪ್ರದರ್ಶನಗಳು ನಡೆದವು. ಗ್ರೀಸ್‌ನ ಅಥೆನ್ಸ್‌ನಲ್ಲಿ ನಡೆದ ಒಂದೂವರೆ ಲಕ್ಷ ಜನ ಭಾಗವಹಿಸಿದ ಪ್ರದರ್ಶನವೇ ಯುದ್ಧದ ನಂತರ ನಡೆದ ಪ್ರದರ್ಶನಗಳಲ್ಲಿ ದೊಡ್ಡದು. ಬರ್ಲಿನ್‌ನಲ್ಲಿ 50 ಸಾವಿರ ವಿದ್ಯಾರ್ಥಿಗಳು, ನಾಗರೀಕರು ಅಮೆರಿಕನ್ ರಾಯಭಾರಿ ಕಛೇರಿಗೆ ಲಗ್ಗೆ ಹಾಕಿದರು. ಫ್ರಾನ್ಸ್‌ನಲ್ಲಿ 40 ಸಾವಿರಕ್ಕೂ ಹೆಚ್ಚು ಜನ ವಿರೋಧಿಸಿದರು. ಎಲ್ಲಾ ಕಡೆ ಅಮೆರಿಕನ್ ರಾಯಭಾರಿ ಕಚೇರಿಯನ್ನು ರಕ್ಷಿಸುವುದೇ ಸರ್ಕಾರಗಳಿಗೆ ಭಾರಿ ತಲೆನೋವು ಆಯಿತು.

ಯೆಮೆನ್ ಮತ್ತು ಕೈರೋದಲ್ಲಿ ಭಾರಿ ಪ್ರದರ್ಶನಗಳು ನಡೆದವು. ಪಾಕಿಸ್ತಾನ, ಭಾರತ, ಬಾಂಗ್ಲಾದೇಶ, ಇಂಡೋನೇಶ್ಯಾ, ಜಪಾನ್, ಕೊರಿಯಾ, ಆಸ್ಟ್ರೇಲಿಯಾ, ಫಿಲಿಫೈನ್ಸ್‌ಗಳಲ್ಲಿ ಯುದ್ಧ ಆರಂಭವಾದ ದಿನ ಪ್ರತಿಭಟನಾ ಪ್ರದರ್ಶನ ಗಳು ನಡೆದವು. ಅಮೆರಿಕ ವಾಶಿಂಗ್ಟನ್‌ನಲ್ಲಿ ಶ್ವೇತಭವನಕ್ಕೆ ಮುತ್ತಿಗೆ ಹಾಕಲಾಯಿತು. ಪೋಲೀಸರು ಭಾರಿ ಬಲ ಪ್ರಯೋಗ ಮಾಡಿದರೂ ಅದನ್ನು ತಡೆಯಲಾಗಲಿಲ್ಲ. ಅಮೆರಿಕದ ನಗರಗಳಲ್ಲೆಲ್ಲಾ ಕೇಂದ್ರ ಪ್ರದೇಶದಲ್ಲಿ ಭಾರಿ ಪ್ರತಿಭಟನೆಗಳು ನಡೆದವು. ಸಾನ್‌ಫ್ರಾನ್ಸಿಸ್ಕೋದಲ್ಲಿ ಪ್ರಸಿದ್ಧ ಸೇತುವೆಯಲ್ಲಿ 'ರಸ್ತೆ ತಡೆ' ಮೇಲೆ ಪೋಲೀಸರು ಕಾರ್ಯಾಚರಣೆ ಅತ್ಯಂತ ದೊಡ್ಡ ಘಟನೆಯಾಯಿತು. ಸಾನ್‌ಫ್ರಾನ್ಸಿಸ್ಕೋ ಪೋಲೀಸರು1300 ಕ್ಕೂ ಹೆಚ್ಚು ಯುದ್ಧ-ವಿರೋಧಿ ಜನರನ್ನು ಕ್ರೂರ ರೀತಿಯಲ್ಲಿ ಬಡಿದು ಬಂಧಿಸಿದರು. ಒಂದೇ ದಿನ ಮಾಡಿದ ಬಂಧನಗಳಲ್ಲಿ 22 ವರ್ಷಗಳಲ್ಲಿ ಇದು ಅತಿದೊಡ್ಡದು ಎಂದು ಹೇಳಲಾಗಿದೆ. ಆದರೂ ಯುದ್ಧ-ವಿರೋಧಿ ಪ್ರದರ್ಶನವನ್ನು ಚದುರಿಸಲು ವಿಫಲರಾದ ಪೋಲೀಸರು 'ಯುದ್ಧ-ಪರ' ಗೂಂಡಾಗಳನ್ನು ತಂದು ಪ್ರದರ್ಶನಕಾರರ ಮೇಲೆ ಧಾಳಿ 'ಸಂಘಟಿಸಿದರು' ಎಂಬ ತೀವ್ರ ಆಪಾದನೆಗೆ ಒಳಗಾಗಿದ್ದಾರೆ. ಯುದ್ಧ ಮುಂದುವರೆದಂತೆ ಈ ಚಳುವಳಿ ತೀವ್ರ ಸ್ವರೂಪ ತಳೆಯಬಹುದು. ವಿಯೆಟ್ನಾಂ - ಯುದ್ಧ ವಿರೋಧಿ ಚಳುವಳಿಯಂತೆ ಇದೂ ಚಾರಿತ್ರಿಕ ಚಳುವಳಿ ಯಾಗುವ ಎಲ್ಲಾ ಲಕ್ಷಣಗಳೂ ಕಂಡುಬಂದಿವೆ.



ಮಾರ್ಚ್ 22 ರಂದು ಬೆಂಗಳೂರಿನಲ್ಲಿ ಯುದ್ಧ ವಿರೋಧಿಸಿ ಸಿಪಿಐ-ಸಿಪಿಐ(ಎಂ) ಪ್ರತಿಭಟನೆ

.... ಐವತ್ತು ಯಕ್ಷ ಪ್ರಶ್ನೆಗಳು

ಪುಟ 7 ರಿಂದ

ಏಕಮಾತ್ರ ದೇಶ ಯಾವುದು.

ಉ. ಅಮೆರಿಕಾ- ಹಿರೋಶಿಮಾ, ನಾಗಸಾಕಿಗಳಲ್ಲಿ.

45. ಇಸ್ರೇಲ್ ಬಳಿ ಕನಿಷ್ಟ ಅಣ್ವಸ್ತ್ರಗಳಿವೆ?

ಉ. 400 ಕ್ಕೂ ಹೆಚ್ಚು.

46. "ನಾವು ಮಹತ್ವದ ವಿಷಯಗಳ ಬಗ್ಗೆ ಯಾವಾಗ ಸುಮ್ಮನಿರಲು ಆರಂಭಿಸುತ್ತೇವೋ ಅಂದೇ ನಮ್ಮ ಜೀವನವೂ ಕೊನೆಗೊಳ್ಳಲು ಆರಂಭವಾಗುತ್ತವೆ" ಎಂದು ಯಾರು ಹೇಳಿದರು?

ಉ. ಡಾ। ಮಾರ್ಟಿನ್ ಲೂಥರ್‌ಕಿಂಗ್ ಜೂನಿಯರ್.

47. ಯಾವ ಅಭಿವೃದ್ಧಿ ದೇಶ ಅತ್ಯಂತ ಕಡಿಮೆ ಮಿಲಿಟರಿಯೇತರ ಚಳುವಳಿಗೆ ಸಹಾಯ ನೀಡುವುದು (ತಲಾ ಜನಸಂಖ್ಯೆಯ ಪ್ರಮಾಣದಲ್ಲಿ)?

ಉ. ಅಮೇರಿಕ.

48. ಸೆಪ್ಟೆಂಬರ್ 11ರ ಭಯೋತ್ಪಾದಕ ಕೃತ್ಯದಲ್ಲಿ ಭಾಗವಹಿಸಿದವರಲ್ಲಿ ಎಷ್ಟು ಜನ ಇರಾಕಿಗಳು ಇದ್ದರು?

ಉ. ಸೊನ್ನೆ.

49 ಯಾವುದಾದರೂ ದೇಶದಿಂದ ಆಕ್ರಮಣಕ್ಕೆ ಒಳಗಾಗದೆ ಅಥವಾ ವಿಶ್ವಸಂಸ್ಥೆ ಭದ್ರತಾ ಸಮಿತಿಯ ನಿರ್ಣಯ ಇಲ್ಲದೆ ಯುದ್ಧ ಸಾರುವುದು ಅಂತರ್ರಾಷ್ಟ್ರೀಯ ಕಾನೂನುಗಳ ಉಲ್ಲಂಘನೆ ಆಗುತ್ತದೆಯಾ?

ಉ. ಹೌದು.

50. ಇಂತಹ ಯುದ್ಧಗಳಲ್ಲಿ ನಾಗರಿಕರನ್ನು ಕೊಂದ ಅಪರಾಧದ ಮೇಲೆ ಅಂತರ್ರಾಷ್ಟ್ರೀಯ ಕೋರ್ಟಿನಲ್ಲಿ ಮೊಕದ್ದಮೆ ಹೂಡಿ ಶಿಕ್ಷೆಗೆ ಒಳಪಡಿಸಬಹುದೇ?

ಉ. ಹೌದು.

......ಬೀಡಿ ಕಾರ್ಮಿಕರ ದ.ಕ. ಜಿಲ್ಲಾ ಸಮ್ಮೇಳನ

ಪುಟ 5 ರಿಂದ

ಕಾಪಾಡಬೇಕೆಂದು ಅವರು ಕರೆ ನೀಡಿದರು.

ಸಿಪಿಐ(ಎಂ) ಕರ್ನಾಟಕ ರಾಜ್ಯ ಕಾರ್ಯದರ್ಶಿ ಜಿ.ಎನ್. ನಾಗರಾಜ್ ಮಾತನಾಡುತ್ತಾ, ಕೋಮುವಾದಿಗಳು ಕೋಮುಗಲಭೆ ಎಬ್ಬಿಸಿ, ಸರಕಾರದ ಜನವಿರೋಧಿ ನೀತಿಗಳಿಂದ ಜನರ ಗಮನವನ್ನು ಬೇರೆಡೆಗೆ ಸೆಳೆಯುತ್ತಾರೆ. ಅದೇ ರೀತಿಯಲ್ಲಿ ನಾಗರಿಕ ಸೇವಾಟ್ರಸ್ಟ್ ನಂತಹ ವಿದೇಶಿ ನೆರವಿನ ಸ್ವಯಂಸೇವಾ ಸಂಸ್ಥೆಗಳು ಕಾರ್ಮಿಕರ ಐಕ್ಯತೆಯನ್ನು ಒಡೆಯಲು ಪ್ರಯತ್ನಿಸುತ್ತಿವೆ ಎಂದು ಎಚ್ಚರಿಸಿದರು.

ಎಸ್. ವರಲಕ್ಷ್ಮಿಯವರು ಮಾತನಾಡುತ್ತಾ, ಬೀಡಿ ಕಾರ್ಮಿಕರು ಬೀಡಿ ಕಟ್ಟಿ ಬ್ರಾಂಚಿಗೆ ತಂದಾಗ ಅದರಲ್ಲಿ ಒಂದಷ್ಟು ಬೀಡಿ ಸರಿಯಿಲ್ಲವೆಂದು ಕಂಟ್ರಾಕ್ಟ್‌ದಾರರು ತಿರಸ್ಕರಿಸಿ, ಕಾರ್ಮಿಕರಿಂದ ದಂಡವಸೂಲು ಮಾಡುತ್ತಾರೆ. ಆದರೆ ತಿರಸ್ಕರಿಸಿದ ಬೀಡಿಯನ್ನು ಕಾರ್ಮಿಕರಿಗೆ ವಾಪಾಸು ಕೊಡುವ ಬದಲು ಸವಲತ್ತುಗಳನ್ನು ಕಬಳಿಸುತ್ತಾರೆ ಎಂದು ಹೇಳಿದರು. ಕಾರ್ಮಿಕರ ಐಕ್ಯತೆಯನ್ನು ಜಾತಿ ಮತಗಳ ಹೆಸರಿನಲ್ಲಿ ಒಡೆಯಲು ಪ್ರಯತ್ನಿಸುವ ಶಕ್ತಿಗಳ ವಿರುದ್ಧ ಜಾಗ್ರತರಾಗಿ ಸಂಘಟಿತ ಹೋರಾಟಗಳನ್ನು ಬಲಪಡಿಸಲು ಅವರು ಕರೆ ನೀಡಿದರು.

ಕೆ. ಆರ್. ಶ್ರೀಯಾನ್ ಅವರು ಅಧ್ಯಕ್ಷೀಯ ಭಾಷಣ ಮಾಡುತ್ತಾ, ಬೀಡಿ ಕಾರ್ಮಿಕರು ಇಂದು ಅನುಭವಿಸುತ್ತಿರುವ ಪ್ರತಿಯೊಂದು ಸವಲತ್ತಿನ ಹಿಂದೆ ಎಡಪಕ್ಷಗಳ ನೇತೃತ್ವದ ಸಂಘಟನೆಗಳ ಹೋರಾಟಗಳ ಮತ್ತು ತ್ಯಾಗ ಬಲಿದಾನಗಳ ಚರಿತ್ರೆ ಇದೆ. ಇದೀಗ ಕಾರ್ಮಿಕರ ಹಿತರಕ್ಷಣೆಯ ಸೋಗು ಹಾಕಿಕೊಂಡು ಕಾರ್ಮಿಕರ ಐಕ್ಯತೆಯನ್ನು ಒಡೆಯಲು ಪ್ರಯತ್ನಿಸುತ್ತಿರುವ ವಿದೇಶಿ ಏಜೆಂಟರ ಕುರಿತು ಕಾರ್ಮಿಕರು ಜಾಗೃತರಾಗಿರಬೇಕು ಎಂದು ಅವರು ಎಚ್ಚರಿಸಿದರು.

ರಾಜ್ಯ ಸಿಐಟಿಯು ಅಧ್ಯಕ್ಷರಾದ ಬಿ. ಮಾಧವ ಅವರು ಫೆಡರೇಶನಿನ ನೂತನ ಪದಾಧಿಕಾರಿಗಳನ್ನು ಸಭೆಗೆ ಪರಿಚಯಿಸಿದರು. ಸಿಐಟಿಯು ಜಿಲ್ಲಾ ಕಾರ್ಯದರ್ಶಿ ವಸಂತ ಆಚಾರಿ, ಸ್ವಾಗತ ಸಮಿತಿಯ ಅಧ್ಯಕ್ಷ ಕಾ. ಬಿ. ವಾಸುಗಟ್ಟಿ, ಜಿಲ್ಲಾ ರೈತ ಸಂಘದ ಮುಖಂಡರಾದ ಅಬ್ರಹಾಂ ಕರ್ಡ್ ಮತ್ತು ರಾಮಚಂದ್ರ ಉಚ್ಚಿಲ್ ಉಪಸ್ಥಿತರಿದ್ದರು.

ಆರಂಭದಲ್ಲಿ ಜೆ. ಬಾಲಕೃಷ್ಣ ಶೆಟ್ಟಿ ಸ್ವಾಗತಿಸಿದರು. ಸಮ್ಮೇಳನದ ನಿರ್ಣಯಗಳನ್ನು ಸಭೆಗೆ ವಿವರಿಸಿದ ನೂತನ ಕಾರ್ಯದರ್ಶಿ ಸುಕುಮಾರ್ ಕೊನೆಯಲ್ಲಿ ನಂದಿಸಿದರು. ಸುನಿಲ್ ಕುಮಾರ್ ಬಜಾಲ್ ಕಾರ್ಯಕ್ರಮವು ನಿರ್ವಹಿಸಿದರು.

'ಬೀಡಿ ಉದ್ಯಮ ಬಿಕ್ಕಟ್ಟು - ಉದ್ಯೋಗ ಕಡಿತಕ್ಕೆ ಕಳವಳ'

ವಿಚಾರ ಸಂಕಿರಣ

ಜಿಲ್ಲಾ ಸಮ್ಮೇಳನ ಅಂಗವಾಗಿ ಮಾರ್ಚ್ 11 ರಂದು ಸಂಜೆ ಸಮ್ಮೇಳನದ ಸಭಾಂಗಣದಲ್ಲಿ "ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಬೀಡಿ ಉದ್ಯಮ ಎದುರಿಸುತ್ತಿರುವ ಸಮಸ್ಯೆಗಳು ಹಾಗೂ ಪರಿಹಾರ" ಎಂಬ ವಿಷಯದ ಕುರಿತು ವಿಚಾರ ಸಂಕಿರಣ ನಡೆಯಿತು. ಬಿ. ಮಾಧವ ಅವರು ಅಧ್ಯಕ್ಷತೆ ವಹಿಸಿದ್ದರು.

ವಿ.ಜೆ.ಕೆ. ನಾಯರ್ ಅವರು ವಿಚಾರ ಮಂಡನೆ ಮಾಡುತ್ತಾ, ದೇಶದ ತಂಬಾಕು ಉತ್ಪಾದನೆಯ ಶೇಕಡಾ 56 ಪಾಲು ಬೀಡಿ ಉದ್ಯಮಕ್ಕೆ ಉಪಯೋಗವಾಗುತ್ತಿದ್ದರೂ, ಬೀಡಿ ಕಾರ್ಮಿಕರಿಗೆ ಕೆಲಸ ಕಡಿತವಾಗುತ್ತಿರುವುದು ವಿಪರ್ಯಾಸ ಎಂದರು. ಬೀಡಿಯ ಒಟ್ಟು ಉತ್ಪಾದನೆ ಮತ್ತು ಮಾರಾಟ ಕಡಿಮೆಯಾಗಿಲ್ಲ. ಕೈಗಾರಿಕೆಯಲ್ಲಿನ ಅವ್ಯವಸ್ಥೆಯೇ ಬಿಕ್ಕಟ್ಟಿಗೆ ಕಾರಣ ಎಂದು ಅವರು ವಿವರಿಸಿದರು.

ಎಐಟಿಯುಸಿಯ ಜಿಲ್ಲಾ ಕಾರ್ಯದರ್ಶಿ ಎಸ್. ಚಂದಪ್ಪ ಅಂಚನ್ ಲಕ್ಷಾಂತರ ಬೀಡಿ ಕಾರ್ಮಿಕರು ಕೆಲಸ ಇಲ್ಲದೆ ಬೀದಿಪಾಲಾಗುತ್ತಿದ್ದರೂ, ನಮ್ಮ ಜನಪ್ರತಿನಿಧಿಗಳಿಗೆ ಎಚ್ಚರವಾಗಿಲ್ಲ ಎಂದರು. ಐಕ್ಯ ಹೋರಾಟಗಳನ್ನು ಬೆಳೆಸಬೇಕಾದ ಆವಶ್ಯಕತೆಯನ್ನು ಅವರು ಒತ್ತಿ ಹೇಳಿದರು.

ದ.ಕ. ಜಿಲ್ಲಾ ಬೀಡಿ ಕಂಟ್ರಾಕ್ಟುದಾರರ ಸಂಘದ ಅಧ್ಯಕ್ಷರಾದ ಶಂಭೂ ನೈಕ್ ಮತ್ತು ಕಾರ್ಯದರ್ಶಿ ಜಿ. ಇಬ್ರಾಹಿಂ ಅವರು ಬಿಡಿ ಕೈಗಾರಿಕೆಯ ಸಮಸ್ಯೆಗಳನ್ನು ವಿರಿಸಿದರು. ಅನೇಕ ಪ್ರತಿನಿಧಿಗಳೂ ತಮ್ಮ ಅಭಿಪ್ರಾಯಗಳನ್ನು ಮಂಡಿಸಿದರು.

ಅಧ್ಯಕ್ಷ ಸ್ಥಾನದಿಂದ ವಿಚಾರ ಸಂಕಿರಣದ ಸಮಾರೋಪ ಭಾಷಣ ಮಾಡಿದ ಬಿ. ಮಾಧವ ಅವರು ಬೀಡಿ ಉದ್ಯಮದ ರೋಗವನ್ನು ಸರಿಯಾಗಿ ವಿಶ್ಲೇಷಿಸುವುದರಲ್ಲಿ ಈ ಸಂಕಿರಣ ಯಶಸ್ವಿಯಾಗಿದೆ ಎದು ಹೇಳಿದರು. ಕಳ್ಳ ಬೀಡಿಯ ಹಾವಳಿ ಯನ್ನು ನಿರ್ಮೂಲ ಮಾಡಲು ಈಗ ಬೀಡಿಯ ಮೇಲೆ ಹೇರಲಾಗಿರುವ ಕೇಂದ್ರ ಅಬಕಾರಿ ಸುಂಕ ಮತ್ತು ವೆಲ್‌ಫೇರ್ ಸೆಸ್ಸನ್ನು 1979ಕ್ಕೆ ಮೊದಲು ಇದ್ದಂತೆ ಹೊಗೆಸೊಪ್ಪಿನ ಮೇಲೆ ಹಾಕಬೇಕು. ಕಡಿಮೆ ಕೂಲಿ ಇರುವಲ್ಲಿಗೆ ಬೀಡಿ ಕೈಗಾರಿಕೆ ವಲಸೆ ಹೋಗುವುದನ್ನು ತಪ್ಪಿಸಲು ರಾಷ್ಟ್ರೀಯ ಮಟ್ಟದಲ್ಲಿ ಸಮಾನ ಕನಿಷ್ಠ ಕೂಲಿ ಪ್ರಕಟಿಸಿ ಜಾರಿ ಮಾಡಬೇಕು, ವಾರದಲ್ಲಿ ಆರು ದಿನಗಳ ಕೆಲಸ ಕೊಡುವಂತೆ ಮತ್ತು ಕೆಲಸ ಕೊಡದ ದಿನಗಳಿಗೆ ಪರಿಹಾರ ನೀಡುವಂತೆ ಮಾಲಕರನ್ನು ಒತ್ತಾಯಿಸಬೇಕು, ಸಾರ್ವಜನಿಕ ಸ್ಥಳಗಳಲ್ಲಿ ಧೂಮಪಾನ ನಿಷೇಧಿಸುವ ಕಾನೂನು ಸದ್ಯದ ಪರಿಸ್ಥಿತಿಯಲ್ಲಿ ಬೀಡಿ ಕಾರ್ಮಿಕರ ಹಿತಕ್ಕೆ ಹಾನಿಕಾರಕವಾದುದರಿಂದ ಅದನ್ನು ಹಿಂತೆಗೆದುಕೊಳ್ಳುವಂತೆ ಕೇಂದ್ರ ಮತ್ತು ರಾಜ್ಯ ಸರಕಾರಗಳನ್ನು ಒತ್ತಾಯಿಸಬೇಕು ಎಂಬ ಅಂಶಗಳ ಕುರಿತು ವಿಚಾರ ಸಂಕಿರಣದಲ್ಲಿ ಸಮಾನ ಅಭಿಪ್ರಾಯ ಮೂಡಿ ಬಂದಿದೆ ಎಂದು ಅವರು ಹೇಳಿದರು.

ಮತಾಂಧತೆಯ ರೋಗಕ್ಕೊಂದು ಸತ್ಸಂಗದ ಚಿಕಿತ್ಸೆ

ಮತಾಂಧತೆ ಅಟ್ಟಹಾಸಗೈದು ಮಾನವೀಯತೆಗೆ ಮಾರಕವಾಗಿರುವಾಗ ಎಲ್ಲಾ ಧರ್ಮಗಳ ಹೆಸರಿನಲ್ಲಿ ನಡೆಯುವ ಅಂತರ ಕ್ರೌರ್ಯಗಳನ್ನು ಎದುರಿಸಿ ನಿಲ್ಲುತ್ತಾನೆ ಕಬೀರ. ತನ್ನ ಈ ಸಂಗ್ರಾಮಕ್ಕೆ ವೈಚಾರಿಕತೆಯ ಆಯಾಮವನ್ನು ಕೊಡುತ್ತಾ ಅದೊಂದು ಆಂದೋಲನವಾಗಿ ಒಂದು ಪರಂಪರೆಯೇ ನಿರ್ಮಾಣಗೊಂಡಿದ್ದು ಇತಿಹಾಸ. ಇಂದಿನ ಸಂದರ್ಭದಲ್ಲಿ 'ಕಬೀರ'ನ ವೈಚಾರಿಕ ಪ್ರಸ್ತುತತೆಯು ನಾಟಕ ರೂಪದಲ್ಲಿ ಅನಾವರಣಗೊಂಡಿತು. ಕುಂದಾಪರದ ಯುವ ಗೆಳೆಯರ ವಿಶಿಷ್ಟ ಪ್ರಯತ್ನದ ಪ್ರತಿಫಲ ಈ ನಾಟಕ - ಆ ವರದಿಯಿಲ್ಲಿ.

ಕಲೋಪಾಸನೆಯ ಜೊತೆಗೆ ಪಟ್ಟಭದ್ರ ವ್ಯವಸ್ಥೆಯ ವಿದ್ರೋಹ, ಸಹಬಾಳ್ವೆಗೆ ಕುತ್ತು ತರುವ ಸಾಮಾಜಿಕ ಸಮಸ್ಯೆಗಳ ಮಂಡನೆ ಗಳಂತಹ ಮಹಾನ್ ಉದ್ದೇಶವಿಟ್ಟುಕೊಂಡಿರುವ ಭಾರತ ಪ್ರಜಾಸತ್ತಾತ್ಮಕ ಯುವಜನ ಫೆಡರೇಶನ್‌ನ ಯುವ ಕಲಾವಿದರು ಮತ್ತು ಕುಂದಾಪುರದ ಸಮುದಾಯದ ಸದಸ್ಯರು ಮಾರ್ಚ್ ಎರಡರಂದು ಕುಂದಾಪುರದ ವಡೇರಹೋಬಳಿ ಪ್ರಾಥಮಿಕ ಶಾಲೆಯಲ್ಲಿ ಹ.ವೆಂ. ವೇಣುಗೋಪಾಲರವರು ಕನ್ನಡಕ್ಕೆ ಅನುವಾದಿಸಿದ ಖ್ಯಾತ ಹಿಂದಿ ಸಾಹಿತಿ ಭೀಷ್ಮಸಹಾನಿ ಬರೆದ 'ಕಬೀರ' ನಾಟಕವನ್ನು ಪ್ರದರ್ಶಿಸಿದರು. ಖ್ಯಾತ ನಿರ್ದೇಶಕ ಬಿ.ವಿ.ಕಾರಂತರಿಂದ ನಿರ್ದೇಶಿಸಲ್ಪಟ್ಟ ಈ ನಾಟಕ ಪ್ರಯೋಗ ನಿಖರವಾದ ಚಿಂತನೆಯಿಂದ ತಯಾರಾದ ಚೊಕ್ಕಟವಾದ ಪ್ರದರ್ಶನವೆಂಬುವುದನ್ನು ಸಾಬೀತುಪಡಿಸಿತು.

ಈ ನಾಟಕ ಆರಂಭವಾಗುವುದು ಸಾಮಾಜಿಕ ಸ್ಥರದಲ್ಲಿ ಮಾನವ ಸಮಾನತೆಯನ್ನು ಒಪ್ಪಿಕೊಳ್ಳದ ಹಿಂದೂ ಮೂಲಭೂತವಾದಿಗಳು ಚಂಡಾಲ ಹುಡುಗನಿಗೆ ಹೊಡೆಧು ಹಿಂಸಿಸುವ ಮೂಲಕ ಮತ್ತು ಕಬೀರ ಬಂದು ಹುಡುಗನ ಪರವಾಗಿ ನಿಂತು ಪ್ರತಿಭಟಿಸುವ ಮೂಲಕ. ನಾಟಕದುದ್ದಕ್ಕೂ ಕೊತ್ವಾಲ, ಕಾಯಸ್ಥ ಬ್ರಾಹ್ಮಣ ಮತ್ತು ಮೌಲ್ವಿಗಳ ಅವೈಚಾರಿಕ ನಿಲುವುಗಳನ್ನು ಕಬೀರ ಟೀಕಿಸುತ್ತಾ ಹೋಗುತ್ತಾನೆ. ಎಲ್ಲ ಮೂಲಭೂತವಾದಿಗಳನ್ನು ಕಬೀರ ಎದುರು ಹಾಕಿಕೊಳ್ಳುತ್ತಾನೆ. ಕುರುಡನೊಬ್ಬ ಕಬೀರನ ಪದಹಾಡಿ ಭಿಕ್ಷೆ ಬೇಡಿದ್ದಕ್ಕೆ ಕೊತ್ವಾಲ ಚಾಟಿ ಏಟು ಹೊಡೆಸಿ ಕೊಲ್ಲಿಸುತ್ತಾನೆ. ಇಂತಹ ಸಂದಿಗ್ಧದಲ್ಲಿಯೇ ಕಬೀರ ಹಿಂದು ಮತ್ತು ಮುಸ್ಲಿಂ ಮತದವರ ಭಿನ್ನಜಾತಿಯ ಜನರನ್ನು ಸತ್ಸಂಗದಲ್ಲಿ ಹಿಡಿದು ಒಗ್ಗೂಡಿಸುತ್ತಾನೆ. ಅವರ ನೋವನ್ನು ನಿವಾರಿಸಿ, ಸ್ವಾಸ್ಥವನ್ನು ನಿರ್ಮಿಸಲು ಹೋರಾಡುತ್ತಾನೆ. ಕೊತ್ವಾಲನಿಂದ ಹತನಾದ ಕುರುಡನ ತಾಯಿಯೂ ಕೂಡ ಕಬೀರನ ಸತ್ಸಂಗ ಸೇರಿಕೊಳ್ಳುತ್ತಾಳೆ. ನಾಟಕದ ಅಂತ್ಯದಲ್ಲಿ ಸಿಕಂದರ್ ಲೋದಿಯೊಡನೆ ಕಬೀರನ ಮುಖಾಮುಖಿಯಾಗುತ್ತದೆ.

ಸಿಕಂದರ್ ಲೋದಿ ಕಬೀರನೊಂದಿಗೆ ಚರ್ಚೆ ನಡೆಸುತ್ತಿರುವ ಒಂದು ಹಂತದಲ್ಲಿ ಕಬೀರ ನಂಬಿದ ದೇವರನ್ನು "ನೆಲೆಯಿಲ್ಲದ ದೇವರು" ಎಂದು ಟೀಕಿಸುತ್ತಾನೆ. "ನನ್ನ ಹೃದಯದಲ್ಲಿ ನನ್ನ ದೇವರಿಗೆ ನೆಲೆ ಇದೆ. ನನ್ನ ದೇವರ ಕಣ್ಣಿನಲ್ಲಿ ಯಾರು ಹಿಂದೂನು ಅಲ್ಲ. ಮುಸಾಲ್ಮಾನನು ಅಲ್ಲ. ಅವನು ಕೇವಲ ಮನುಷ್ಯ. ನಾನು ದೇವರ ಪ್ರತಿರೂಪವನ್ನು ಪ್ರತಿಮನುಷ್ಯನ ಹೃದಯದಲ್ಲಿ ಕಾಣುತ್ತೇನೆ" ಎಂದು ಕಬೀರ ಪ್ರತಿಕ್ರಿಯಿಸುತ್ತಾನೆ. ಆಧ್ಯಾತ್ಮಿಕ ಸ್ತರದಲ್ಲಿ ಜೀವ ದೇವ ಸಮಾನತೆ ಯನ್ನೂ, ಐಕ್ಯವನ್ನೂ ಗ್ರಹಿಸಿಕೊಂಡು, ಸಾಮಾಜಿಕ ಸ್ತರದಲ್ಲಿ ಮಾತ್ರ ಅಸಮಾನತೆಯನ್ನು ನಿರಂತರವೂ ಪ್ರತಿಪಾದಿಸುತ್ತಾ ಬಂದ ಮತೀಯವಾದಿಗಳ ಹಿಂದು ಮತ ಒಂದು ಕಡೆಯಾದರೆ ನಿರಾಕಾರವನ್ನು ಉಗ್ರವಾಗಿ ಪ್ರತಿಪಾದಿಸಿದರೂ ಪ್ರಾರ್ಥನಾ ಮಂದಿರವಾಗಿ



ಮಸೀದಿಗಳನ್ನೂ ನಿರ್ಮಿಸುತ್ತಾ ಅವುಗಳ ನಿರ್ಮಾಣಕ್ಕಾಗಿ ಏನೆಲ್ಲಾ ದಾರಿಯನ್ನು ಅನುಸರಿಸುತ್ತಿರುವ ಇಸ್ಲಾಂ ಮೂಲಭೂತವಾದಿ ಗಳು ಇನ್ನೊಂದು ಕಡೆ. ಇವೆರಡರ ನಡುವೆ ಸೆಣಸಾಡಬೇಕಾಗುತ್ತದೆ ಕಬೀರ ಕಟ್ಟಿದ ಸತ್ಸಂಗ. ಆತನ ಸತ್ಸಂಗದಲ್ಲಿರುವವರು ಕ್ಷುದ್ರ ಜಾತಿ ವೈಷಮ್ಯವನ್ನು ಮಟ್ಟಿ ನಿಲ್ಲುತ್ತಾರೆ. ವೇದ ದೂರವಾಗಿ, ಸಂಸ್ಕೃತದ ಶಾಸ್ತ್ರಗಳಿಗೆ ಬಾಹಿರವಾಗಿ ಉಳಿದಿದ್ದ ಜನವರ್ಗದಿಂದ ಕೂಡಿದ ಸತ್ಸಂಗ ಭಗವಂತನ ಲೋಕಕ್ಕೆ ದಾಳಿಯಿಡುತ್ತದೆ. ಜಾತೀಯ ತಾರತಮ್ಯಗಳನ್ನು ಕಿತ್ತೊಗೆದ, ವರ್ಣಧರ್ಮಕ್ಕೆ ತಿಲಾಂಜಲಿ ಇತ್ತ ಕಬೀರರ ಸತ್ಸಂಗವನ್ನು ಸಂಪ್ರದಾಯಸ್ಥ ಹಿಂದೂ ಧರ್ಮ ಅರಗಿಸಿಕೊಳ್ಳಲು ಅಸಮರ್ಥವಾಗುತ್ತದೆ. ಅಸಮಾನತೆಯ ವ್ಯವಸ್ಥೆಯನ್ನೇ ಮಹಾಧರ್ಮವಾಗಿ ಮಾಡಿಕೊಂಡಿದ್ದ ಧರ್ಮಗಳ ಶುದ್ಧೀಕರಣ ಮಾಡಲು ಕಬೀರ ಮುಂದಾಗುತ್ತಾನೆ. ಕಬೀರನ ಹೋರಾಟ ಕೇವಲ ಸಾಮಾಜಿಕವಾದದ್ದೂ ಅಲ್ಲ, ಬೌದ್ಧಿಕವಾದದ್ದೂ ಅಲ್ಲ, ಧಾರ್ಮಿಕವಾದದ್ದೂ ಅಲ್ಲ. ಅದು ಆಧ್ಯಾತ್ಮಿಕ ಮೂಲವಾದ ಧಾರ್ಮಿಕ, ಸಾಮಾಜಿಕ ಸಂಗ್ರಾಮ. ಹೋರಾಟದ ಕಾವಿನಲ್ಲಿರುವಾಗ ಕಬೀರ ಗಡಿಪಾರಾದರೂ ಹೋರಾಟ ಅಲ್ಲಿಗೆ ನಿಲ್ಲದೆ ಸತ್ಸಂಗದ ಸದಸ್ಯರುಗಳಿಂದ ಅವದು ಮುಂದುವರಿಯುತ್ತದೆ. ಕಬೀರನ ಅಗಲಿಕೆಯಿಂದ ಸತ್ಸಂಗಿಗಳು ವಿಚಲಿತರಾಗದೆ ಹೋರಾಟವನ್ನು ಮುಂದುವರಿ ಸುತ್ತಾರೆ ಎಂಬುದೆ ಈ ನಾಟಕದ ಧ್ವನಿ. ಸಂಕೀರ್ಣ ಸಂದಿಗ್ಧ ಸ್ಥಿತಿಯಲ್ಲಿರುವ ಭಾರತೀಯ ಸಮಾಜವನ್ನು ಅಪಾಯವಿಲ್ಲದಂತೆ ಯಾನ ಮಾಡಿಸುವ ತೀರ್ಥಂಕರ ಭಾವಗಳು ನಮಗಿಂದು ಬೇಕಾಗಿವೆ. ಕಬೀರನಂತವರು ನಮ್ಮ ಇಂದಿನ ಅಗತ್ಯವನ್ನು ಪೂರೈಸಲು ಸಂಪನ್ನರಾಗಿದ್ದಾರೆ.

ನಾಟಕದ ಕೇಂದ್ರ ಪಾತ್ರ 'ಕಬೀರ'ನಾಗಿ ಶ್ರೀ ಅಶ್ವಥಕುಮಾರರು ಉತ್ತಮ ಅಭಿನಯ ನೀಡಿದರು. ಕೊತ್ವಾಲ್ (ಪ್ರಕಾಶ್ ಕಾವ್ರಾಡಿ), ಕಾಯಸ್ಥ (ಪ್ರಭಾಕರ ನೇರಳಕಟ್ಟೆ) ಸಿಕಂದರ್ ಲೋದಿ (ಶಿವಾನಂದ), ಮೌಲ್ವಿ (ಕೃಷ್ಣಾನಂದ ಶೆಣೈ), ಬಿಕ್ಷುಕ (ರವಿ ವಿ.ಎಂ), ಕುರುಡವ್ವ (ಸುಜಾತ ಕೆ.)ನ ಪಾತ್ರಗಳು ಮತ್ತು ಇತರ ಪಾತ್ರಗಳೂ ಪ್ರೌಢ ಅಭಿನಯ ನೀಡಿದವು. ಸರಳ ರಂಗಪರಿಕರಗಳು, ಬೆಳಕು, ರಂಗಸಜ್ಜಿಕೆ, ಅಭಿನಯ, ರಂಗಚಲನೆ ಎಲ್ಲವೂ ಅತ್ಯುತ್ತಮವಾಗಿದ್ದವು. ನಾಟಕದುದ್ದಕ್ಕೂ ಬಳಸಿಕೊಂಡ ಕಬೀರನ ಪದಗಳು ನಾಟಕದ ಆಶಯಕ್ಕೆ ಪೂರಕವಾಗಿದ್ದವು.

- ರಾಜೀವ ನಾಯ್ಕ ಕುಂದಾಪುರ

ಕ್ರಿಕೆಟ್ ರಾಷ್ಟ್ರೀಯತೆ : ಗ್ರಾಹಕತೆ ಮತ್ತು ಹಿಂದುತ್ವ

ಕೆಲವು NRI (ಅನಿವಾಸಿ ಭಾರತೀಯರು) ಯುವಕರು ಕ್ರಿಕೆಟ್ ನಮ್ಮ ಧರ್ಮ ಮತ್ತು ಸಚಿನ್ ನಮ್ಮ ದೇವರು" ಎಂದು ಬರೆದಿದ್ದ ಬಿತ್ತಿಪತ್ರಗಳನ್ನು ಹಿಡಿದುಕೊಂಡಿದ್ದ ಚಿತ್ರಗಳನ್ನು ನಮ್ಮ ರಾಷ್ಟ್ರೀಯ ದಿನಪತ್ರಿಕೆಗಳು ಪ್ರಕಟಿಸಿದ್ದು. ನಮ್ಮಲ್ಲಿ ಕೆಲವರಿಗಾದರೂ ನೆನಪಿರಬಹುದು. ಇದು ಸಹಜವಾಗಿ ಯುವಕರಲ್ಲಿ ತಮ್ಮಿಷ್ಟದ ಸಂಗೀತ ಕೇಳುವಾಗ, ಯಾಕೋ ಅವರ ನಾಯಕನನ್ನು ಕಂಡಾಗ ಸಹಜವಾಗಿ ಮೂಡಿರಬಹುದಾದ ಉತ್ಸಾಹ ಎಂದು ನಮ್ಮಲ್ಲಿ ಕೆಲವರಾದರೂ ಭಾವಿಸಿರಬಹುದು. ಅಂತಹದ್ದು ಕೂಡ ತೀರ ಮುಗ್ಧತೆಯಿಂದೇನೂ ಬಂದಿರುವುದಿಲ್ಲ. ಆದರೆ ಈಗ ಅಂತಹ ಬ್ಯಾನರ್ ಹಿಡಿದು ಯಾರಾದರೂ ಓಡಾಡಿದರೆ ಅವರು ಕೇಸರಿ ಪಡೆಯಂತೆ ಕಾಣಿಸುತ್ತಾರೆ. ಇದು ಇತ್ತೀಚೆಗೆ ಪಾಕಿಸ್ತಾನದ ವಿರುದ್ಧ ಭಾರತ ಆಡುವಾಗ ಅತ್ಯಂತ ಸ್ಪಷ್ಟವಾಗಿ ಗೋಚರಿಸಿತು.

ಪಾಕಿಸ್ತಾನದ ವಿರುದ್ಧ ಪಂದ್ಯ ನಡೆಯುವಾಗ ಎಲ್ಲಾ ರೀತಿಯ ಗ್ರಾಹಕತೆ, ಹಿಂದುತ್ವದ ಹೊಲಸುತನ ಪ್ರದರ್ಶನಗೊಂಡವು. ಹಣೆಗೆ ಖಾವಿ ಪಟ್ಟಿಕಟ್ಟಿಕೊಂಡಿದ್ದ ಡಜನ್‌ಗಟ್ಟಲೆ ಜನರು ತಿರುಗುತ್ತಿದ್ದರು, ಸಾದುಗಳಂತೆ ವೇಷ ತೊಟ್ಟಿದ್ದವರು ಭಾರತ ತಂಡವನ್ನು ಹುರಿದುಂಬಿಸುತ್ತಿದ್ದರು. ಅದರ ಜೊತೆಯಲ್ಲಿ ವಿರೋಧಿ ತಂಡದ ಬೆಂಬಲಿಗರಿಗೆ ಕೀಟಲೆ ಮಾಡುವುದು, ಹಂಗಿಸುವುದು, ಅವರಿಗೆ ಬೀರು ಬಾಟಲ್‌ಗಳನ್ನು ತೋರಿಸುವುದು ನಡೆಯುತ್ತಿತ್ತು. ಬಾಬಾ ಅಮರನಾಥ ಮಂಡಲನ ಭಕ್ತಾದಿಗಳೆನಿಸಿಕೊಂಡವರಂತೆ ಕೆಲವರು ಖಾಲಿ ವೇಷ ಧರಿಸಿ ಓಡಾಡುತ್ತಿದ್ದರೆ, ತ್ರಿವರ್ಣದ ಉಡುಗೆ ತೊಟ್ಟಿದ್ದ ಕೆಲವರು ಅದರಲ್ಲಿರುವ ಬಿಳಿಯ ಜಾಗದಲ್ಲಿ ಅಶೋಕ ಸಿಂಘಾಲ್ ಜಿಂದಾಬಾದ್ ಎಂದು ಘೋಷಣೆ ಬರೆದಿದ್ದರು. ಬಾಳಾಠಾಕ್ರೆಯವರ ಪ್ಲೇಕಾರ್ಡುಗಳನ್ನಿಡಿದಿದ್ದವರು, ಹೆಂಡ ಕುಡಿದವರಂತೆ ಘೋಷಣೆಗಳನ್ನು ಕೂಗುತ್ತಿದ್ದರು.



ಪಂದ್ಯದ ನಂತರದ ಸ್ವಲ್ಪ ಹೊತ್ತಿನಲ್ಲಿ ಅಹಮದಾಬಾದ್, ಗೋರಖ್‌ಪುರ, ಬೆಂಗಳೂರಿನಲ್ಲಿ ಮುಸಲ್ಮಾನರ ಮೇಲೆ ದಾಳಿಗಳು ನಡೆದವು. ಸರ್ಕಾರದಲ್ಲಿರುವ ನಮ್ಮ ಖಾವಿ ಮುಖಂಡರುಗಳು ಯುದ್ಧವನ್ನೇ ಗೆದ್ದವರಂತೆ ಹೇಳಿಕೆಗಳನ್ನು ಕೊಟ್ಟರು. ಲಸ್ವಂತ್ ಸಿಂಗ್‌ರವರಿಗೆ ವಿಶ್ವಕಪ್‌ನ್ನೇ ಗೆದ್ದಂತೆ ಅನ್ನಿಸಿಬಿಟ್ಟಿತು. ಅಥವಾ ಪಾಕಿಸ್ತಾನವನ್ನು ನಾವು ಸೋಲಿಸುತ್ತಾ ಇರುವವರೆಗೆ ವಿಶ್ವಕಪ್ ಗೆಲ್ಲುವುದೇ ಮುಖ್ಯವೇ ಅಲ್ಲ ಎಂಬಂತೆ ವರ್ತಿಸಿದರು.

ವಿಶ್ವಕಪ್ ಪಂದ್ಯಾವಳಿ ಗಳಲ್ಲಿ ಆಟಗಾರರು ಗಳಿಸಿದ ಹಣಕ್ಕೆ ಆದಾಯ ತೆರಿಗೆಯಿಂದ ವಿನಾಯತಿ ನೀಡಲಾಯಿತು. 'ಭಾರತ ನಿಮಗೆ ಋಣಿ ಯಾಗಿದೆ' ಎಂಬ ಸಂದೇಶಗಳನ್ನು ಕಳುಹಿಸಿದರು. ಇದೆಲ್ಲವೂ ಮಾಧ್ಯಮಗಳಲ್ಲಿ ತಮ್ಮ ಜಾಹಿರಾತುಗಳಲ್ಲಿ ಲಾಭಕ್ಕಾಗಿ ಈ ಪಂದ್ಯಗಳನ್ನು ಒಂದು ಯುದ್ಧದಂತೆ ಚಿತ್ರಿಸಿ, ಹಿಂಸೆಯನ್ನು ವೈಭವೀಕರಿಸಿ, ಭಾರತದ ಗೆಲುವಿಗೆ ಯಜ್ಞ, ದೇವಸ್ಥಾನಗಳಲ್ಲಿ ಪ್ರಾರ್ಥನೆ ಸಲ್ಲಿಸುವ ಚಿತ್ರಗಳನ್ನು ಪ್ರಕಟಿಸಿದ ಬೆನ್ನಲ್ಲೇ ನಡೆದ ಘಟನೆಗಳು ವಿರೋಧಿ ಮಾಧ್ಯಮಗಳೂ ಇದೊಂದು 'ವಿಶ್ವಕಪ್ ಯುದ್ಧ' ಎಂದೇ ಬರೆದವು. ಹಿಂದಿನ ಕೆಟ್ಟ ಪ್ರದರ್ಶನದ ನಂತರ ಆಟಗಾರರ ಮನೆಗಳ ಮೇಲೆ ದಾಳಿಗಳು ನಡೆದ ನಂತರ ಆಟಗಾರರು ಜನರಿಗೆ ಮನವಿ ಮಾಡಿದರು. ಆದರೆ ಪಾಕಿಸ್ತಾನದ ವಿರುದ್ಧ ಗೆದ್ದ ನಂತರ ಅವರೆಲ್ಲ ಹೀರೋಗಳಾದರು.

ಹಿಂದುತ್ವ ಮತ್ತು ಗ್ರಾಹಕ ಸಂಸ್ಕೃತಿ ಎರಡೂ ಸೇರಿ ಕ್ರಿಕೆಟ್‌ನ್ನು ಯುದ್ಧವೆಂಬಂತೆ ಚಿತ್ರಿಸಿ ತಾವು ಲಾಭ ಮಾಡಿಕೊಳ್ಳಲು ಪ್ರಯತ್ನಿಸಿದರು. ಕ್ರೀಡಾ ಕಾಲಮುಗಳಲ್ಲಿ ಯುದ್ಧ, ಹೋರಾಟ, ಧರ್ಮಯುದ್ಧ, ಕೊಲ್ಲು ಎಂಬ ಅನೇಕ ಶಬ್ದಗಳು ವ್ಯಾಪಕವಾಗಿ ಬಳಕೆಯಾದವು. ಕೆಲವು ಮಾಧ್ಯಮಗಳಂತೂ "ಇದು ಕೇವಲ ಭಾರತ ಪಾಕಿಸ್ತಾನಗಳ ನಡುವಿನ ಪಂದ್ಯವಲ್ಲ, ಇದೊಂದು ಯುದ್ಧ ಎಂದು ಬರೆದವು. ಆದರೆ ಸಚಿನ್‌ನಂತಹ ಆಟಗಾರ ಕೂಡ 'ವಿಶ್ವಕಪ್‌ನಲ್ಲಿ ನಮಗಿದು ಪಾಕ್ ವಿರುದ್ಧ ನಾಲ್ಕನೇ ಗೆಲುವು ನಮಗಿದಕ್ಕಿಂತ ಮತ್ತೇನು ಬೇಕು ಎಂದು ಹೇಳಿದ. ಒಂದು ವೇಳೆ ಭಾರತ ಸೋತಿದ್ದರೆ.........?

- ನಳಿನಿ ತನೇಜಾ

PRB DECR 319-79/79 AIKYARANGA WEEKLY Reg. No. 17015/64 CPM(G)/KA/BGS-119/2003-05
ಭಾರತ ಕಮ್ಯುನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ), ಕರ್ನಾಟಕ ರಾಜ್ಯ ಸಮಿತಿಯ ಪರವಾಗಿ ಮುದ್ರಣ ಮತ್ತು ಪ್ರಕಾಶನ: ಜಿ.ಎನ್.ನಾಗರಾಜ್
ಸಂಪಾದಕರು: ಎಸ್.ವೈ.ಗುರುಶಾಂತ್ ಸಂಪಾದಕೀಯ ಕಛೇರಿ: ನಂ. 12, 1ನೇ ಅಡ್ಡರಸ್ತೆ, ಸಂಪಂಗಿರಾಮನಗರ, ಬೆಂಗಳೂರು - 27 ಫೋನ್ ನಂ. 2236462,
ಮುದ್ರಣ: ಹನಿ ಪ್ರಿಂಟರ್ಸ್, ಕ್ವೀನ್ ರಸ್ತೆ, ಬೆಂಗಳೂರು.
Printed & Published by Communist Party of India(Marxist), Karnataka State Committee. Editor : S.Y.GURUSHANTH